ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 2 ಗುರುವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 256 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ದುರ್ಯೋಧನನಿಗೆ ತನ್ನ ಸೇನಾ ಸಾಮರ್ಥ್ಯ ಬಗ್ಗೆ ಅನುಮಾನ

ಪಲಿಮಾರು ಶ್ರೀವಿದ್ಯಾಧೀಶ ತೀರ್ಥರ ವಿವರಣೆ

ಮೈಸೂರು, ಜ.1(ಎಸ್‌ಪಿಎನ್)– ಕುರುಕ್ಷೇತ್ರ ಯುದ್ಧದಲ್ಲಿ ದುರ್ಯೋಧನ ತನ್ನ ಸೇನಾ ಸಾಮರ್ಥ್ಯದಲ್ಲಿ ಕೊಂಚ ಅನುಮಾನ ಹೊಂದಿದ್ದ ಎಂದು ಉಡುಪಿಯ ಪಲಿಮಾರು ಮಠದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು ಅಭಿಪ್ರಾಯಪಟ್ಟರು.



ಶ್ರೀ ವಿದ್ಯಾಧೀಶ ತೀರ್ಥರು

ಮೈಸೂರು ಟಿ.ಕೆ. ಬಡಾವಣೆಯ ಶ್ರೀಕೃಷ್ಣಧಾಮದ ಜ್ಞಾನಯಜ್ಞ ಸಂಭ್ರಮದ ಸಮಾರೋಪದ 'ಶ್ರೀಮನ್ಮಹಾ ಭಾರತದಲ್ಲಿ ಭೀಷ್ಮ ಪರ್ವ' ಪ್ರವಚನದಲ್ಲಿ ಅವರು ತಿಳಿಸಿದರು.

ಪಾಂಡವರು ತಮ್ಮ ಸಾಮರ್ಥ್ಯದ ಜೊತೆಗೆ ಸೇನಾ ಸಾಮರ್ಥ್ಯದಲ್ಲೂ ಒಮ್ಮತದ ಅಭಿಪ್ರಾಯ ಹೊಂದಿ, ಕುರುಕ್ಷೇತ್ರ ಯುದ್ಧಕ್ಕೆ ಅಣಿಯಾದರು. ಆದರೆ, ಕೌರವರಲ್ಲಿ ದುರ್ಯೋಧನ ಬಿಟ್ಟರೆ, ದ್ರೋಣಾಚಾರ್ಯ, ಭೀಷ್ಮ ಸೇರಿದಂತೆ ಇತರರು ಪಾಂಡವರೊಂದಿಗಿನ ಯುದ್ಧಕ್ಕೆ ಸ್ವಲ್ಪ ಮಾನಸಿಕವಾಗಿ ಹಿಂದೇಟು ಹಾಕುತ್ತಿದ್ದ ಪ್ರಸಂಗವನ್ನು ವಿವರಿಸಿದರು.

ಪಾಂಡವರಲ್ಲಿ ಭೀಮನೊಬ್ಬನನ್ನು ಬಿಟ್ಟು ಮಿಕ್ಕವರನ್ನು ಸೋಲಿಸುವುದಾಗಿ ದುರ್ಯೋಧನ ಆತ್ಮಸ್ಥೈರ್ಯ ಹೊಂದಿದ್ದ. ಆದರೆ, ಭೀಮನ ಯುದ್ಧೋನ್ಮಾದ ಕಂಡು ಆತನಲ್ಲಿ ಅಂಜಿಕೆಯಿದ್ದರೂ ತೋರ್ಪಡಿಸಿಕೊಳ್ಳದೆ ಕುರುಕ್ಷೇತ್ರ ಯುದ್ಧಕ್ಕೆ ತನ್ನವರನ್ನು ಮತ್ತು ಸೇನೆಯನ್ನು ಅಣಿಗೊಳಿಸುವ ಪ್ರಸಂಗವನ್ನು ಶ್ರೀ ವಿದ್ಯಾಧೀಶ ತೀರ್ಥರು ವಿವರಿಸಿದರು.

ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ಅಶೋಕಪುರಂನಲ್ಲಿರುವ ಬುದ್ಧ ವಿಹಾರದಲ್ಲಿ ಮೈಸೂರು ಜಿಲ್ಲಾ ಛಲವಾದಿ ಕ್ಷೇಮಾಭಿವೃದ್ಧಿ ಸಂಘದ ನೂತನ ವರ್ಷದ ಕ್ಯಾಲೆಂಡರ್ ಮಾಜಿ ಮೇಯರ್ ಪುರುಷೋತ್ತಮ್ ಬಿಡುಗಡೆ ಮಾಡಿದರು. ಈ ವೇಳೆ ಪುಟ್ಟ ನಂಜಯ್ಯ, ಚಿದರವಳ್ಳಿ ಮಹದೇವಸ್ವಾಮಿ, ಛಲವಾದಿಗಳ ಕ್ಷೇಮಾಭಿವೃದ್ಧಿ ಸಂಘದ ನಾಡನಹಳ್ಳಿ ಪೇಪರ್ ಮಂಜು, ಡಾ.ಬಸವರಾಜು, ಅಂಬರೀಷ್, ಲೋಕೇಶ್ವರ, ರಂಗಸ್ವಾಮಿ, ನಾಗರಾಜು, ಮಹಾದೇವಯ್ಯ ಪ್ರದೀಪ್‌ಕುಮಾರ್, ಬಸವರಾಜು ಇದ್ದರು.

ನಾಳೆ 'ನನ್ನ ಹಾಡು ನನ್ನದು...' ಚಲನಚಿತ್ರ ಗೀತೆಗಳ ಗಾಯನ


ಮೈಸೂರು, ಜ.1(ಎಂಟಿವೈ)– ಹೊಸ ವರ್ಷದ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಭಾಂಗಣದಲ್ಲಿ ಜ.3ರಂದು ಸಂಜೆ 4 ಗಂಟೆಯಿಂದ 'ನನ್ನ ಹಾಡು ನನ್ನದು..., ನನ್ನ ರಾಗ ನನ್ನದು' ಬಹು ಭಾಷಾ ಜನಪ್ರಿಯ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜನ ಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನ ಚೈತನ್ಯ ಫೌಂಡೇಷನ್ ಕಳೆದ ಕೆಲವು ವರ್ಷಗಳಿಂದ ಹವ್ಯಾಸಿ ಗಾಯಕರಿಂದ ಸಂಗೀತ ಸಂಜೆ ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ ಮೈಸೂರಿನ ಜನರಿಗೆ ಮನರಂಜನೆ ನೀಡುತ್ತಾ ಬಂದಿದೆ. ವಿವಿಧ ಶೀರ್ಷಿಕೆಯಲ್ಲಿ ಜನಪ್ರಿಯ ಚಲನಚಿತ್ರಗಳ ಸದಭಿರುಚಿಯ ಗೀತೆಗಳ ಗಾಯನ ಕಾರ್ಯಕ್ರಮ ನಡೆಸುತ್ತಾ ಬಂದಿದ್ದೇವೆ. ಇದೀಗ ಕನ್ನಡ, ಹಿಂದಿ, ತೆಲುಗು ಹಾಗೂ ತಮಿಳು ಭಾಷೆಯ ಸುಪ್ರಸಿದ್ಧ ಚಲನಚಿತ್ರಗಳ ಗೀತೆಗಳ ಗಾಯನ ಕಾರ್ಯಕ್ರಮವನ್ನು 'ನನ್ನ ಹಾಡು ನನ್ನದು..., ನನ್ನ ರಾಗ ನನ್ನದು' ಶೀರ್ಷಿಕೆಯನ್ನು ಆಯೋಜಿಸಲಾಗಿದೆ ಎಂದರು.

ನಾದಬ್ರಹ್ಮ ಸಂಗೀತ ಸಭಾದಲ್ಲಿ ಜ.3ರಂದು ಸಂಜೆ 4 ಗಂಟೆಗೆ ಆರಂಭವಾಗುವ ಗಾಯನ ಕಾರ್ಯಕ್ರಮ ರಾತ್ರಿ 9 ಗಂಟೆವರೆಗೂ ನಡೆಯಲಿದೆ. ಹೆಸರಾಂತ ಗಾಯಕರಾದ ದಿ.ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಕಿಶೋರ್‌ಕುಮಾರ್, ಕುಮಾರ್ ಸಾನು ಸೇರಿದಂತೆ ಇನ್ನಿತರ ಹಿನ್ನೆಲೆ ಗಾಯಕರು ಹಾಡಿರುವ ಗೀತೆಗಳನ್ನು ಹವ್ಯಾಸಿ ಗಾಯಕರಾದ ಆರ್.ಲಕ್ಷ್ಮಣ್, ಎಸ್.ಅಮರ್, ಅಶ್ವಿನ್ ಅತ್ರಿ, ಡಾ.ಎಲ್.ಸುಮ, ಡಾ.ಟಿ.ಕೆ. ಪ್ರಕಾಶ್, ಡಾ.ಎಂ.ಓ.ಮನು, ಚೇತನ್, ಶ್ಯಾಮ್‌ಸುಂದರ್, ನಾಗೇಂದ್ರ, ಶೇಷಾದ್ರಿ, ಬಿ.ಸೌಮ್ಯ, ಎಸ್.ವಿ.ವೀಣಾ, ಲೋಕೇಶ್, ತನುಜ, ಡಾ.ಎಸ್.ಆರ್.ತಿರುಮಲೇಶ್, ರಾಜೇಶ್ ಕಾಲ್ರೋ, ವಿಜಯ್ ಆನಂದ್ ಸೇರಿದಂತೆ ಇನ್ನಿತರರು ಹಾಡಲಿದ್ದಾರೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಎಸ್.ಅಮರ್, ಶೇಷಾದ್ರಿ, ಪ್ರವೀಣ್, ಜೈ ಭುವನೇಶ್ವರಿ ಟ್ರಸ್ಟ್ ಅಧ್ಯಕ್ಷ ತಿಪ್ಪಯ್ಯ ಇದ್ದರು.

ಜ.4ಕ್ಕೆ ಕರ್ನಾಟಕಕ್ಕೆ ದಲೈಲಾಮಾ ಆಗಮನ: ಬೈಲಗುಪ್ಪೆಯಲ್ಲಿ 1 ತಿಂಗಳು ವಾಸ್ತವ್ಯ

ಬೆಂಗಳೂರು, ಜ.1– ಟಿಬೆಟಿಯನ್ ಧರ್ಮಗುರು 14ನೇ ದಲೈಲಾಮಾ ಅವರು ಜ.4ರಂದು ಬೆಂಗಳೂರಿಗೆ ಆಗಮಿಸುತ್ತಿದ್ದು, ಮರುದಿನ ಮೈಸೂರು ಜಿಲ್ಲೆಯ ಬೈಲಕುಪ್ಪೆಗೆ ತೆರಳಲಿದ್ದಾರೆ.



ಈ ವಿಷಯವನ್ನು ಕೇಂದ್ರ ಟಿಬೆಟಿಯನ್ ಆಡಳಿತ (ಸಿಟಿಎ) ದಕ್ಷಿಣ ವಲಯದ ಮುಖ್ಯ ಪ್ರತಿನಿಧಿ ಅಧಿಕಾರಿ ಜಿಗ್ಮೆ ತುಲ್ಟ್ರಿಮ್ ಖಚಿತ ಪಡಿಸಿದ್ದಾರೆ. ದಲೈಲಾಮಾ ಅವರು ಜ.4 ರಂದು ಬೆಂಗಳೂರಿಗೆ ಆಗಮಿಸಲಿದ್ದು ಹೊರಡುವ ಮೊದಲು ಒಂದು ದಿನ ಬೆಂಗಳೂರಿನಲ್ಲಿ ತಂಗಲಿದ್ದಾರೆ. ಬೈಲಕುಪ್ಪೆಯಲ್ಲಿ ಅವರು ಒಂದು ತಿಂಗಳು ತಂಗಲು ನಿರ್ಧರಿಸಲಾಗಿದೆ.

ದಲೈಲಾಮಾ ಅವರು ಕೊನೆಯ ಬಾರಿಗೆ 2017ರಲ್ಲಿ ಕರ್ನಾಟಕಕ್ಕೆ ಭೇಟಿ ನೀಡಿದ್ದರು. ಹಿಮಾಚಲ ಪ್ರದೇಶದ ಧರ್ಮಶಾಲಾ ನಂತರ ಬೈಲಕುಪ್ಪೆ ವಿಶ್ವದ ಎರಡನೇ ಅತಿದೊಡ್ಡ ಟಿಬೆಟಿಯನ್ ವಸಾಹತು ಆಗಿದೆ. ಇದು ಟಿಬೆಟಿಯನ್ ಸರ್ಕಾರದ ಪ್ರಧಾನ ಕಛೇರಿಯೂ ಆಗಿದೆ.

ಧರ್ಮಶಾಲಾದಲ್ಲಿ ಚಳಿಗಾಲವು ತುಂಬಾ ತೀವ್ರವಾಗಿರುತ್ತದೆ. ಹೀಗಾಗಿ ಒಂದು ತಿಂಗಳ ಕಾಲ ವಿಶ್ರಾಂತಿ ಪಡೆಯಲು ಮತ್ತು ಚೇತರಿಸಿಕೊಳ್ಳಲು ದಲೈಲಾಮಾ ಕರ್ನಾಟಕಕ್ಕೆ ಬರುತ್ತಿದ್ದಾರೆ. ಅವರು ಬೈಲಕುಪ್ಪೆಯ ತಾಶಿ ಲುನ್ಪೋ ಮಠದಲ್ಲಿ ಕೆಲವು ಬೋಧನೆಗಳನ್ನು ನಡೆಸಬಹುದು ಎಂದು ತುಲ್ಟ್ರಿಮ್ ಹೇಳಿದರು.

ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ



ಭಾರತೀಯ ರಿಸರ್ವ್ ಬ್ಯಾಂಕ್ ನೋಟು ಮುದ್ರಣ ಬ್ರಾಹ್ಮಣ ನೌಕರರ ಸಂಘ ವೇದಮಾತೆ ಶ್ರೀ ಗಾಯತ್ರಿ ವೃಂದದ ಕ್ಯಾಲೆಂಡರ್ 2025 ರ ಮಾಲಿಕೆಯನ್ನು ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಸಂಸ್ಥಾಪಕರೂ, ಹಿರಿಯ ಸಂಸ್ಕೃತ ವಿದ್ವಾಂಸರಾದ ಡಾ. ಶ್ರೀ ಭಾಷ್ಯಂ ಸ್ವಾಮೀಜಿಯವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ದೇವಸ್ಥಾನದ ವ್ಯವಸ್ಥಾಪಕ ಶ್ರೀನಿವಾಸನ್ ಹಾಗೂ ವೃಂದದ ಪದಾಧಿಕಾರಿಗಳಾದ ಮುರಳಿ, ದಿನೇಶ್, ಮಧುಸೂದನ್, ವಾಸು, ಗುರುನಾಥ್ ಉಪಸ್ಥಿತರಿದ್ದರು.

ಶ್ರೀಮತಿ ಪುಟ್ಟಮ್ಮ ನಿಧನ



ಮೈಸೂರು: ಕೆ.ಆರ್.ನಗರ ತಾಲೂಕಿನ ಹೆಬ್ಬೂರು ಗ್ರಾಮದ ನಿವಾಸಿ ದಿ. ಹೆಚ್.ಎಸ್.ಕರೀಗೌಡರ ಪತ್ನಿ ಶ್ರೀಮತಿ ಪುಟ್ಟಮ್ಮ ಬುಧವಾರ ನಿಧನರಾದರು. ಮೃತರು ಪುತ್ರರಾದ ಹೆಚ್.ಕೆ.ಮಂಜುನಾಥ್, ಹೆಚ್.ಕೆ. ದಿವಾಕರ್, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜ.2) ಮಧ್ಯಾಹ್ನ 12 ಗಂಟೆಗೆ ಹೆಬ್ಬೂರಿನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರೊ.ಭಾಷ್ಯಂ ಸ್ವಾಮೀಜಿಗೆ 'ಕನ್ನಡಾಂಬೆ ರತ್ನ' ರಾಜ್ಯ ಪ್ರಶಸ್ತಿ ಪ್ರದಾನ

ಪ್ರೊ.ಭಾಷ್ಯಂ ಸ್ವಾಮೀಜಿ ಕನ್ನಡ ನಾಡಿನ ಜ್ಞಾನ ಕಳಸ: ಸಾಹಿತಿ ಬನ್ನೂರು ಕೆ.ರಾಜು ಬಣ್ಣನೆ



ಮೈಸೂರಿನ ಹೂಟಗಳ್ಳಿಯ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಾಡೋಜ ಡಾ.ಪ್ರೊ.ಭಾಷ್ಯಂ ಸ್ವಾಮೀಜಿ ಅವರಿಗೆ ಸಾಹಿತಿ ಬನ್ನೂರು ಕೆ.ರಾಜು 'ಕನ್ನಡಾಂಬೆ ರತ್ನ ರಾಜ್ಯ ಪ್ರಶಸ್ತಿ' ಪ್ರದಾನ ಮಾಡಿದರು.

ಮೈಸೂರು, ಜ.1(ಜಿಎ)–ನಾಡೋಜ ಪ್ರೊ.ಭಾಷ್ಯಂ ಸ್ವಾಮೀಜಿ ಕನ್ನಡ ನಾಡಿನ ಜ್ಞಾನ ಕಳಸದಂತಿರುವ ವಿದ್ವತ್ತಿನ ಮೇರು ಪರ್ವತ ಎಂದು ಸಾಹಿತಿ ಬನ್ನೂರು ಕೆ.ರಾಜು ಇಂದಿಲ್ಲಿ ಬಣ್ಣಿಸಿದರು.

ಮೈಸೂರಿನ ಹೂಟಗಳ್ಳಿಯ ಕನ್ನಡಾಂಬೆ ರಕ್ಷಣಾ ವೇದಿಕೆಯ ವತಿಯಿಂದ ವಿಜಯನಗರದ ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯದ ಆವರಣದಲ್ಲಿ ಆಯೋಜಿಸಿದ್ದ ಪ್ರತಿಷ್ಠಿತ 'ಕನ್ನಡಾಂಬೆ ರತ್ನ ರಾಜ್ಯ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಕನ್ನಡ ಕುಲದೇವತೆ ಶ್ರೀ ಭುವನೇಶ್ವರಿ ಹೆಸರಿನಲ್ಲಿ ಪ್ರೊ.ಭಾಷ್ಯಂ ಸ್ವಾಮೀಜಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಭಾಷ್ಯಂ ಸ್ವಾಮೀಜಿಯವರು ತಮ್ಮ ಜ್ಞಾನ ಕೋಶದ ಮೂಲಕ ಸರ್ವ ಕ್ಷೇತ್ರಗಳಲ್ಲೂ ತಮ್ಮ ಛಾಪನ್ನು ಮೂಡಿಸಿದ್ದು ಸಾವಿರಾರು ಶಿಷ್ಯಕೋಟಿಯನ್ನು ಸೃಷ್ಟಿಸಿರುವ ಸಮಾಜಮುಖಿ ಸಂತರು. 'ಇವನಾರವ ಇವನಾರವ ನೆನ್ನದೇ ಇವ ನಮ್ಮವ ನಮ್ಮವನೆಂಬ' ಭಾವ ತುಂಬಿದ ಮಾನವ ಧರ್ಮದ ಭಾವೈಕ್ಯಚೇತನ ಭಾಷ್ಯಂ ಸ್ವಾಮೀಜಿ. ಬಲಗೈಲಿ ಕೊಟ್ಟಿದ್ದು ಎಡಗೈಗೆ ಗೊತ್ತಾಗದಂತೆ ಅಶಕ್ತರಿಗೆ, ಅಸಹಾಯಕರಿಗೆ, ಒಳಿತು ಮಾಡುವ ಒಳ್ಳೆಯ ಸಮಾಜ ಸೇವಕರಿಗೆ, ಹೋರಾಟಗಾರರಿಗೆ ಹೀಗೆ ಬಹುತೇಕ ನಾಡಿನ ವಿವಿಧ ಕ್ಷೇತ್ರಗಳ ಮಂದಿಗೆ ಸದಾ ತಮ್ಮ ಕೈಲಾದ ನೆರವನ್ನು ನೀಡುತ್ತಾ ಬಂದಿರುವ ಕರ್ಣನ ಗುಣ ಉಳ್ಳವರು ಎಂದರು.

ಮೂಲತಃ ಸಂಸ್ಕೃತ ವಿದ್ವಾಂಸರಾದ ಇವರು ಸಂಸ್ಕೃತದಿಂದ ಕನ್ನಡದ ಸಿರಿ ಸಂಪತ್ತನ್ನು ಹೆಚ್ಚಿಸಿರುವ ಸ್ವಾಮೀಜಿಯವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದರೆ ಕನ್ನಡದ ಮಹಾ ಸಾಹಿತ್ಯ ಸಂಪತ್ತನ್ನು ಸಂಸ್ಕೃತಕ್ಕೂ ಸಂಸ್ಕೃತದಿಂದ ಕನ್ನಡಕ್ಕೂ ಅನುವಾದಿಸುವ ಕೈಂಕರ್ಯವನ್ನು ಮಾಡಿ ಉಭಯ ಭಾಷೆಗಳಿಗೂ ಕೀರ್ತಿ ತರುತ್ತಿದ್ದರು. ಆದರೆ ಇಂತಹ ಜ್ಞಾನವಾರಿಧಿಯನ್ನು ಸಂಸ್ಕೃತ ವಿವಿಗೆ ಕುಲಪತಿಗಳಾಗಿ ಯಾವ ಸರ್ಕಾರಗಳೂ ಮಾಡಲಿಲ್ಲವೆಂದು ಬೇಸರ ವ್ಯಕ್ತಪಡಿಸಿದ ಅವರು, ಈಗಲಾದರೂ ನಮ್ಮ ಘನ ಸರ್ಕಾರ ಮತ್ತು ಸಮಾಜ ಇವರ ಸೇವೆಯನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ ಎಂದು ತಿಳಿಸಿದರು.

ಹೃದಯವಂತಿಕೆಯ ಸೇವಾ ದೀಕ್ಷೆಯ ಸ್ವಾಮೀಜಿಗಳು ನಮ್ಮ ನಡುವೆ ಇರುವುದೇ ನಾಡಿನ ಸೌಭಾಗ್ಯ. ಅದರಲ್ಲೂ ವಿಶೇಷವಾಗಿ ನಮ್ಮ ಮೈಸೂರು ಭಾಗದಲ್ಲಿ ಇವರು ಸಂಸ್ಥಾಪಿಸಿರುವ ಮೈಸೂರು ನಗರದ ವಿಜಯನಗರದ ಸುಂದರವಾದ ಶ್ರೀ ಯೋಗಾನರಸಿಂಹ ಸ್ವಾಮಿ ದೇಗುಲ ಇವರು ಮೈಸೂರಿಗೆ ಕೊಟ್ಟ ಬಹುದೊಡ್ಡ ಧಾರ್ಮಿಕ ಕೊಡುಗೆಗಳಲ್ಲೊಂದು ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಭಾಷ್ಯ ಸ್ವಾಮೀಜಿ ಅವರು, ನಾವು ಮನುಷ್ಯರಾಗಿ ಹುಟ್ಟಿರುವುದೇ ಒಂದು ಸೌಭಾಗ್ಯ. ಸಕಲ ಜೀವಿಗಳಲ್ಲೂ ಮಾನವ ಜನ್ಮ ಬಹುದೊಡ್ಡದು. ಅಷ್ಟೇ ಅಲ್ಲ, ಅತ್ಯಂತ ಶ್ರೇಷ್ಠವಾದದ್ದು. ಇದನ್ನು ನಾವು ಸದ್ವಿನಿಯೋಗಪಡಿಸಿಕೊಂಡು ಸರ್ವಜೀವಿಗಳನ್ನೂ ಮಾನವೀಯತೆಯ ಕಣ್ಣಿಂದ ನೋಡುತ್ತಾ ಸಾರ್ಥಕ ರೀತಿಯಲ್ಲಿ ಮನುಷ್ಯರಾಗಿ ಬದುಕಬೇಕು. ಎಲ್ಲಾ ಧರ್ಮಗಳ ತಿರುಳು ಮತ್ತು ಕರುಳು ಮಾನವ ಧರ್ಮವೇ ಆಗಿದ್ದು ಎಲ್ಲ ಧರ್ಮಗಳೂ ಸಾರುವುದು ಮಾನವೀಯತೆಯನ್ನೇ. ಹಾಗಾಗಿ ನಾವೆಲ್ಲರೂ ಒಂದೇ ಎಂಬ ಸದ್ಭಾವನೆಯಲ್ಲಿ ಮನುಷ್ಯರಾಗಿ ಬದುಕೋಣ ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್ ಕನ್ನಡ ಹೋರಾಟಗಾರ ಡಿಪಿಕೆ ಪರಮೇಶ್, ಜಿಲ್ಲಾ ಮಹಿಳಾ ಸಹಕಾರಿ ಬ್ಯಾಂಕ್ ಮತ್ತು ಒಕ್ಕಲಿಗರ ಸಂಘದ ಮಾಜಿ ನಿರ್ದೇಶಕಿ ಹೆಚ್.ವಸಂತಾ ಮುನೀಸ್, ರಕ್ತದಾನಿ ಮಂಜು, ಕನ್ನಡಾಂಬೆ ರಕ್ಷಣಾ ವೇದಿಕೆಯ ನಂಜುಂಡ, ಹೊನ್ನೇಗೌಡ, ರವಿಗೌಡ, ವಿಷ್ಣು, ಕಿರಣ್, ಶ್ರೀನಿವಾಸ್, ಬಿಳಿಕೆರೆ ಭಾಗ್ಯ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ಪ್ರಜಾ ಪಾರ್ಟಿಯ ಕ್ಯಾಲೆಂಡರ್ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕರ್ನಾಟಕ ಪ್ರಜಾ ಪಾರ್ಟಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆರ್ಕ್ ಮಹಾಧಾಮ ವಿದ್ಯಾಪೀಠದ ಶ್ರೀಯೋಗಿ ಶ್ರೀನಿವಾಸ್ ಆರ್ಕ್ ಗುರೂಜೀ ಪಾರ್ಟಿಯ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು.

ಮೈಸೂರು, ಜ.1(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕರ್ನಾಟಕ ಪ್ರಜಾ ಪಾರ್ಟಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆರ್ಕ್ ಮಹಾಧಾಮ ವಿದ್ಯಾಪೀಠದ ಶ್ರೀಯೋಗಿ ಶ್ರೀನಿವಾಸ್ ಆರ್ಕ್ ಗುರೂಜೀ ಪಾರ್ಟಿಯ ನೂತನ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು.

ನಂತರ ಶ್ರೀಯೋಗಿ ಶ್ರೀನಿವಾಸ್ ಆರ್ಕ್ ಗುರೂಜೀ, ಜೀವನದ ಪ್ರತಿಯೊಂದು ಹಂತದಲ್ಲಿ ಕ್ಯಾಲೆಂಡರ್ ಬಹಳ ಮುಖ್ಯವಾಗಿದ್ದು, ತಂತ್ರಜ್ಞಾನ ಎಷ್ಟೇ ಮುಂದುವರೆದು ಡಿಜಿಟಲ್ ಕ್ಯಾಲೆಂಡರ್ ಬಂದಿದ್ದರೂ ಮುದ್ರಣ ಕ್ಯಾಲೆಂಡರ್ ಇರಲೇಬೇಕು. ಮುದ್ರಣ ಕ್ಯಾಲೆಂಡರ್ ನಮ್ಮ ಜೀವನದ ಒಂದು ಭಾಗವಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಸಾಕಷ್ಟು ರಾಜಕೀಯ ಪಕ್ಷಗಳು ಹುಟ್ಟಿಕೊಳ್ಳುತ್ತವೆ. ಆದರೆ, ಅವು ಹೆಚ್ಚಿನ ದಿನ ಅಸ್ತಿತ್ವದಲ್ಲಿ ಇರುವುದಿಲ್ಲ. ಕರ್ನಾಟಕ ಪ್ರಜಾ ಪಾರ್ಟಿಯೂ ಉತ್ತಮ ಸೇವೆಗಳ ಮೂಲಕ ಜನರ ನಡುವೇ ಬಾಂಧವ್ಯವನ್ನು ಬೆಸೆಯುತ್ತಿದ್ದು, ಇದು ನಿರಂತವಾಗಿ ನಡೆಯಲಿ ಎಂದು ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಪ್ರಶಸ್ತಿಗೆ ಭಾಜನರಾದ ಲಾ ಗೈಡ್ ಮಾಸ ಪತ್ರಿಕೆ ಸಂಪಾದಕ ಹೆಚ್.ಎನ್.ವೆಂಕಟೇಶ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಎ.ಜಿ. ಸುಧೀರ್, ರಾಜ್ಯ ವಕೀಲ ಪರಿಷತ್ತಿನ ಸದಸ್ಯ ಬಿ.ಆರ್.ಚಂದ್ರಮೌಳಿ, ಭಾಗ್ಯಮ್ಮ, ಪಕ್ಷದ ರಾಜ್ಯಾಧ್ಯಕ್ಷ ಬಿ.ಶಿವಣ್ಣ, ಜಿಲ್ಲಾಧ್ಯಕ್ಷ ಕುಮಾರಸ್ವಾಮಿ ಮತ್ತಿತರರಿದ್ದರು.

ವೀರ ಮಡಿವಾಳ ಮಾಚಿದೇವರ ಸಂಘದ ಕ್ಯಾಲೆಂಡರ್ ಬಿಡುಗಡೆ

ಮೈಸೂರು, ಜ.1(ಎಂಟಿವೈ)– ವೀರ ಮಡಿವಾಳ ಮಾಚಿದೇವರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಹಾಗೂ ಪ್ರತಿಭಾನ್ವಿತ ಮಕ್ಕಳಿಗೆ ಪುರಸ್ಕಾರ ಸಮಾರಂಭ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆಯಿತು.

ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎನ್.ಆರ್. ನಾಗೇಶ್ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿ, ಶೋಷಿತ ಸಮುದಾಯಗಳ ಮಕ್ಕಳು ಸಹ ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುತ್ತಿರುವುದು ಸಂತಸದ ಸಂಗತಿಯಾಗಿದೆ. ಇದೇ ವೇಳೆ ಮಡಿವಾಳರಂತಹ ಸಮುದಾಯಗಳು ಸಹ ತಮ್ಮ ಮಕ್ಕಳನ್ನು ಅದೇ ವೃತ್ತಿಗೆ ದೂಡದೇ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಉನ್ನತ ಸ್ಥಾನಕ್ಕೇರಲು ಪ್ರೋತ್ಸಾಹ ನೀಡಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಪಿಕೆಟಿಬಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪ್ರಶಾಂತ್, ವೀರ ಮಡಿವಾಳ ಮಾಚಿದೇವರ ಸಂಘದ ಅಧ್ಯಕ್ಷ ಸಿ.ಎಸ್.ಮಹೇಶ್, ಮುಖಂಡರಾದ ರವಿಕುಮಾರ್, ಶ್ರೀರಾಂ ಕೆಂಬಾಳ್, ಬಿ.ಜಿ. ಕೇಶವ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ




ಮೈಸೂರಿನ ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ ಅವರು ನಡೆಸುತ್ತಿರುವ ಇನ್ಸ್‌ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆಯಲ್ಲಿ ನೂತನ ವರ್ಷಕ್ಕೆ ಸ್ವಾಗತ ಕೋರಿ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯೆ ಜಲಜಾ ಗೋವಿಂದಪ್ಪ, ಉಮಾ, ಪರಿಮಳ ಮೂರ್ತಿ, ಉಮಾ ರಾಯಣ್ಣಗೌಡರ್, ಅಶ್ವಿನಿ ಪಾಟೀಲ್, ಸ್ವಾತಿ, ಅಶ್ವಿನಿ, ಮಕ್ಕಳು, ತಾಯಂದಿರಿದ್ದಾರೆ.

ಜ.4ರಂದು ವಿವಿಧ ಜಯಂತಿಗಳ ಪೂರ್ವಭಾವಿ ಸಭೆ

ಮೈಸೂರು,ಜ.1–ಮೈಸೂರಿನ ಸಿದ್ದಾರ್ಥ ನಗರದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜ.4ರಂದು ಎಡಿಸಿ ಅಧ್ಯಕ್ಷತೆಯಲ್ಲಿ ಬೆಳಗ್ಗೆ 11 ಗಂಟೆಗೆ ಶಿವಯೋಗಿ ಸಿದ್ಧರಾಮ ಜಯಂತಿ ಪೂರ್ವಭಾವಿ ಸಭೆ, ಬೆಳಗ್ಗೆ 11.15 ಗಂಟೆಗೆ ಮಹಾಯೋಗಿ ವೇಮನ ಜಯಂತಿ ಪೂರ್ವಭಾವಿ ಸಭೆ ಹಾಗೂ ಬೆಳಗ್ಗೆ 11.30ಕ್ಕೆ ಅಂಬಿಗರ ಚೌಡಯ್ಯ ಜಯಂತಿ ಪೂರ್ವಭಾವಿ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

02.01.2025 ಗುರುವಾರ, ಮಳೆ ನಕ್ಷತ್ರ: ಪೂಷಾ, 29.12.2024 ರಿಂದ 16.01.2025 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಧನುರ್ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಶ್ರವಣ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಬೆಳಗ್ಗೆ 9 ರಿಂದ.

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು, ಸದ್ವಿದ್ಯಾ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆ:** 51ನೇ ಶಾಲಾ ವಾರ್ಷಿಕೋತ್ಸವ 'ಶ್ರೀರಾಮರಸಾಯನ', ಮುಖ್ಯ ಅತಿಥಿಗಳು: ಚಿಂತಕ ಚಕ್ರವರ್ತಿ ಸೂಲಿಬೆಲೆ, ಅಧ್ಯಕ್ಷತೆ: ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಗೌರವಾಧ್ಯಕ್ಷ ಪ್ರೊ.ನರಹರಿಬಾಬು, ಉಪಸ್ಥಿತರು: ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯದರ್ಶಿ ಎಂ.ಡಿ. ಗೋಪಿನಾಥ್, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಇಂಗ್ಲೀಷ್ ಮಾಧ್ಯಮ ಶಾಲೆ:** ಶಾಲಾ ವಾರ್ಷಿಕೋತ್ಸವ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಶಾಲಾ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕ ಎಂ.ಶಿವಮಾದಪ್ಪ, ಮುಖ್ಯ ಅತಿಥಿಗಳು: ಬಿಇಓ ರಾಜು, ಜಿ.ಶೋಭಾ, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್:** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** ಶಾಹು ಮಹಾರಾಜ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ವೈಚಾರಿಕ ಸ್ನೇಹ ಕುರಿತು ಪ್ರೊ. ರಹಮತ್ ತರೀಕೆರೆ ಅವರಿಂದ ವಿಶೇಷ ಉಪನ್ಯಾಸ, ಸ್ಥಳ: ಪ್ರೊ.ಬೆಟ್ರಿಕ್ಸ್ ಡಿಸೋಜಾ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ :** ಡಾ. ಎನ್.ಎಂ. ಗಿರಿಜಾಪತಿ ಅವರ ಕೃತಿಗಳ ಲೋಕಾರ್ಪಣೆ, ಷಡಕ್ಷರ ಕವಿಯ ಶಬರ ಶಂಕರವಿಳಾಸಂ ವ್ಯಾಖ್ಯಾನ ಕೃತಿ ರಾಮಧಾನ್ಯ ನಾಟಕ, ಕೃತಿ ಬಿಡುಗಡೆ : ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಡಾ. ನೀಲಗಿರಿ ತಳವಾರ, ಕೃತಿ ಕುರಿತು : ಡಾ. ಬಿ.ವಿ. ವಸಂತಕುಮಾರ್, ರಂಗತಜ್ಞ ಪ್ರೊ.ಎಚ್.ಎಸ್. ಉಮೇಶ್, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಡಾ.ಎನ್.ಕೆ.ಲೋಲಾಕ್ಷಿ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಮಧ್ಯಾಹ್ನ 3.30ಕ್ಕೆ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್:** ಶ್ರೀ ಮದ್ಭಾಗವತ ಸಪ್ತಾಹ, ವಿದುಷಿ ಡಾ.ಜ್ಯೋತಿ ಶಂಕರ್ ಅವರಿಂದ ರಾಸಲೀಲೆ ಕುರಿತು ಪ್ರವಚನ, ಕುವೆಂಪುನಗರದ ಶ್ರೀ ವಿಶ್ವೇಶ ಕೃಷ್ಣ ಭಜನಾ ಮಂಡಳಿಯಿಂದ ಹಾಡುಗಾರಿಕೆ, ಸ್ಥಳ: ರಜತ ಸಭಾ ಮಂಟಪ, ಗಣಪತಿ ದೇವಸ್ಥಾನ, ಐ–ಬ್ಲಾಕ್, ರಾಮಕೃಷ್ಣನಗರ, ಸಂಜೆ 6ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಜೈ ಭೀಮಾ ಕೋರೆಗಾಂವ್ ವಿಜಯೋತ್ಸವ ಸಮಿತಿ:** ಭೀಮಾ ಕೋರೆಗಾಂವ್ 207ನೇ ವರ್ಷದ ಸಂಭ್ರಮಾಚರಣೆ ಹಾಗೂ ವಾರ್ಷಿಕೋತ್ಸವ, ಸಾನ್ನಿಧ್ಯ: ಶ್ರೀ ಪೂಜ್ಯ ಬಂತೇಜಿ, ಅಧ್ಯಕ್ಷತೆ: ಮಾಜಿ ಮೇಯರ್ ಪುರುಷೋತ್ತಮ್, ಉದ್ಘಾಟನೆ: ಚಿಂತಕ ರಹಮತ್ ತರೀಕೆರೆ, ಪ್ರಾಸ್ತಾವಿಕ ನುಡಿ: ವಕೀಲ ಎಸ್. ಉಮೇಶ್, ಉಪಸ್ಥಿತರು: ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಜಿ.ಶೀಲಾ, ಚಿಂತಕ ಶಿವಸುಂದರ್, ರಂಗಕರ್ಮಿ ಜನಾರ್ಧನ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ದೀಪಕ್, ಕಾರ್ಯನಿರ್ವಾಹಕ ಅಭಿಯಂತರರಾದ ಎಸ್.ಬಿ.ಅನಿತಾ, ಸ್ಥಳ: ಜಯನಗರ ರೈಲ್ವೆ ಗೇಟ್ ಹತ್ತಿರ, ಅಶೋಕಪುರಂ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್. ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15 ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ

■ **ಧಾತ್ರಿ ರಂಗ ಸಂಸ್ಥೆ ಸಿರಿಗೇರಿ, ಸಂಚಲನ ಮೈಸೂರು :** ಸಂಚಲನ ರಂಗೋತ್ಸವದ ಸಮಾರೋಪ ಸಮಾರಂಭ, ಉಪಸ್ಥಿತರು : ಜವರಪ್ಪ ಅಹಿಂದ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಕಾರ್ಯದರ್ಶಿ ಎಂ.ಪಿ. ಹರಿದತ್ತ, ಡಾ. ಪೂರ್ಣಿಮಾ, ಪ್ರಾಸ್ತಾವಿಕ ನುಡಿ : ಸಂಚಲನದ ಅಧ್ಯಕ್ಷ ದೀಪಕ್ ಮೈಸೂರು, ಶ್ರೀ ಕೃಷ್ಣ ಸಂಧಾನ ನಗೆ ನಾಟಕ, ನಿರ್ದೇಶನ : ಭೀಮೇಶ್ ಹೆಚ್.ಎನ್. ದಾವಣಗೆರೆ, ಸ್ಥಳ: ಕಿರುರಂಗ ಮಂದಿರ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸೀರೆಯ ಸೊಬಗು –ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಡಾ.ಎಂ.ಎ. ಜ್ಯೋತಿ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು –ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಉರ್ದು ಕಾರ್ಯಕ್ರಮ, 4.00 ಜನಪದ ಸಂಗೀತ, 4.30 ಸಂಧ್ಯಾರಾಗ–ಚುಟುಕು ಸಾಹಿತ್ಯ ಪರಿಷತ್‌ನ ಸಂಸ್ಥಾಪಕರು ಹಾಗೂ ರಾಜ್ಯ ಪ್ರಧಾನ ಸಂಚಾಲಕರು ಮತ್ತು ಹಿರಿಯರಾದ ಡಾ. ಮೋಹನ್ ಗೋಪಾಲ್ ರಾಜೇ ಅರಸ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಜಿ. ಶಾಂತಕುಮಾರ್, 6.10 ಸೀರೆಯ ಸೊಬಗು –ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ: ಜಯಶ್ರೀ ಹೆಗಡೆ, 6.50 ಕೃಷಿರಂಗ– ಕಿಸಾನ್‌ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' –ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ರೈತ ಉತ್ಪಾದಕ ಕಂಪನಿಗಳ ಮೂಲಕ ಸ್ಥಳೀಯ ತಳಿರಾಸುಗಳ ಸಂರಕ್ಷಣೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಸಾಗರದ ಮಲೆನಾಡು ಗಿಡ್ಡ ರೈತ ಉತ್ಪಾದಕ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ನಾಗೇಂದ್ರ ಸಾಗರ್ ಮತ್ತು ಸಂಯೋಜಕರಾದ ಬಂದೇಗದ್ದೆ ರಾಧಾಕೃಷ್ಣ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ–ಯುವ ಪ್ರತಿಭೆ –ವರ್ಣಚಿತ್ರ, ಗಂಜೀಫಾ ಮತ್ತು ಟ್ಯಾಟೂ ಕಲಾವಿದೆ ಮೈಸೂರಿನ ಸಹನಾ. ಎಸ್.ವಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಕನ್ನಡ ಭಾರತಿ, 10.00 ಪ್ರಾದೇಶಿಕ ಲಘು ಹಾಗೂ ಜನಪದ ಸಂಗೀತ ರಾಷ್ಟ್ರೀಯ ಕಾರ್ಯಕ್ರಮ, ಆರ್. ಡಿ. ಕೈಲಿ–ಲಘು ಗೀತ್ ಭಜನ್, ಖುಮೌತೆಮ್ ಸುಂದರ್ ದೇವಿ–ಜನಪದ

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜನವರಿ 2 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 256 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನಿಮಗೆ ಗೊತ್ತಾ...! ಮೈಸೂರು ವಿಶ್ವವಿದ್ಯಾನಿಲಯ ಬಡಾವಣೆಯಲ್ಲಿದೆ

ಭವ್ಯವಾದ 'ಸಿದ್ದರಾಮಯ್ಯ ವೃತ್ತ'

ಮೈಸೂರು ವಿವಿ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘದ ಬಡಾವಣೆಯಲ್ಲಿ ಕ್ಲಾಕ್ ಟವರ್‌ನೊಂದಿಗೆ 2022ರ ಏಪ್ರಿಲ್ 8ರಂದು ಸಿದ್ದರಾಮಯ್ಯನವರೇ ಈ ವೃತ್ತ ಉದ್ಘಾಟಿಸಿದ್ದರು...



ಎಸ್.ಟಿ.ರವಿಕುಮಾರ್

ಮೈಸೂರು, ಜ.1- ಮೈಸೂರಿನ ದಟ್ಟಗಳ್ಳಿ ಬಳಿ ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘದಿಂದ ನಿರ್ಮಾಣವಾಗಿರುವ ವಿಶ್ವವಿದ್ಯಾನಿಲಯ ಬಡಾವಣೆ (ಲಿಂಗಾಂಬುದಿ ಪಾಳ್ಯ)ಯಲ್ಲಿ ಪ್ರಮುಖ ವೃತ್ತವಿದ್ದು, ಇದರಲ್ಲಿ ಎತ್ತರದ ಗಡಿಯಾರ ಗೋಪುರ (ಕ್ಲಾಕ್ ಟವರ್)ವೂ ಇದೆ. ಈ ಸರ್ಕಲ್‌ಗೆ 'ಸಿದ್ದರಾಮಯ್ಯ ವೃತ್ತ' ಎಂದು ನಾಮಕರಣ ಮಾಡಲಾಗಿದೆ. ಸಾವಿರಕ್ಕೂ ಹೆಚ್ಚು ವಿವಿಧ ಅಳತೆಯ ನಿವೇಶನಗಳನ್ನು ಹೊಂದಿರುವ ಈ ಪ್ರತಿಷ್ಠಿತ ಬಡಾವಣೆಯಲ್ಲಿ ಬಹುತೇಕ ಮೈಸೂರು ವಿಶ್ವವಿದ್ಯಾನಿಲಯದ ನೌಕರರೇ ನೆಲೆಸಿದ್ದಾರೆ.

ಈ ಕ್ಲಾಕ್ ಟವರ್ ಸರ್ಕಲ್ ಅನ್ನು 2022ರ ಏಪ್ರಿಲ್ 8ರಂದು ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾಲಿ ವಿರೋಧ ಪಕ್ಷದ ನಾಯಕರೂ ಆಗಿದ್ದ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಉದ್ಘಾಟನೆ ಮಾಡಿರುವ ಫಲಕವನ್ನು ಕ್ಲಾಕ್ ಟವರ್‌ನಲ್ಲಿ ಅಳವಡಿಸಲಾಗಿದೆ. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಅಂದಿನ ವರುಣ ಕ್ಷೇತ್ರದ ಶಾಸಕರಾಗಿದ್ದ ಸಿದ್ದರಾಮಯ್ಯ ಅವರ ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ ಆಗಿನ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರಾಗಿದ್ದ ಹಾಲಿ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ, ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಕೃಷ್ಣಮಲ್ಲೇಗೌಡ, ಉಪಾಧ್ಯಕ್ಷ ಕೆ.ಟಿ.ಮನು ಸೇರಿದಂತೆ ಹಲವರು ಅಂದಿನ ಸಮಾರಂಭದಲ್ಲಿ ಪಾಲ್ಗೊಂಡಿರುವ ಬಗ್ಗೆ ಫಲಕದಲ್ಲಿ ನಮೂದಾಗಿದೆ.

ಈ ಬಡಾವಣೆ ರಿಂಗ್ ರಸ್ತೆ ಒಳಗೆ ಬರಲಿದ್ದು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡಲಿದೆ. ಖಾಸಗಿ ಗೃಹ ನಿರ್ಮಾಣ ಸಹಕಾರ ಸಂಘದವರೇ ನಿರ್ಮಿಸಿದ ಬಡಾವಣೆಯಾಗಿದ್ದರೂ, ಈ ವಸತಿ ಬಡಾವಣೆಯನ್ನು ಸಂಘದವರೇನೂ ನಿರ್ವಹಣೆ ಮಾಡುವುದಿಲ್ಲ. ಜೊತೆಗೆ ಬಡಾವಣೆ ನಿರ್ಮಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನಕ್ಷೆ ಅನುಮೋದನೆ ಮಾಡಿ, ನಂತರ ನಿವೇಶನಗಳನ್ನು ಬಿಡುಗಡೆ ಮಾಡಿದೆ. ಅಲ್ಲಿನ ನಿವೇಶನಗಳು ಮತ್ತು ಮನೆಗಳ ಮಾಲೀಕರು ಪ್ರತಿವರ್ಷ ಆಸ್ತಿ ತೆರಿಗೆಯನ್ನು ಮುಡಾಗೆ ಪಾವತಿಸುತ್ತಿದ್ದಾರೆ. ಈ ಬಡಾವಣೆ ಹಸ್ತಾಂತರವಾದ ನಂತರ ಮೈಸೂರು ಮಹಾನಗರಪಾಲಿಕೆ ನಿರ್ವಹಣೆ ಮಾಡಲಿದೆ. ಮೈಸೂರಲ್ಲಿ ಪಾಲಿಕೆ ಇಲ್ಲವೇ ಮುಡಾ ತಮ್ಮ ತಮ್ಮ ವ್ಯಾಪ್ತಿಯ ಬಡಾವಣೆಯಲ್ಲಿ ವೃತ್ತ, ಉದ್ಯಾನವನ, ಆಟದ ಮೈದಾನ, ಸಿಎ ನಿವೇಶನ, ರಸ್ತೆ ಸೇರಿದಂತೆ ಇನ್ನಿತರರ ಸಾರ್ವಜನಿಕ ಸೌಲಭ್ಯಗಳ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಬೇಕಾಗುತ್ತದೆ. ಮೈಸೂರು ವಿಶ್ವವಿದ್ಯಾಲಯ ಬಡಾವಣೆ ಮುಡಾದಿಂದ ಅನುಮೋದನೆ ಪಡೆದಿದ್ದು, ಈ ಬಡಾವಣೆ ಅದರ ವ್ಯಾಪ್ತಿಗೆ ಬರುವುದರಿಂದ ಸಿದ್ದರಾಮಯ್ಯನವರ ಹೆಸರಿನ ವೃತ್ತ ಸರ್ಕಾರಿ ದಾಖಲೆಗಳಲ್ಲಿ ನಮೂದಾಗಿರಲೇಬೇಕು. ಅದನ್ನು ಖಾಸಗಿಯವರು ಮಾಡಿದ್ದಾರೆ, ಅವರೇ ಹೆಸರಿಟ್ಟಿದ್ದಾರೆ ಅಥವಾ ಅದು ಖಾಸಗಿ ಸ್ವತ್ತು ಎಂದು ಹೇಳಲು ಬಾರದು ಎಂಬುದು ಹಲವರ ವಾದವಾಗಿದೆ.

ಗೊಂದಲ: ಕೆಲವರು, ಮೈಸೂರು ನಗರದಾದ್ಯಂತ ಯಾವುದೇ ರಸ್ತೆ, ವೃತ್ತ, ಉದ್ಯಾನವನ ಅಥವಾ ಬಡಾವಣೆಗೆ ಸಿದ್ದರಾಮಯ್ಯ ಅವರ ಹೆಸರನ್ನು ನಾಮಕರಣ ಮಾಡಿಲ್ಲ ಹಾಗೂ ಕೆಆರ್‌ಎಸ್ ರಸ್ತೆಗೆ ಪ್ರಿನ್ಸೆಸ್ ರಸ್ತೆ ಎಂಬ ಹೆಸರಿದೆ ಎಂಬುದಕ್ಕೆ ದಾಖಲೆಗಳಲ್ಲಿ ಯಾವುದೇ ಉಲ್ಲೇಖವಿಲ್ಲ ಎಂದು ಹೇಳುವ ಮೂಲಕ ಗೊಂದಲ ಉಂಟು ಮಾಡುತ್ತಿದ್ದಾರೆ. ಆದರೆ ಮೈಸೂರಿನ ಪ್ರಮುಖ ಸ್ಥಳದಲ್ಲಿ ಅದರಲ್ಲೂ ■ 6ನೇ ಪುಟಕ್ಕೆ

> ▶ ಮೈಸೂರಿನ ದಟ್ಟಗಳ್ಳಿ ಬಳಿ ವಿಶ್ವವಿದ್ಯಾನಿಲಯ ಬಡಾವಣೆಯಲ್ಲಿ ಸಿದ್ದರಾಮಯ್ಯ ಹೆಸರಿನ ಸರ್ಕಲ್ ಇರಬಹುದು. ಆದರೆ ಅದು ಖಾಸಗಿಯವರು ನಿರ್ಮಿಸಿರುವ ಬಡಾವಣೆಯಾಗಿದ್ದು, ಅವರೇ ವೃತ್ತಕ್ಕೆ ಹೆಸರು ನಾಮಕರಣ ಮಾಡಿದ್ದಾರೆ. ಸರ್ಕಾರಿ ದಾಖಲೆಗಳಲ್ಲಿ ಸಿದ್ದರಾಮಯ್ಯ ಹೆಸರಿನ ರಸ್ತೆ, ವೃತ್ತ, ಬಡಾವಣೆ ಉಲ್ಲೇಖಗಳು ಇರುವುದು ಕಂಡುಬಂದಿಲ್ಲ.
>
> 
>
> -ಅಶಾದ್ ಉರ್ ರಹಮಾನ್ ಷರೀಫ್, ನಗರಪಾಲಿಕೆ ಆಯುಕ್ತ

ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಅರಣ್ಯ ಭೂಮಿ ಒತ್ತುವರಿ ಪ್ರಕರಣ: ಪ್ರಾದೇಶಿಕ ಆಯುಕ್ತರಿಗೆ ಹೈಕೋರ್ಟ್ ಛೀಮಾರಿ

ಯಾರು ಬರದಿದ್ದರೂ ಸರ್ವೆ ಕಾರ್ಯ ಆಗಲೇಬೇಕು; ತಾಕೀತು





ಮಾಜಿ ಸ್ಪೀಕರ್ ರಮೇಶ್‌ಕುಮಾರ್

ಬೆಂಗಳೂರು, ಜ.1-ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಅವರಿಂದ ಆಗಿದೆ ಎನ್ನಲಾದ ಅರಣ್ಯ ಜಮೀನು ಒತ್ತುವರಿ ಪ್ರಕರಣ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ. ಉಪ ಅರಣ್ಯ ಸಂರಕ್ಷಣಾಧಿಕಾರಿಯನ್ನು ಸರ್ಕಾರ ವರ್ಗಾವಣೆಗೊಳಿಸಿದರೆ, ಜಂಟಿ ಸರ್ವೆಗೆ ಅಡ್ಡಿಪಡಿಸಿದ ಪ್ರಾದೇಶಿಕ ಆಯುಕ್ತರಿಗೆ ಹೈಕೋರ್ಟ್ ಛೀಮಾರಿ ಹಾಕಿದೆ.

ಶ್ರೀನಿವಾಸಪುರ ತಾಲೂಕಿನ ಜಿಂಗಾಲಕುಂಟೆ ಅರಣ್ಯ ವ್ಯಾಪ್ತಿಯ ಹೊಸಹುಡ್ಯ ಗ್ರಾಮದ ಸರ್ವೆ ಸಂಖ್ಯೆ 1 ಹಾಗೂ 2ರ 61.39 ಎಕರೆ ಜಮೀನು ಒತ್ತುವರಿಗೆ ಸಂಬಂಧಿಸಿದಂತೆ ಜಂಟಿ ಸರ್ವೆ ವಿಚಾರ ಕಂದಾಯ-ಅರಣ್ಯ ಇಲಾಖೆಗಳ ನಡುವಿನ ಸಂಘರ್ಷಕ್ಕೆ ಕಾರಣವಾಗಿದ್ದು, ಇದೀಗ ಡಿಸಿಎಫ್ ಏಡುಕೊಂಡಲು ಅವರಿಗೆ ಬಡ್ತಿ ಕೊಟ್ಟು ವರ್ಗಾವಣೆ ಮಾಡಿರುವುದು ತೀವ್ರ ಚರ್ಚೆಗೆ ಗ್ರಾಸವಾಗಿದೆ. ಅರಣ್ಯ ಇಲಾಖೆಯಿಂದ ಡಿ.20ರಂದು ನಿಗದಿಪಡಿಸಿದ್ದಂತಹ ಅರಣ್ಯ ಜಮೀನು ಜಂಟಿ ಸರ್ವೆ ಕಾರ್ಯಕ್ಕೆ ಅಡ್ಡಿಪಡಿಸಿದ್ದಂತಹ ಬೆಂಗಳೂರು ಪ್ರಾದೇಶಿಕ ಆಯುಕ್ತರ ಕ್ರಮವನ್ನು ಖಂಡಿಸಿರುವ ■ 6ನೇ ಪುಟಕ್ಕೆ

ರಾಜ್ಯದಲ್ಲಿ ಅಪರಾಧ, ಮಾದಕ ವಸ್ತುಗಳ

ರುದ್ರನರ್ತನ

ಮುಖ್ಯಮಂತ್ರಿ ಸಿದ್ದರಾಮಯ್ಯ ಆತಂಕ

- ಇವುಗಳಿಗೆ ಬ್ರೇಕ್ ಹಾಕುವಲ್ಲಿ ಅಧಿಕಾರಿಗಳ ವೈಫಲ್ಯಕ್ಕೆ ಬೇಸರ
- ಭ್ರಷ್ಟಾಚಾರ ಕಡಿಮೆ ಆಗುವುದರ ಬದಲು ದಿನೇ ದಿನೆ ಹೆಚ್ಚಾಗುತ್ತಿರುವುದಕ್ಕೆ ವಿಷಾದ
- ಹೊಸ ವರ್ಷದ ಶುಭಾಶಯ ಹೇಳಲು ಬಂದ ಅಧಿಕಾರಿಗಳೊಂದಿಗೆ ಸಭೆ

ಬೆಂಗಳೂರು, ಜ.1(ಕೆಎಂಶಿ)- ರಾಜ್ಯಾದ್ಯಂತ ಕ್ರೈಮ್, ಡ್ರಗ್ಸ್ ಹಾವಳಿ ಹೆಚ್ಚುತ್ತಿರುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆತಂಕ ವ್ಯಕ್ತಪಡಿಸಿದ್ದಾರೆ.

ಡ್ರಗ್ಸ್, ಕ್ರೈಮ್ ಬಗ್ಗೆ ಅಷ್ಟೇ ಅಲ್ಲ, ಭ್ರಷ್ಟಾಚಾರದ ಪಿಡುಗು ಕಡಿಮೆ ಆಗುವ ಬದಲು ಹೆಚ್ಚಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಮುಖ್ಯಮಂತ್ರಿ ಅವರು, ನಮ್ಮ ಚುನಾವಣಾ ವ್ಯವಸ್ಥೆಯೂ ಹದಗೆಟ್ಟು ಹೋಗಿದೆ ಎಂದು ಬೇಸರ ಹೊರಹಾಕಿದರು. ಹೊಸ ವರ್ಷಾರಂಭ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಹಿರಿಯ ಅಧಿಕಾರಿಗಳಿಂದ ಶುಭಹಾರೈಕೆಗೆ ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಆಯೋಜಿಸಿದ್ದ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಾನೂನು ಸುವ್ಯವಸ್ಥೆ, ಆರ್ಥಿಕ ಪರಿಸ್ಥಿತಿ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಧಿಕಾರಿಗಳಲ್ಲಿ ಕೆಲವು ■ 6ನೇ ಪುಟಕ್ಕೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಸಂಪುಟ ವಿಸ್ತರಣೆ ಇಲ್ಲವೇ ಪುನರ್ರಚನೆ ವರಿಷ್ಠರಿಗೆ ಬಿಟ್ಟ ವಿಚಾರ

- ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ
- ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆ ರಾಜೀನಾಮೆ ಅನಗತ್ಯ

ಬೆಂಗಳೂರು, ಜ.1(ಕೆಎಂಶಿ)- ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಅಗತ್ಯ ಇಲ್ಲ ಎಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಪುಟ ವಿಸ್ತರಣೆ ಇಲ್ಲವೇ, ಪುನರ್ ರಚನೆ ಪಕ್ಷದ ವರಿಷ್ಠರಿಗೆ ಬಿಟ್ಟಿದ್ದು ಎಂದು ಕೈಚೆಲ್ಲಿದ್ದಾರೆ.

ಹಿರಿಯ ಅಧಿಕಾರಿಗಳ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ, ಇದು ರಾಜಕೀಯ ದ್ವೇಷದಿಂದ ಮಾಡಿರುವ ಆರೋಪ ಎಂದರು. ಆತ್ಮಹತ್ಯೆ ಮಾಡಿಕೊಂಡಿರುವ ಬೀದರ್‌ನ ಗುತ್ತಿಗೆದಾರನ ಡೆತ್‌ನೋಟ್‌ನಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಹೆಸರು ಇಲ್ಲ, ಪ್ರಕರಣದಲ್ಲಿ ಅವರ ಪಾತ್ರವಾಗಲೀ, ವಿರುದ್ಧ ಸಾಕ್ಷ್ಯವಾಗಲೀ ಇಲ್ಲ, ಆದರೂ ಯಾವುದೇ ವಿಚಾರಣೆಗೆ ಸಿದ್ಧವಿರುವುದಾಗಿ ಸಚಿವರು ತಿಳಿಸಿದ್ದಾರೆ. ಇಂತಹುದೇ ಪ್ರಕರಣದಲ್ಲಿ ಹಿಂದೆ ಕೆ.ಎಸ್.ಈಶ್ವರಪ್ಪ ಅವರ ಹೆಸರನ್ನು ಡೆತ್‌ನೋಟ್‌ನಲ್ಲಿ ಬರೆಯಲಾಗಿತ್ತು, ಪ್ರಕರಣ ಸಂಬಂಧ ದಾಖಲಾಗಿರುವ ದೂರಿನ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ, ವರದಿ ಬಂದ ನಂತರ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದರು. ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕೆನ್ನುವ ಬಿಜೆಪಿಯವರು ಅಧಿಕಾರದಲ್ಲಿದ್ದಾಗ, ಒಂದು ಪ್ರಕರಣವನ್ನೂ ಸಿಬಿಐಗೆ ವಹಿಸಿರಲಿಲ್ಲ, ಅವರ ಬೇಡಿಕೆಗೆ ನೈತಿಕತೆ ಇಲ್ಲ.

ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಪ್ರಕರಣವನ್ನೂ ಸಿಐಡಿಗೆ ವಹಿಸಲಾಗಿದೆ, ಅವಾಚ್ಯ ಪದ ಬಳಕೆ ಬಗ್ಗೆ ಎಫ್‌ಎಸ್‌ಎಲ್ ವರದಿ ಬರಲಿದೆ. ಮಹಿಳಾ ಸಚಿವರಿಗೆ ಅವಹೇಳನ ಮಾಡಿದ ಆರೋಪದ ಮೇಲೆ ದೂರು ದಾಖಲಾಗಿದೆ. ಹೊಸ ವರ್ಷ ಸಂದರ್ಭದಲ್ಲಿ ವಿರೋಧ ಪಕ್ಷದವರಿಗೆ ಭಗವಂತ ಸದ್ಬುದ್ಧಿ ನೀಡಲೆಂದು ಪ್ರಾರ್ಥಿಸುವುದಾಗಿ ಮುಖ್ಯಮಂತ್ರಿ ತಿಳಿಸಿದರು.

ವರ್ಷದ ಮೊದಲ ಕ್ಯಾಬಿನೆಟ್‌ನಲ್ಲಿ ರೈತರಿಗೆ ಪ್ರಧಾನಿ

ಮೋದಿ ಬಂಪರ್ ಕೊಡುಗೆ; ಡಿಎಪಿ ಗೊಬ್ಬರಕ್ಕೆ ಸಬ್ಸಿಡಿ

ಪ್ರಧಾನಮಂತ್ರಿ ಫಸಲು ಬೀಮಾ ಯೋಜನೆಯ ಬಜೆಟ್ 69,515 ಕೋಟಿ ರೂ.ಗೆ ಹೆಚ್ಚಳ



ನವದೆಹಲಿ, ಜ.1- ಹೊಸ ವರ್ಷದಂದು ಕೇಂದ್ರ ಸರ್ಕಾರ ರೈತರಿಗೆ ಶುಭ ಸುದ್ದಿ ನೀಡಿದೆ. ಬುಧವಾರ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು ಡಿ-ಅಮೋನಿಯಂ ಫಾಸ್ಫೇಟ್ (ಡಿಎಪಿ) ಮೇಲಿನ ವಿಶೇಷ ಸಬ್ಸಿಡಿ ಸೌಲಭ್ಯವನ್ನು ವಿಸ್ತರಿಸಲು ಒಪ್ಪಿಗೆ ನೀಡಿದೆ. ವರ್ಷದ ಮೊದಲ ಸಚಿವ ಸಂಪುಟ ಸಭೆಯನ್ನು ರೈತರಿಗೆ ಪ್ರಧಾನಿ ನರೇಂದ್ರ ಮೋದಿ ಸಮರ್ಪಿಸಿ ಕೇವಲ ರೈತರಿಗೆ ಸಂಬಂಧಿಸಿದ ನಿರ್ಧಾರಗಳಿಗೆ ಕ್ಯಾಬಿನೆಟ್ ಅನುಮೋದನೆ ನೀಡಿದೆ. ಪ್ರಧಾನಮಂತ್ರಿ ಫಸಲು ಬೀಮಾ ಯೋಜನೆಯ ಬಜೆಟ್ 69,515 ಕೋಟಿ ರೂ.ಗೆ ಹೆಚ್ಚಳ ಮಾಡಿದೆ. ಇದರ ಜೊತೆ ಡಿಎಪಿ ರಸಗೊಬ್ಬರಕ್ಕೆ 3,850 ಕೋಟಿ ರೂ. ವಿಶೇಷ ಪ್ಯಾಕೇಜ್ ಬಿಡುಗಡೆಗೆ ಒಪ್ಪಿಗೆ ಸೂಚಿಸಿದೆ.



ಈ ನಿರ್ಧಾರದಿಂದ ರೈತರು 50 ಕೆಜಿ ತೂಕದ ಡಿಎಪಿ ರಸಗೊಬ್ಬರವನ್ನು 1,350 ರೂ. ಚಿಲ್ಲರೆ ದರದಲ್ಲಿ ಖರೀದಿಸಬಹುದು. ■ 6ನೇ ಪುಟಕ್ಕೆ

ಅರಮನೆ ಅಂಗಳದ ಫಲಪುಷ್ಪ ಸೌಂದರ್ಯಕ್ಕೆ ಮಾರುಹೋದ ಲಕ್ಷಾಂತರ ಜನ

ಮೈಸೂರು,ಜ.1(ಪಿಎಂ)- ಬಗೆಬಗೆ ಹೂ ರಾಶಿಯಲ್ಲಿ ಅರಳಿದ್ದ ನಾನಾ ಕಲಾಕೃತಿಗಳು ಲಕ್ಷಾಂತರ ಮಂದಿಯ ಕಣ್ಣುಗಳಿಗೆ ಹಬ್ಬವನ್ನುಂಟು ಮಾಡಿವೆ. ಹೌದು, ಮೈಸೂರು ಅರಮನೆ ಆವರಣದಲ್ಲಿ ಡಿ.21ರಿಂದ 31ರವರೆಗೆ ಒಟ್ಟು 11 ದಿನಗಳ ಕಾಲ ಹಮ್ಮಿಕೊಂಡಿದ್ದ ಫಲಪುಷ್ಪ ಪ್ರದರ್ಶನಕ್ಕೆ ಒಟ್ಟಾರೆ 1,34,944 ಮಂದಿ ಭೇಟಿ ನೀಡಿದ್ದಾರೆ.

ಅರಮನೆ ಮಂಡಳಿ ವತಿಯಿಂದ ಹಮ್ಮಿಕೊಂಡಿದ್ದ ಫಲಪುಷ್ಪ ಪ್ರದರ್ಶನದಲ್ಲಿ ಬಗೆಬಗೆಯ ಪುಷ್ಪಗಳಲ್ಲಿ ಅರಳಿದ್ದ ಕಲಾಕೃತಿಗಳನ್ನು ಕಂಡು ಪುಳಕಿತಗೊಂಡಿದ್ದಾರೆ. ಅಲಂಕಾರಿಕ ಹೂಗಳಿಂದ ಅರಳಿದ್ದ ನವದೆಹಲಿಯ ಅಕ್ಷರಧಾಮ ಮಾದರಿ, ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆ ಮಾದರಿ, ಕಾರ್ಗಿಲ್ ಯುದ್ಧ ಸ್ಮಾರಕದ ಮಾದರಿ ಸೇರಿದಂತೆ ಇಲ್ಲಿ ಮೂಡಿದ್ದ ಕಲಾಕೃತಿಗಳಿಗೆ ನೋಡುಗರು ಮನಸೋತಿದ್ದಾರೆ. ಹಿರಿಯರು,



ಕಿರಿಯರು, ಯುವಜನರು ಇಲ್ಲಿನ ರಾಶಿರಾಶಿ ಹೂಗಳ ಮಕರಂದಕ್ಕೆ ಮನಸೋತಿದ್ದಾರೆ. ಅವರಲ್ಲಿ ದೇಶ-ವಿದೇಶದ ಪ್ರವಾಸಿಗರು ಮಾತ್ರವಲ್ಲದೆ, ಸ್ಥಳೀಯರು ಸೇರಿದ್ದಾರೆ. ■ 6ನೇ ಪುಟಕ್ಕೆ

ನಾನು ನೀಡಿದ ದೂರಿನ ಮೇಲೆ ಪೊಲೀಸರು ಇನ್ನೂ ಎಫ್‌ಐಆರ್ ದಾಖಲಿಸಿಲ್ಲ

ಬೆಂಗಳೂರು, ಜ.1- ಪೊಲೀಸ್ ಠಾಣೆಯಲ್ಲಿ ನನ್ನ ಮೇಲೆ ನಡೆದ ದೌರ್ಜನ್ಯ ಮತ್ತು ಹತ್ಯೆ ಯತ್ನದ ಬಗ್ಗೆ 2024ರ ಡಿ.19ರಂದು ನಾನು ಸಲ್ಲಿಸಿದ್ದ ದೂರಿನ ಮೇಲೆ ಬೆಳಗಾವಿ ಪೊಲೀಸರು ಇನ್ನೂ ಎಫ್‌ಐಆರ್ ದಾಖಲಿಸಿಲ್ಲ ಎಂದು ಬಿಜೆಪಿ ಎಂಎಲ್‌ಸಿ ಸಿ.ಟಿ.ರವಿ ಆರೋಪಿಸಿದ್ದಾರೆ.



ಸಿ.ಟಿ.ರವಿ

ಇಂದು ಬೆಂಗಳೂರಿನ ಬಿಜೆಪಿ ಪಕ್ಷದ ಪ್ರಧಾನ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿಸೆಂಬರ್ 19 ರಂದು ರಾತ್ರಿ ನಾನು ದೂರು ನೀಡಿದ್ದೇನೆ. ಆದರೆ ಈ ಕ್ಷಣದವರೆಗೆ ■ 6ನೇ ಪುಟಕ್ಕೆ

ಇನ್ಫೋಸಿಸ್ ಆವರಣದಲ್ಲಿ ಚಿರತೆ ಸೆರೆಗೆ ಮುಂದುವರೆದ ಕಾರ್ಯಾಚರಣೆ



ಮೈಸೂರಿನ ಇನ್ಫೋಸಿಸ್ ಆವರಣದಲ್ಲಿ ಚಿರತೆ ಪತ್ತೆಗಾಗಿ ಅರಣ್ಯ ಇಲಾಖೆ ನಡೆಸುತ್ತಿರುವ ಕೂಂಬಿಂಗ್ ಕಾರ್ಯಾಚರಣೆ ಸ್ಥಳಕ್ಕೆ ಮೈಸೂರು ವೃತ್ತ ಸಿಎಫ್ ಡಾ.ಮಾಲತಿಪ್ರಿಯ ಭೇಟಿ ನೀಡಿ, ಡಿಸಿಎಫ್‌ಗಳಾದ ಡಾ.ಐ.ಬಿ.ಪ್ರಭುಗೌಡ, ಡಾ.ಕೆ.ಎನ್.ಬಸವರಾಜು ಅವರಿಂದ ಮಾಹಿತಿ ಪಡೆಯುತ್ತಿರುವುದು.

ಮೈಸೂರು,ಜ.1(ಎಂಟಿವೈ)-ಮೈಸೂರಿನ ಇನ್ಫೋಸಿಸ್ ಆವರಣದಲ್ಲಿ ಕಾಣಿಸಿಕೊಂಡ ಚಿರತೆ ಪತ್ತೆಗೆ ಎರಡನೇ ದಿನವಾದ ಬುಧವಾರವೂ ಕೂಂಬಿಂಗ್ ಮುಂದುವರೆಸಿ, ಥರ್ಮಲ್ ಡ್ರೋನ್ ಮೂಲಕ ಪರಿಶೀಲಿಸಿದರೂ ಚಿರತೆ ಸುಳಿವು ಪತ್ತೆಯಾಗಿಲ್ಲ.

ಡಿ.31ರಂದು ಮುಂಜಾನೆ ಇನ್ಫೋಸಿಸ್ ಆವರಣದಲ್ಲಿ ಚಿರತೆ ಸಂಚರಿಸುತ್ತಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿತ್ತು. ಈ ಹಿನ್ನೆಲೆಯಲ್ಲಿ ದಿನವಿಡೀ ಕೂಂಬಿಂಗ್ ಕಾರ್ಯಾಚರಣೆ ನಡೆಸಿದ್ದರೂ ಯಾವುದೇ ಸುಳಿವು ಪತ್ತೆಯಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಚಿರತೆ ಕಂಡು ಬಂದ ಸ್ಥಳ ಸೇರಿದಂತೆ ಆಯ್ದ ಸ್ಥಳದಲ್ಲಿ 12 ಕ್ಯಾಮರಾ ಟ್ರ್ಯಾಪ್ ಹಾಗೂ ಎರಡು ಬೋನ್ ಇಡಲಾಗಿತ್ತು. ಆದರೆ, ಒಂದು ದಿನವಾದರೂ ಕ್ಯಾಮರಾ ಟ್ರ್ಯಾಪ್‌ನಲ್ಲಿ ಚಿರತೆ ದೃಶ್ಯ ಸೆರೆಸಿಕ್ಕಿಲ್ಲ. ಇದರಿಂದ ಇಂದು ಮತ್ತೆ ಕೂಂಬಿಂಗ್ ಕಾರ್ಯಾಚರಣೆ ನಡೆಸಿ ಪರಿಶೀಲಿಸಲಾಯಿತಾದರೂ ಚಿರತೆ ಸುಳಿವು ಕಂಡು ಬರಲಿಲ್ಲ. ಇದರಿಂದ ಥರ್ಮಲ್ ಡ್ರೋನ್ ಬಳಸಿ ಇನ್ಫೋಸಿಸ್ ಆವರಣ ಪರಿಶೀಲಿಸಿದರೂ ಡ್ರೋನ್ ಕ್ಯಾಮರಾ ಕಣ್ಣಿಗೂ ಚಿರತೆ ಬಿದ್ದಿಲ್ಲ. ಇದರಿಂದ ಅರಣ್ಯ ಇಲಾಖೆ ಕಾರ್ಯಾಚರಣೆ ಮುಂದುವರೆಸಿದೆ.

ಸ್ಥಳಕ್ಕೆ ಮೈಸೂರು ವೃತ್ತ ಸಿಎಫ್ ಡಾ. ಮಾಲತಿಪ್ರಿಯ ಭೇಟಿ ನೀಡಿ ಕಾರ್ಯಾಚರಣೆ ಕುರಿತು ಮಾಹಿತಿ ಪಡೆದರು. ಅಲ್ಲದೆ, ಚಿರತೆ ಪತ್ತೆ ಅಥವಾ ಸೆರೆ ಹಿಡಿಯಲು ಕೈಗೊಳ್ಳಬೇಕಾದ ಕ್ರಮ ಕುರಿತಂತೆ ಚರ್ಚಿಸಿ, ಅಗತ್ಯ ಸಲಹೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಡಿಸಿಎಫ್‌ಗಳಾದ ಡಾ.ಐ.ಬಿ.ಪ್ರಭುಗೌಡ, ಡಾ.ಕೆ.ಎನ್.ಬಸವರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಚಿರತೆ ಪತ್ತೆಗೆ ಥರ್ಮಲ್ ಡ್ರೋನ್ ಬಳಸುತ್ತಿರುವುದು.

ನಕ್ಕರೆ ಅದೇ ಸ್ವರ್ಗ

ಪೊಲೀಸ್ : ಪಾರ್ಕಿನಲ್ಲಿ ಈ ತರ ಕೂರಲು ಅನುಮತಿ ಇಲ್ಲ
ಹುಡುಗಿ : ನಮಗೆ ಮದ್ವೆ ಆಗಿದೆ. ನಮ್ಮಿಷ್ಟ. ನೀವ್ಯಾರೂ ಕೇಳೋಕೆ?
ಪೊಲೀಸ್ : ನಿಮ್ ಮನೆಯಲ್ಲಿ ಹೇಗೆ ಬೇಕಾದ್ರೂ ಇರಿ, ಯಾರು ಕೇಳ್ತಾರೆ?
ಹುಡುಗ : ಅದೇ ಸಮಸ್ಯೆ ಬಾಸು, ಇವಳ ಗಂಡ ಒಪ್ಪಲ್ಲ...!

ಮೈಸೂರು ಮಿತ್ರ
ಗುರುವಾರ, 2 ಜನವರಿ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ನಿಮ್ಮ ಹಾದಿಯುಲ್ಲಿ ಮುಳ್ಳು ಚೆಲ್ಲಿದವರ ಹಾದಿಯುಲ್ಲಿ ಹೂ ಚೆಲ್ಲಿ.
–ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಭಾಷೆ ತಿಳಿಯದಿದ್ದರೂ ಹಾಸ್ಯಕ್ಕೆ ಕಡಿಮೆಯಿಲ್ಲ.

ಶ್ರೀ ಸಿದ್ದೇಶ್ವರ ಸ್ವಾಮಿಗಳ ಹೊಸ ವರ್ಷದ ಆಶಯಗಳು

ಯುಗಾದಿ ನಮ್ಮ ಹೊಸ ವರ್ಷ. ಕ್ರೈಸ್ತ ವರ್ಷ ವ್ಯವಹಾರಿಕವಾಗಿ ಮಾತ್ರ ಹೊಸ ವರ್ಷ. ಇದನ್ನು ಹಲವು ಧರ್ಮ ಗ್ರಂಥಗಳು, ಧಾರ್ಮಿಕ ಚಿಂತಕರು ಬಲವಾಗಿ ಪ್ರತಿಪಾದಿಸುತ್ತಾರೆ. ಆದರೆ, ಎಷ್ಟೇ ಹೇಳಿದರೂ ಕ್ರೈಸ್ತ ವರ್ಷವನ್ನು ಮೋಜು–ಮಸ್ತಿಯೊಂದಿಗೆ ಆಚರಿಸುವುದು ಮಾತ್ರ ನಡೆದುಕೊಂಡು ಬರುತ್ತಿದೆ. ಇದರ ಬಗ್ಗೆ ಆಸ್ತಿಕರು, ಸಾತ್ವಿಕರಲ್ಲಿ ಬೇಸರವಿದೆ. ಈ ನಿಟ್ಟಿನಲ್ಲಿ ನಡೆದಾಡುವ ದೇವರೆಂದೇ ಹೆಸರಾದ ವಿಜಯಪುರದ ಸಂತ ದಿವಂಗತ ಶ್ರೀ ಸಿದ್ದೇಶ್ವರ ಸ್ವಾಮಿಗಳ ಮಾನವೀಯತೆ ಪ್ರವಚನಗಳನ್ನು ನಾವು 2025ನೇ ಹೊಸ ವರ್ಷಾಚರಣೆ ಸಂದರ್ಭದಲ್ಲಿ ಒಮ್ಮೆ ಆಲಿಸುವುದು ಅವಶ್ಯ. –ಸಂಪಾದಕ.

ಹೊಸ ವರ್ಷದಂದು ಹೊಸ ಆಲೋಚನೆ ಮಾಡೋಣ



ವಿಜಯಪುರದ ಶ್ರೀ ಸಿದ್ದೇಶ್ವರ ಸ್ವಾಮಿಗಳು

'ಗತಮ್ ಗತಹ' ಕೆಟ್ಟದ್ದನ್ನು ಮರೆತುಬಿಡಿ. ನೀವು ಯಾರ ಮೇಲಾದರೂ ದ್ವೇಷ, ಮತ್ಸರ, ಜಗಳ ಮಾಡಿದ್ದರೆ ಅದೆಲ್ಲವನ್ನು ಮರೆತು ಈ ದಿನದಿಂದ ಅವರ ಜೊತೆ ಆತ್ಮೀಯವಾಗಿ ಬಾಳಲು ಪ್ರಯತ್ನ ಮಾಡಿ. ಅವರ ಜೊತೆ ಒಮ್ಮೆ ಮಾತಾಡಿ, ನಿಮ್ಮಿಂದ ತಪ್ಪಾಗಿದ್ದರೆ ಸಾಧ್ಯವಾದರೆ ಸಾರಿ ಹೇಳಿ, ಕ್ಷಮೆ ಕೇಳಿ ನೋಡಿ. ನಿಮ್ಮ ಮನಸ್ಸು ಬಹಳ ಹಗುರಾಗುತ್ತದೆ. ಇದೇ ಜೀವನ. ದ್ವೇಷ ಸಾಧಿಸುತ್ತಾ ಕೂಡಬಾರದು. ದ್ವೇಷ, ಮತ್ಸರ ಎಂಬ ಬೆಂಕಿ ನಮ್ಮ ಮನಸ್ಸಿನಲ್ಲಿ ಇಟ್ಟುಕೊಂಡರೆ ಅದು ನಮ್ಮನ್ನೇ ಸುಡುತ್ತದೆ.

ಈ ಪ್ರಪಂಚದಲ್ಲಿ ಪ್ರತಿನಿತ್ಯ ಎರಡು ಲಕ್ಷ ಐವತ್ತು ಸಾವಿರ ಜನ ಸಾಯುತ್ತಾರೆ. ಕೊರೊನಾ ಸಮಯದಲ್ಲಿ ನಮ್ಮವರು ಬಹಳ ಜನ ನಮ್ಮನ್ನು ಬಿಟ್ಟು ಹೋದರು. ಒಮ್ಮೆ ಅವರೆಲ್ಲರನ್ನು ನೆನೆಸಿಕೊಳ್ಳಿ, ನಾವು ಇಂದು ಬದುಕಿದ್ದೇವೆ. ಇಂದು ಸೂರ್ಯೋದಯವನ್ನು ನೋಡಿದೆವು. ದೇವರಿಗೆ ಧನ್ಯವಾದಗಳನ್ನು ಹೇಳಿ, ಅಹಂಕಾರ, ಅಭಿಮಾನ ನಿಮ್ಮನ್ನು ಕಾಡುತ್ತಿದ್ದರೆ ದಯಮಾಡಿ ದಿನದಲ್ಲಿ ಒಂದು ಗಂಟೆ ಸ್ಮಶಾನದಲ್ಲಿ ಒಬ್ಬರೇ ಕುಳಿತು ಮೌನವಾಗಿ ಆಲೋಚಿಸಿ. ಎಂತೆಂತಹ ಅತಿರಥ–ಮಹಾರಥಿಗಳು ಈ ಸ್ಮಶಾನದಲ್ಲಿ ಬಂದು ಶಾಂತವಾಗಿದ್ದಾರೆ. ಅದನ್ನು ನೋಡಿ ಒಮ್ಮೆ ನೀವು ತಿಳಿದುಕೊಳ್ಳಿ, ಇಂತಹ ಸಂತರ ಮಾನವೀಯತೆಯ ಮಾತುಗಳನ್ನು ಕೇಳಿ ನಿಮ್ಮ ಜೀವನದಲ್ಲಿ ಇವುಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನ ಮಾಡುವುದು ಅವಶ್ಯ ಎನ್ನಿಸುತ್ತದೆ.

ನಡೆದಾಡುವ ದೇವರೆಂದು ಹೆಸರಾದ ಶ್ರೀ ಸಿದ್ದೇಶ್ವರ ಶ್ರೀಗಳು ವೀರಶೈವ ಸಮಾಜದ ಸಂತ ಶ್ರೀ ಬಸವೇಶ್ವರರ ಪಂಥಕ್ಕೆ ಸಂಬಂಧಪಟ್ಟವರಾದರೂ, ಅವರು ಎಂದೂ ತಮ್ಮ ಮತ ಶ್ರೇಷ್ಠ, ತಮ್ಮ ಗುರುಗಳು ಶ್ರೇಷ್ಠ, ತಮ್ಮ ಸಿದ್ಧಾಂತ ಶ್ರೇಷ್ಠ ಎಂಬುದಾಗಿ ಜೀವನದಲ್ಲಿ ಒಮ್ಮೆಯೂ ಹೇಳಲಿಲ್ಲ. ಕೇವಲ ಮಾನವೀಯತೆ, ಮಾನವೀಯತೆ... ಮಾನವೀಯತೆ... ಇದನ್ನೇ ಸಮಾಜಕ್ಕೆ ಹೇಳಿದರು.

ನಿಮ್ಮ ಅರಿವೇ ನಿಮ್ಮ ಗುರು. ಜ್ಞಾನವಂತರಾಗಿರಿ, ಮನುಷ್ಯತ್ವ ಬೆಳೆಸಿಕೊಳ್ಳಿ ಎಂಬುವ ವಿಚಾರಗಳನ್ನೇ ಪ್ರಚಾರ ಮಾಡಿದರು. ಇದನ್ನೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮ ಹೇಳಿದ್ದು, **'ಉದ್ಧರೇತ್ ಆತ್ಮನಾ ತ್ಮಾನಂ'**– ನಿಮ್ಮ ಉದ್ಧಾರ ನೀವೇ ಮಾಡಿಕೊಳ್ಳಿ, ಜ್ಞಾನವಂತರಾಗಿರಿ ಎಂದು. ಜ್ಞಾನ ಮತ್ತು ಮಾನವೀಯತೆ ಇವುಗಳನ್ನೇ ನಮ್ಮ ಸಂತರು ಶ್ರೀ ಸಿದ್ದೇಶ್ವರ ಶ್ರೀಗಳು ತಮ್ಮ ಜೀವನ ಪರ್ಯಂತ ಜನರಿಗೆ ಉಪದೇಶ ಮಾಡಿದರು.

ಶ್ರೀ ಸಿದ್ದೇಶ್ವರ ಶ್ರೀಗಳು ಎಂದೂ ತಮ್ಮ ಪಾದಪೂಜೆ ಮಾಡಿಸಿಕೊಳ್ಳಲಿಲ್ಲ ಎಂದಿಗೂ ಕೈ ಎತ್ತಿ ಯಾರಿಗೂ ಆಶೀರ್ವಾದ ಮಾಡಲಿಲ್ಲ. ತಮಗಾಗಿ ದೊಡ್ಡ ಮಠ, ಆಸ್ತಿ, ಸಂಪತ್ತು ಮಾಡಲಿಲ್ಲ. ಸರಕಾರ ತಮ್ಮ ಮಠಕ್ಕೆ ಅನುದಾನ ಕೊಡುತ್ತೇನೆಂದರೆ ವಿನಯದಿಂದ ನಿರಾಕರಿಸಿದರು. ಒಂದು ನಯಾಪೈಸೆ ತೆಗೆದುಕೊಳ್ಳಲಿಲ್ಲ. ಇವರ ಅಂಗಿಗೆ ಜೇಬು ಇರುತ್ತಿರಲಿಲ್ಲ. ಕಾವಿ ಬಟ್ಟೆ ಧರಿಸಲಿಲ್ಲ. ಕೇಂದ್ರ ಸರಕಾರ ಸರ್ವೋಚ್ಚ ಪ್ರಶಸ್ತಿ ಕೊಟ್ಟು ಸನ್ಮಾನಿಸುತ್ತೇವೆ, ದೆಹಲಿಗೆ ಬನ್ನಿ ಎಂದು ಆಮಂತ್ರಣ ಕಳಿಸಿದರೆ ಹೋಗಲಿಲ್ಲ. ಅದನ್ನು ಸವಿನಯದಿಂದ ನಿರಾಕರಿಸಿದ ಮಹಾನುಭಾವರು. ಇವರು ಹೆಜ್ಜೆ ಇಟ್ಟ ಸ್ಥಳದಿಂದ ಮಣ್ಣನ್ನು ತೆಗೆದುಕೊಂಡು ಭಕ್ತರು ಹಣೆಗೆ ಹಚ್ಚಿಕೊಳ್ಳುತ್ತಿದ್ದರು. 25 ಲಕ್ಷಕ್ಕೂ ಹೆಚ್ಚು ಜನ ಇವರ ಅಂತಿಮ ಯಾತ್ರೆಯಲ್ಲಿ ಸೇರಿದ್ದರು. ಇದು ಒಂದು ಇತಿಹಾಸ.

ನನ್ನ ಸಮಾಧಿ ಕಟ್ಟಬೇಡಿ. ನನ್ನ ನಂತರ ಅದೊಂದು ಆದಾಯ ಬರುವ ಮಠವಾಗಬಾರದು ಎಂದು ಹೇಳಿ, ತಮ್ಮ ಅಸ್ಥಿ, ಬೂದಿಗಳನ್ನು ಗಂಗೆಯಲ್ಲಿ ವಿಸರ್ಜಿಸಲು ಹೇಳಿದ ಮಹಾನ್ ಸಂತರು ನಮ್ಮ ಸಿದ್ದೇಶ್ವರ ಶ್ರೀಗಳು. ಇಂತಹ ಮಹಾನ್ ಸಂತರು ಬೋಧಿಸಿದ ಮಾನವೀಯತೆಯನ್ನು ನಮ್ಮ ಜೀವನದಲ್ಲಿ ಕಿಂಚಿತ್ತಾದರೂ ಅಳವಡಿಸಿಕೊಳ್ಳಲು ಈ ಹೊಸ ವರ್ಷದಲ್ಲಿ ಪ್ರಯತ್ನಿಸೋಣ ಬನ್ನಿ.

ಭಗವದ್ಗೀತೆ ಪಠಣದಿಂದಾಗುವ ಲಾಭಗಳು: ಶ್ರೀಮದ್ ಭಗವದ್ಗೀತೆ ಓದುವುದರಿಂದ, ಗೀತೆ ಪಾರಾಯಣ ಮಾಡುವುದರಿಂದ ಪುಣ್ಯ ಬರುವುದಿಲ್ಲ. ಗೀತೆ ನಮಗೆ ಒಂದು ರೋಡ್ ಮ್ಯಾಪ್ ಇದ್ದ ಹಾಗೆ. ನಮ್ಮ ದಾರಿದೀಪ ಅದರಲ್ಲಿ ಹೇಳಿದ್ದು, ನಾವು ತಿಳಿದುಕೊಂಡು ನಮ್ಮ ಜೀವನದಲ್ಲಿ ಆಚರಿಸಿದಾಗ ಮಾತ್ರ ಗೀತೆಯಿಂದ ಲಾಭ. ಇಲ್ಲವಾದಲ್ಲಿ ಅದೊಂದು ರೂಢಿ ಕರ್ಮಕಾಂಡವಾಗಿ ಉಳಿದು ಬಿಡುತ್ತದೆ.

ದೌರ್ಭಾಗ್ಯವೆಂದರೆ ಇಂದು ಬಹಳಷ್ಟು ಜನ ನಮ್ಮ ಧರ್ಮದ ಸಂದೇಶಗಳ, ಪುರಾಣ, ಉಪನಿಷತ್ ಕಥೆಗಳ ಹಿಂದಿರುವ ತತ್ವ, ಸಂದೇಶ ತಿಳಿಯದೆ, ಆ ಕಥೆಗಳನ್ನೇ ನಿಜ ಎಂದು ತಿಳಿದು ರೂಢಿಗಳಾಗಿ ಕರ್ಮಕಾಂಡಿಗಳಾಗಿ ಉಳಿದು ಬಿಟ್ಟಿದ್ದಾರೆ.

ಭಗವದ್ಗೀತೆಯ 12ನೇ ಅಧ್ಯಾಯದಲ್ಲಿ ಭಕ್ತಿ ಯೋಗದ 20 ಶ್ಲೋಕಗಳಲ್ಲಿ ಶ್ರೀಕೃಷ್ಣ ಪರಮಾತ್ಮ ಭಕ್ತಿ ಎಂದರೆ ಕೇವಲ ಪೂಜೆ, ಪುನಸ್ಕಾರ, ಅಲಂಕಾರ, ಕೋಟಿ ಪುಷ್ಪಾರ್ಚನೆ, ಲಕ್ಷ ಬಿಲ್ವಾರ್ಚನೆ, ಶತಕುಂಭ ಕ್ಷೀರ ಅಭಿಷೇಕ, ಲಕ್ಷ ದೀಪೋತ್ಸವ ಇವುಗಳು ಮಾತ್ರ ಅಲ್ಲ. ಒಂದು ಮಾತು; ಇವು ತಪ್ಪೆಂದು ಹೇಳುತ್ತಿಲ್ಲ.

ಶ್ರೀ ಕೃಷ್ಣ ಹೇಳಿದ್ದು ನನ್ನ ನಿಜವಾದ ಭಕ್ತ ಹೇಗಿರುತ್ತಾನೆ ಎಂದರೆ, ಇದ್ದದ್ದರಲ್ಲಿ ತೃಪ್ತಿಪಡುವಾತ ದೇವರ ಭಕ್ತ. ಯಾವುದನ್ನೂ ಅಪೇಕ್ಷೆ ಮಾಡಲಾರದಾತ ದೇವರ ಭಕ್ತ. ಯಾವುದಕ್ಕೂ ಚಿಂತಿಸಲಾರದಾತ ದೇವರ ಭಕ್ತ. ಸುಖ–ದುಃಖಗಳಲ್ಲಿ ಸಮಾನ ದೃಷ್ಟಿ ಇಡುವಾತ ದೇವರ ಭಕ್ತ. ಯಾರನ್ನೂ ದ್ವೇಷ ಮಾಡಲಾರದಾತ ದೇವರ ಭಕ್ತ. ಈತ ನನ್ನ ನಿಜವಾದ ಭಕ್ತ. ಇದನ್ನೇ ಭಕ್ತಿ ಯೋಗದಲ್ಲಿ ಕೃಷ್ಣ ಹೇಳಿದ್ದು.

ಎಲ್ಲಾ ಗುರುಗಳನ್ನು ಗೌರವಿಸಿ, ಎಲ್ಲಾ ಸಂತರನ್ನು ಗೌರವಿಸಿ. ಎಲ್ಲಾ ಗುರುಗಳಿಗೆ ನಮಸ್ಕರಿಸಿ, ಎಲ್ಲಾ ಗುರುಗಳನ್ನು ಆದರಿಸಿ. ಆದರೆ ಕುರಿಯ ತರಹ ತಲೆ ಅಲ್ಲಾಡಿಸುತ್ತಾ ಯಾವ ಗುರುವಿನ ಹಿಂದೆ ಹೋಗಬೇಡಿ. ಯಾವ ಗುರುವೂ ನಮ್ಮನ್ನು ಉದ್ಧಾರ ಮಾಡಲಾರ. ಅಂಧಭಕ್ತರಾಗಬೇಡಿ. ಕುರಿಗಳ ತರಹ ಜನರ ಗುಂಪನ್ನು ನೋಡಿ ಹಿಂಬಾಲಿಸಿ ಹೋಗಬೇಡಿ. ಮಂತ್ರಾಕ್ಷತೆ, ಕಲ್ಲು ಸಕ್ಕರೆ ಪ್ರಸಾದ, ತಾಯಿತಾ, ತಲೆಯ ಮೇಲೆ ಕೈ ಇಡುವುದು, ಇದರಿಂದ ಹೆಚ್ಚೇನೂ ಲಾಭವಿಲ್ಲ, ದುರ್ಬಲ ಮನಸ್ಸುಳ್ಳವನಿಗೆ ಅಂಧ ಭಕ್ತನಿಗೆ ಸ್ವಲ್ಪ ಮಾನಸಿಕ ಸಮಾಧಾನ ಕೊಡಬಹುದು ಅಷ್ಟೇ. ಅಷ್ಟಕ್ಕೂ ನಾವು ಯಾರನ್ನೂ ಅಗೌರವಪಡಿಸುತ್ತಿಲ್ಲ.

ಹೊಸ ವರ್ಷ ಯಾವ ದೇವಸ್ಥಾನಗಳಿಗೆ ಹೋಗುವುದು ಬೇಕಾಗಿಲ್ಲ. ನಿಮ್ಮ ಮನೆಯಲ್ಲಿರುವ ತಾಯಿ–ತಂದೆ, ಅನಾರೋಗ್ಯದಿಂದ ನರಳುತ್ತಿರುವ, ಹಾಸಿಗೆ ಹಿಡಿದ ಬಂಧು–ಬಳಗ, ಮಿತ್ರರ ಜೊತೆ ಸ್ವಲ್ಪ ಸಮಯ ಕಳೆಯಿರಿ. ಅವರ ಜೊತೆ ಮಾತಾಡಿ ಪಕ್ಕದಲ್ಲಿ ಕುಳಿತುಕೊಳ್ಳಿ. ದೇವಸ್ಥಾನಗಳಿಗೆ ಹೋಗಿ–ಬಂದ ಪುಣ್ಯಕ್ಕಿಂತ ಸಹಸ್ರ ಪಟ್ಟು ಪುಣ್ಯ ಇದರಲ್ಲಿ ಸಿಗುತ್ತದೆ.

ಇದನ್ನೇ ಜಗತ್ತಿನ ಪ್ರಖ್ಯಾತ, ಶ್ರೀಮಂತ ವ್ಯಕ್ತಿಗಳಾದ ಅಲೆಕ್ಸಾಂಡರ್, ಅಮೆರಿಕಾದ ಏಪಲ್ ಕಂಪನಿ ಮಾಲೀಕ ಸ್ಟೀಲ್ ಜಾಬ್ಸ್, ಲತಾ ಮಂಗೇಶ್ಕರ್ ತಮ್ಮ ಪ್ರಾಣ ಬಿಡುವಾಗ ಕೊನೆಯ ದಿನಗಳಲ್ಲಿ ಹೇಳಿದ್ದು. ಇದೇ ಸತ್ಯ.



–ಅಮರ್ ದೀಕ್ಷಿತ್ ಕೃಷ್ಣ (ತೆಲಂಗಾಣ)

ನಿಮ್ಮ ಪತ್ರಗಳು

ಪಾದಚಾರಿ ಮಾರ್ಗದ ಅತಿಕ್ರಮಣ



ಮಾನ್ಯರೇ,

ಮೈಸೂರು ನಗರದ ರಿಂಗ್ ರಸ್ತೆ ಹಿನಕಲ್ ಹಾಗೂ ಹೂಟಗಳ್ಳಿ ಗ್ರಾಮವನ್ನು ಸಂಪರ್ಕಿಸುವ ರಿಂಗ್ ರಸ್ತೆಯು ಎಸ್.ವಿ. ರೀಜೆನ್ಸಿ ವಸತಿ ಸಂಕೀರ್ಣದ ದಕ್ಷಿಣಕ್ಕೆ ಹಾದು ಹೋಗಿದೆ. ಕಳೆದ ವರ್ಷ ಫೆಬ್ರವರಿ 2023ರಲ್ಲಿ ಈ ರಸ್ತೆಯು ಡಾಂಬರೀಕರಣವನ್ನು ಹೂಟಗಳ್ಳಿ ನಗರಸಭೆಯ ವತಿಯಿಂದ ಮಾಡಲಾಗಿದೆ. ಈ ರಸ್ತೆಯ ಎರಡು ಬದಿಯಲ್ಲಿ ಸುಮಾರು 15 ಅಡಿ ಜಾಗವನ್ನು ಪಾದಚಾರಿ ಮಾರ್ಗಕ್ಕಾಗಿ ನಗರಸಭೆ ಮೀಸಲಿರಿಸಿತ್ತು. ಆದರೆ ವಿನಾಕಾರಣ ಈ ಪಾದಚಾರಿ ಮಾರ್ಗದ ಕಾಮಗಾರಿಯು ಸ್ಥಗಿತಗೊಂಡಿದೆ. ಆದರೆ ಇತ್ತೀಚೆಗೆ ಈ ಪಾದಚಾರಿ ಮಾರ್ಗಕ್ಕೆ ಮೀಸಲಿಟ್ಟಿರುವ 15 ಅಡಿ (ಎರಡು ಕಡೆ) ಜಾಗವನ್ನು ಅಪಾರ್ಟ್‌ಮೆಂಟ್‌ನ ಸಂಘದಿಂದ ಎರಡು ಕಡೆ ಮನಸೋ ಇಚ್ಛೆ ಎರಡರಿಂದ ಮೂರು ಸಾಲುಗಳಲ್ಲಿ ದೊಡ್ಡ ದೊಡ್ಡ ಮರವಾಗಲಿರುವ ಗಿಡಗಳನ್ನು ಅವೈಜ್ಞಾನಿಕವಾಗಿ ನೆಟ್ಟಿದ್ದಾರೆ. ಮಳೆ ನೀರು ಚರಂಡಿಗೂ, ಡಾಂಬರು ರಸ್ತೆಗೂ ಅಂಟಿಕೊಂಡಂತೆ ಗಿಡಮರಗಳನ್ನು ನೆಟ್ಟಿದ್ದಾರೆ. ಈ ದಿಸೆಯಿಂದ ಈಗಾಗಲೇ ಹಲವು ಸಲ ವಾಹನ ಅಪಘಾತಗಳು ಸಂಭವಿಸಿದೆ. ನಾವುಗಳು ಈ ಸಲುವಾಗಿ ಅಹವಾಲನ್ನು ಸಂಬಂಧಿಸಿದ ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳು, ಹೂಟಗಳ್ಳಿ ನಗರಸಭೆ ಅಧಿಕಾರಿಗಳು, ಪೊಲೀಸ್ ಕಮಿಷನರ್, ಅರಣ್ಯ ಇಲಾಖೆಯವರಿಗೂ 3 ಬಾರಿ ಪತ್ರ ಬರೆದಿದ್ದರೂ ಇಲ್ಲಿಯುವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆದುದರಿಂದ ಈಗಲಾದರೂ ಈ ಸಾರ್ವಜನಿಕರ ಸಮಸ್ಯೆಯನ್ನು ಸೂಕ್ತ ಕ್ರಮ ತೆಗೆದುಕೊಂಡು ಅತಿಕ್ರಮಣ ಹಾಗೂ ಗಿಡಮರ ತೆರವುಗೊಳಿಸಬೇಕೆಂದು ಈ ಮೂಲಕ ಮನವಿ.

–ಹೆಚ್.ಕೆ.ಲೋಕೇಶ್, ಆಶ್ರಯ ಯೋಜನೆ ಮನೆಗಳು ಹಾಗೂ ಎಸ್.ವಿ. ರೀಜೆನ್ಸಿ ಬಡಾವಣೆ ನಿವಾಸಿಗಳ ಪರವಾಗಿ

'ಪ್ರಿನ್ಸೆಸ್ ರಸ್ತೆ' ಹೆಸರು ಉಳಿಯಲಿ



ಮಾನ್ಯರೆ,

ಕೆಆರ್‌ಎಸ್‌ಗೆ ತೆರಳುವ ಮಾರ್ಗದ ಪ್ರಿನ್ಸೆಸ್ ರಸ್ತೆಯನ್ನು ಸಿದ್ದರಾಮಯ್ಯ ಆರೋಗ್ಯ ಮಾರ್ಗ ಎಂದು ಮರು ನಾಮಕರಣ ಮಾಡುವ ಪ್ರಸ್ತಾಪ ನಿಜಕ್ಕೂ ಕಳವಳಕಾರಿ. ಈ ರಸ್ತೆಗೆ ಪ್ರಸ್ತುತ ಪ್ರಿನ್ಸೆಸ್ ಕೃಷ್ಣಾಜಮ್ಮಣ್ಣಿ ಅವರ ಹೆಸರು ಇದ್ದು, ಪಿಕೆಟಿಬಿ ಸ್ಯಾನಿಟೋರಿಯಂ ಆಸ್ಪತ್ರೆ ಈ ರಸ್ತೆಯಲ್ಲಿದೆ.

ಮಾರಕ ಕ್ಷಯರೋಗದಿಂದ ರಾಜಕುಮಾರಿ ಕೃಷ್ಣಾಜಮ್ಮಣ್ಣಿ ಮತ್ತು ಅವರ ಮೂವರು ಹೆಣ್ಣು ಮಕ್ಕಳು ನಿಧನರಾದ ಕಾರಣ ಅವರ ಸ್ಮರಣಾರ್ಥ ಈ ಆಸ್ಪತ್ರೆಯನ್ನು ನಿರ್ಮಿಸಲಾಗಿದೆ. ಈ ಆಸ್ಪತ್ರೆ ತಲೆಮಾರುಗಳಿಂದ ಜನರಿಗೆ ಸೇವೆ ಸಲ್ಲಿಸುತ್ತಾ ಬಂದಿದೆ. ಸಂಬಂಧಿಸಿದ ಅಧಿಕಾರಿಗಳು ಈ ರಸ್ತೆಯ ನಾಮಕರಣದ ಪ್ರಸ್ತಾವನೆಯನ್ನು ಮರು ಪರಿಶೀಲಿಸಿ ರಸ್ತೆಯ ಐತಿಹಾಸಿಕ ಮಹತ್ವವನ್ನು ಕಾಪಾಡಬೇಕೆಂದು ವಿನಮ್ರವಾಗಿ ವಿನಂತಿಸುತ್ತೇನೆ. ನಮ್ಮ ಸಮಾಜದ ಶ್ರೇಯೋಭಿವೃದ್ಧಿಗೆ ಪ್ರಾಮಾಣಿಕವಾಗಿ ಕೊಡುಗೆ ನೀಡಿದವರ ಪರಂಪರೆಯನ್ನು ಗೌರವಿಸೋಣ. **–ಶಶಾಂತ್ ಎಸ್.ಹೊಳ್ಳ, ಕಾನೂನು ವಿದ್ಯಾರ್ಥಿ.**

ಕೆಆರ್‌ಎಸ್ ರಸ್ತೆಗೆ ಗಿನ್ನಿಸ್ ದಾಖಲೆ ಮಾಡಿದ ಡಾ.ಎಂ.ಸಿ.ಮೋದಿ ಹೆಸರಿಡಿ

ಮಾನ್ಯರೆ,

ಮೈಸೂರು ಮಹಾನಗರಪಾಲಿಕೆಯು ಕೆಆರ್‌ಎಸ್ ರಸ್ತೆಗೆ ಈಗಿನ ಮುಖ್ಯಮಂತ್ರಿಯವರ ಹೆಸರನ್ನು ಇಡುವ ತುರಾತುರಿಯಲ್ಲಿದೆ.

ಮಹಾನಗರ ಪಾಲಿಕೆಯು ಅಧಿಕೃತವಾಗಿ ನಾಮಕರಣ ಮಾಡಿಲ್ಲ ಎನ್ನುವ ವಿಚಾರ ಹಿರಿಯದಲ್ಲ. ಜನರು ತಮ್ಮ ಪತ್ರ ವ್ಯವಹಾರದಲ್ಲಿ ಆದೇ ರಸ್ತೆಗೆ 70–80 ವರ್ಷಗಳ ಕಾಲ 'ಪ್ರಿನ್ಸೆಸ್' ಹೆಸರು ಬಳಕೆ ಮಾಡಿದ್ದರು ಎಂಬ ಅಂಶವನ್ನು ಗಣನೆಗೆ ತೆಗೆದುಕೊಂಡರೆ ಸಾಕಲ್ಲವೇ? ಈಗ ಏತಕ್ಕಾಗಿ ಹೊಸ ಹೆಸರಿಡುವ ಆಟ?

ಈಗಿನ ಮುಖ್ಯಮಂತ್ರಿಯವರು ಜನತೆಗಾಗಿ 12 ಆಸ್ಪತ್ರೆಗಳನ್ನು ಮಾಡಿಸಿರುವರು ನಿಜ. ಆದರೆ, ಅದು ಸಾರ್ವಜನಿಕರ ಹಣ (ತೆರಿಗೆಯ) ದಿಂದ ಮಾತ್ರ!

ನಮ್ಮ ರಾಜ್ಯದ ಪ್ರಸಿದ್ಧ ನೇತ್ರ ವೈದ್ಯ ಡಾ.ಎಂ.ಸಿ.ಮೋದಿ ಅವರ ಹೆಸರು ಯಾರಿಗೆ ತಿಳಿದಿಲ್ಲ! ಮುರುಗಪ್ಪ ಚೆನ್ನವೀರಪ್ಪ ಮೋದಿಯವರು ತಮ್ಮ ಜೀವಿತಾವಧಿಯಲ್ಲಿ ಆರು ಲಕ್ಷಕ್ಕೂ ಹೆಚ್ಚು ಕಣ್ಣಿನ ಶಸ್ತ್ರಚಿಕಿತ್ಸೆಗಳನ್ನು (1943 ರಿಂದ 1993ರ ವರೆಗೆ) ಯಶಸ್ವಿಯಾಗಿ ನಡೆಸಿ, ಅದೊಂದು ಗಿನ್ನೆಸ್ ವಿಶ್ವದಾಖಲೆ ಎನಿಸಿದೆ. ಸರಾಸರಿ ವರುಷಕ್ಕೆ 12,211 ನೇತ್ರ ಚಿಕಿತ್ಸೆಗಳು!

ತಮ್ಮ ಜೀವಮಾನವನ್ನೆಲ್ಲಾ ಜನರ ವೈದ್ಯಕೀಯ ಸೇವೆಗೇ ಮುಡಿಪು ಇಟ್ಟಿದ್ದವರು. ಇವರ ಸೇವೆಯ ಭಾಗ್ಯ ಪಡೆದವರು ಗ್ರಾಮೀಣ ಬಡಜನರೆ ಬಹುತೇಕ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪಾಲಿಕೆಗೆ ಹಾಲಿ ರಸ್ತೆಗೆ ಬೇರೆ ಹೆಸರಿಡಲೇಬೇಕು ಎನಿಸಿದಲ್ಲಿ, ಗಿನ್ನೆಸ್ ದಾಖಲೆಯ ಈ ಧೀಮಂತರ ಹೆಸರನ್ನೇ ಈ ರಸ್ತೆಗೆ ಇರಿಸುವುದೇ ಸೂಕ್ತ!!–**ಡಿ.ವಿ.ಎಂ. ಪ್ರಕಾಶ್, ಗೋಕುಲ ರಸ್ತೆ ಮೈಸೂರು**

ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ರಂಗಭೂಮಿ ಪರಿಣಾಮಕಾರಿ ಮಾಧ್ಯಮ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ಉಪನಿರ್ದೇಶಕ ಮ.ಗು.ಸದಾನಂದಯ್ಯ



ಕಿರುರಂಗ ಮಂದಿರದಲ್ಲಿ ಸಂಚಲನ ರಂಗೋತ್ಸವದಲ್ಲಿ ನಿವೃತ್ತ ಅಧಿಕಾರಿ ಮ.ಗು.ಸದಾನಂದಯ್ಯ ಮಾತನಾಡಿದರು.

ಮೈಸೂರು,ಜ.1(ಪಿಎಂ)– ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ರಂಗಭೂಮಿ ಪರಿಣಾಮಕಾರಿ ಮಾಧ್ಯಮ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ಉಪನಿರ್ದೇಶಕ ಮ.ಗು. ಸದಾನಂದಯ್ಯ ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಸಂಚಲನ ಮೈಸೂರು, ಬಳ್ಳಾರಿ ಜಿಲ್ಲೆಯ ಸಿರಿಗೇರಿಯ ಧಾತ್ರಿ ರಂಗಸಂಸ್ಥೆ, ಜಿಪಿಐಇಆರ್ ರಂಗತಂಡ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ ಸಂಚಲನ ರಂಗೋತ್ಸವ 2024–25ರ 2ನೇ ದಿನದ ಸಭಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಮಾಜದಲ್ಲಿ ಸ್ವಾಸ್ಥ್ಯ ನೆಲೆಸಲು ವಿವಿಧ ಕಲಾ ಪ್ರಕಾರಗಳ ಪ್ರದರ್ಶನ ನಿರಂತರವಾಗಿರುವುದು ಅಗತ್ಯ. ಈ ಪೈಕಿ ರಂಗಭೂಮಿ ಪರಿಣಾಮಕಾರಿಯಾಗಿ ನಮ್ಮ ಮನಸ್ಸನ್ನು ಮುಟ್ಟಲಿದೆ. ಮೈಸೂರಿನಲ್ಲಿ ನಿರಂತರವಾಗಿ ರಂಗಭೂಮಿ ಚಟುವಟಿಕೆಗಳು ನಡೆಯುತ್ತಿದ್ದು, ಇದು ಆರೋಗ್ಯಕರ ಸಮಾಜದ ಲಕ್ಷಣ ಎಂದು ತಿಳಿಸಿದರು.

ಬಳಿಕ ಧಾತ್ರಿ ರಂಗಸಂಸ್ಥೆ ತಂಡದಿಂದ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಚಾರ್ಯ ಸ್ವಾಮೀಜಿ ರಚನೆಯ 'ಮೋಳಿಗೆ ಮಾರಯ್ಯ' ನಾಟಕ ಪ್ರದರ್ಶನ ನಡೆಯಿತು. 12ನೇ ಶತಮಾನದ ಬಸವಾದಿ ಶರಣರದಲ್ಲಿ ಮೋಳಿಗೆ ಮಾರಯ್ಯ ಒಬ್ಬರಾಗಿದ್ದು, ಅವರನ್ನು ಕುರಿತಂತೆ ಈ ನಾಟಕ ರಚಿತವಾಗಿದೆ. ಪತ್ರಕರ್ತ ಕೆ.ನರಸಿಂಹಮೂರ್ತಿ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿ ವೇದಿಕೆ ಅಧ್ಯಕ್ಷ ರಾಜೇಶ್ ತಲಕಾಡು, ಸಂಚಲನ ಅಧ್ಯಕ್ಷ ದೀಪಕ್ ಮೈಸೂರು, ಧಾತ್ರಿ ರಂಗಸಂಸ್ಥೆಯ ಮುಖ್ಯಸ್ಥ ಮಂಜು ಸಿರಿಗೇರಿ ಮತ್ತಿತರರು ಸಭಾ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಇಂದು ಭಾವಗೀತೆ, ಜನಪದ, ಚಿತ್ರಗೀತೆಗಳ ಗಾಯನ ಕಾರ್ಯಕ್ರಮ

ಮೈಸೂರು,ಜ.1(ಪಿಎಂ)– ಹಂಸಧ್ವನಿ ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ಆಶ್ರಯದಲ್ಲಿ ಜ.2ರಂದು ಸಾಹಿತ್ಯ ಸೌರಭ–ಸಂಗೀತ ಮಾಧುರ್ಯ ಶೀರ್ಷಿಕೆಯಡಿ ಭಾವಗೀತೆ, ಜನಪದ ಮತ್ತು ಚಿತ್ರಗೀತೆಗಳ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.


ಮೈಸೂರಿನ ಕುವೆಂಪುನಗರದ ಗಾನಭಾರತಿಯಲ್ಲಿ ಅಂದು ಸಂಜೆ 6ಕ್ಕೆ ಕಾರ್ಯಕ್ರಮ ಆರಂಭವಾಗಲಿದೆ. ಉದ್ಘಾಟನಾ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ), ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ಡಾ.ನಾಗರಾಜ ವಿ.ಭೈರಿ, ಗಾಯಕ ಪ್ರೊಎಸ್.ಮಲ್ಲಣ್ಣ, ಸಂಗೀತ ನಿರ್ದೇಶಕ ಎ.ಎಸ್. ಪ್ರಸನ್ನಕುಮಾರ್ ಭಾಗವಹಿಸಲಿದ್ದಾರೆ. ಗಾಯಕರಾದ ಹೆಚ್.ಪಿ.ಮಲ್ಲಿಕಾರ್ಜುಸ್ವಾಮಿ, ಹೆಚ್.ಪಿ.ಸುದರ್ಶಿನಿ, ಪೃಥ್ವಿರಾಜ್ ಹಾಲಹಳ್ಳಿ, ಹಂಸಿನಿ ಕುಮಾರ ಗೀತೆಗಳನ್ನು ಸಾದರಪಡಿಸಲಿದ್ದಾರೆ. ಪಕ್ಕವಾದ್ಯದಲ್ಲಿ ಶರತ್ ದುರ್ಗ (ಕೀ ಬೋರ್ಡ್), ವಿನ್ಸೆಂಟ್ (ರಿದಂಪ್ಯಾಡ್), ಪರಮೇಶ್ವರ್ ಹೆಗಡೆ (ತಬಲ) ಸಹಕಾರ ನೀಡಲಿದ್ದಾರೆ. ಯಾವುದೇ ಸಭಾ ಕಾರ್ಯಕ್ರಮ ಇರುವುದಿಲ್ಲವೆಂದು ಪ್ರಕಟಣೆ ತಿಳಿಸಿದೆ.

ಸನ್ಮಾನ...



ಸಂಧ್ಯಾ ಸುರಕ್ಷಾ ಟ್ರಸ್ಟ್, ಅಟಲ್ ಜಿ ಸಂಸ್ಕಾರ ಭಾರತ್ ಪ್ರತಿಷ್ಠಾನ, ಜಿಲ್ಲಾ ಬ್ರಾಹ್ಮಣ ಮಹಾ ಸಭಾ, ಶಾಕಂಬರಿ ಧಾರ್ಮಿಕ ಕೇಂದ್ರ ಏರ್ಪಡಿಸಿದ್ದ ಅಟಲ್ ಜಿ 9ನೇ ರಾಷ್ಟ್ರೀಯ ಪುರಸ್ಕಾರ, ಆರ್.ಗುಂಡೂರಾವ್ 9ನೇ ರಾಜ್ಯ ಪುರಸ್ಕಾರ, ಜಿಲ್ಲಾ ಬ್ರಾಹ್ಮಣ ಮಹಿಳಾ ಸಮ್ಮೇಳನ, ಅಖಿಲ ಕರ್ನಾಟಕ ಬ್ರಾಹ್ಮಣ ಸುವರ್ಣ ವರ್ಷದ ಮಹಾ ಸಮ್ಮೇಳನದ ವಿಶ್ವಾಮಿತ್ರ ಕಾರ್ಯಕ್ರಮದ ನೆನಪಿಗಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರನ್ನು ಅಧ್ಯಕ್ಷ ಬಿ.ಆರ್.ನಟರಾಜ್ ಜೋಯಿಸ್ ಸನ್ಮಾನಿಸಿದರು. ಅನಂತಪ್ರಸಾದ್ ಚಿತ್ರದಲ್ಲಿದ್ದಾರೆ.

ಅಭಿನಂದನೆ



ದಿ ಮೈಸೂರು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ನಿರ್ದೇಶಕರಾಗಿ ಆಯ್ಕೆಯಾಗಿರುವ ಒಂಟಿಕೊಪ್ಪಲ್ ವಿ.ಎಂ.ನಾಗರಾಜ್ ಅವರನ್ನು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಎಸ್‌ಟಿ ವಿಭಾಗದ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಾಲಿಕೆ ಮಾಜಿ ಸದಸ್ಯ ಎಂ.ಚಿಕ್ಕವೆಂಕಟು, ಸಿ.ಡಿ.ಕುಮಾರ್ ಅಭಿನಂದಿಸಿದರು.

ಕೆಎಸ್‌ಆರ್‌ಟಿಸಿ ನೌಕರರಿಗೆ ನಗದುರಹಿತ ವೈದ್ಯಕೀಯ ಸೇವೆ

ಬೆಂಗಳೂರು,ಜ.1–ರಾಜ್ಯ ಸರ್ಕಾರದ ಒಡೆತನದ ನಾಲ್ಕು ನಿಗಮಗಳ ಪೈಕಿ ಒಂದು ನಿಗಮದ (ಕೆಎಸ್‌ಆರ್‌ಟಿಸಿ) ನೌಕರರಿಗೆ ರಾಜ್ಯ ಸರ್ಕಾರ ಸಿಹಿ ಸುದ್ದಿ ನೀಡಿದೆ. ಉಳಿದ ಮೂರು ನಿಗಮಗಳಿಗೆ (ವಾಯುವ್ಯ ಕರ್ನಾಟಕ, ಬಿಎಂಟಿಸಿ ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ) ಎರಡನೇ ಹಂತದಲ್ಲಿ ಹೊಸ ಸೌಲಭ್ಯ ಶುರುವಾಗಲಿದೆ.

ಕೆಎಸ್‌ಆರ್‌ಟಿಸಿ ಸಿಬ್ಬಂದಿಗಳಿಗೆ ಚಿಕಿತ್ಸಾ ವೆಚ್ಚದ ಮಿತಿಯಿಲ್ಲದ ನಗದು ರಹಿತ ಚಿಕಿತ್ಸೆ ವ್ಯವಸ್ಥೆಯನ್ನು ಜಾರಿಗೆ ತರಲು ಸಾರಿಗೆ ಇಲಾಖೆ ಮುಂದಾಗಿದೆ. ಇದೇ ಜನವರಿ 6ರಿಂದ ಅನ್ವಯವಾಗುವಂತೆ, ಈ ಸೌಲಭ್ಯ ಆರಂಭವಾಗಲಿದೆ. ಈ ಸೌಲಭ್ಯವನ್ನು ಜಾರಿಗೆ ತರುವ ಮೂಲಕ ಕ್ಯಾಶ್‌ಲೆಸ್ ಚಿಕಿತ್ಸಾ ಸೌಲಭ್ಯವನ್ನು ಜಾರಿಗೆ ತಂದ, ಸರ್ಕಾರಿ ಒಡೆತನದ ಸಾರಿಗೆ ಸಂಸ್ಥೆಗಳ ಪೈಕಿ ಮೊದಲನೆಯ ರಾಜ್ಯ ಎನ್ನುವ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಲಿದೆ. ರಾಜ್ಯಾದ್ಯಂತ ಇರುವ 225 ಆಸ್ಪತ್ರೆಗಳನ್ನು ಈ ಯೋಜನೆಗಾಗಿ ನೋಂದಣಿ ಮಾಡಲಾಗಿದೆ.



ಈ ಹೊಸ ಸೌಲಭ್ಯದಲ್ಲಿ ಕಣ್ಣಿಗೆ ಸಂಬಂಧಪಟ್ಟ ಚಿಕಿತ್ಸೆಗಳನ್ನು ಹಿಡಿದು ಎಲ್ಲಾ ರೀತಿಯ ಅನಾರೋಗ್ಯಕ್ಕೂ ಚಿಕಿತ್ಸೆ ಸಿಗಲಿದೆ. ಇದುವರೆಗೆ, ಚಿಕಿತ್ಸಾ ವೆಚ್ಚದ ಮರುಪಾವತಿ ವ್ಯವಸ್ಥೆ ಇತ್ತು. ಇದರಿಂದಾಗಿ, ಸಾರಿಗೆ ಸಂಸ್ಥೆಯ ನೌಕರರು, ಆಸ್ಪತ್ರೆಗೆ ದಾಖಲಾಗುವ ಮುನ್ನ, ದುಡ್ಡನ್ನು ಹೊಂದಿಸಿಕೊಳ್ಳಬೇಕಿತ್ತು. ಇನ್ನು ಮುಂದೆ, ಈ ಬವಣೆ ತಪ್ಪಲಿದೆ.ಯಾವ ಯಾವ ಆಸ್ಪತ್ರೆಗಳಲ್ಲಿ ನೋಂದಣಿ ಮಾಡಲಾಗಿದೆ ಎಂಬ ಮಾಹಿತಿಯನ್ನು ಸಿಬ್ಬಂದಿ ನೀಡಲಾಗುವುದು. ಜೊತೆಗೆ, ಆರೋಗ್ಯ ಕಾರ್ಡ್ ಅನ್ನೂ ವಿತರಿಸುತ್ತೇವೆ. ಕಾರ್ಡ್ ಅನ್ನು ಆಸ್ಪತ್ರೆಗೆ ತೋರಿಸಿ, ಚಿಕಿತ್ಸೆಯನ್ನು ಪಡೆಯಬಹುದಾಗಿದೆ ಎಂದು ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್.ಶ್ರೀನಿವಾಸ್ ಹೇಳಿದ್ದಾರೆ.

ತರಬೇತಿಯಲ್ಲಿರುವ ಸಿಬ್ಬಂದಿ ಯಾವುದೇ ವಂತಿಕೆಯನ್ನು ಪಾವತಿಸಬೇಕಾಗಿಲ್ಲ. ಪರ್ಮನೆಂಟ್ ನೌಕರರು ವಾರ್ಷಿಕ 650 ರೂಪಾಯಿ ವಂತಿಕೆಯನ್ನು ಪಾವತಿಸಬೇಕಾಗುತ್ತದೆ. ಸಂಸ್ಥೆ ಶೇ.5ರಷ್ಟು ಹೆಚ್ಚಿಗೆ ಪಾವತಿಯನ್ನು ಮಾಡಲಿದೆ ಎಂದು ಶ್ರೀನಿವಾಸ್ ಹೇಳಿದ್ದಾರೆ. ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆ, ನಾರಾಯಣ ಹೃದಯಾಲಯ, ಎಚ್‌ಸಿಜಿ ಮುಂತಾದ ಆಸ್ಪತ್ರೆಗಳಲ್ಲೂ ಈ ಚಿಕಿತ್ಸೆಗೆ ನೋಂದಣಿಯನ್ನು ಮಾಡಲಾಗಿದೆ. ಸದ್ಯ, ಕೆಎಸ್‌ಆರ್‌ಟಿಯಲ್ಲಿ ಸುಮಾರು 34 ಸಾವಿರ ನೌಕರರು ಇದ್ದಾರೆ. ಒಟ್ಟಾರೆಯಾಗಿ, ನಾಲ್ಕು ನಿಗಮಗಳು ಸೇರಿ 1.15 ಲಕ್ಷ ಸಿಬ್ಬಂದಿ ಸಾರಿಗೆ ಸಂಸ್ಥೆಯಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಸಿಬ್ಬಂದಿಯ ಕುಟುಂಬದ ಸದಸ್ಯರು (ಪತಿ,ಪತ್ನಿ, ಮಕ್ಕಳು, ತಂದೆ, ತಾಯಿ) ಈ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಒಟ್ಟಾರೆಯಾಗಿ, ಕುಟುಂಬದ ಆರು ಸದಸ್ಯರಿಗೆ ನಗದು ರಹಿತ ಆರೋಗ್ಯ ಸೇವೆ ಲಭ್ಯವಾಗಲಿದೆ. ಒಟ್ಟು ಸಿಬ್ಬಂದಿ ಮತ್ತು ಕುಟುಂಬದ ಸದಸ್ಯರನ್ನು ಸೇರಿಸಿದರೆ ಸುಮಾರು 7 ಲಕ್ಷ ಸಾರಿಗೆ ಸಂಸ್ಥೆಯ ಕುಟುಂಬ ಈ ಸೌಲಭ್ಯವನ್ನು ಪಡೆದುಕೊಳ್ಳಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹೊಸ ವರ್ಷ; ದೇವಾಲಯಗಳಿಗೆ ಹರಿದು ಬಂದ ಭಕ್ತ ಸಾಗರ





ಹೊಸ ವರ್ಷದ ಅಂಗವಾಗಿ ಚಾಮುಂಡಿಬೆಟ್ಟದಲ್ಲಿ ನೆರೆದಿರುವ ಭಕ್ತ ಸಾಗರ.

ಮೈಸೂರು, ಜ.1(ಎಂಟಿವೈ)– ಹೊಸ ವರ್ಷದ ಅಂಗವಾಗಿ ಕಳೆದ ರಾತ್ರಿ ಸಂಗೀತ, ನೃತ್ಯ ಹಾಗೂ ಪಾನಗೋಷ್ಠಿಯಲ್ಲಿ ಮಿಂದೆದಿದ್ದ ಮೈಸೂರಿಗರು ಬುಧವಾರ ಮುಂಜಾನೆಯಿಂದಲೇ ದೇವಾಲಯಗಳ ಮೊರೆ ಹೋದ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟ ಸೇರಿದಂತೆ ಜಿಲ್ಲೆಯ ವಿವಿಧ ದೇವಾಲಯಗಳಲ್ಲಿ ಭಕ್ತರ ದಂಡು ಕಿಕ್ಕಿರಿದು ತುಂಬಿ ತುಳುಕಿತು.

ಪ್ರತಿವರ್ಷದಂತೆ ಈ ಬಾರಿಯೂ ರಾತ್ರೀಯಿಡೀ ಮೋಜು–ಮಸ್ತಿಯೊಂದಿಗೆ ಹೊಸ ವರ್ಷವನ್ನು ಆಚರಿಸುವ ಸಂಪ್ರದಾಯ ಹೊಂದಿರುವ ನಗರದ ಜನತೆ ಹಾಗೂ ಪ್ರವಾಸಿಗರು ಹೊಸ ವರ್ಷದ ಮೊದಲ ದಿನ ದೇವಾಲಯಗಳಿಗೆ ಬೇಟಿ ನೀಡಿ ದೇವರ ದರ್ಶನ ಪಡೆಯುವುದರೊಂದಿಗೆ ಇಷ್ಟಾರ್ಥ ಸಿದ್ದಿಗಾಗಿ ವಿಶೇಷ ಪೂಜೆ ಸಲ್ಲಿಸಿದರು. ಇದರಿಂದಾಗಿ ಇಂದು ಮೈಸೂರಿನ ವಿವಿಧೆಡೆ ಇರುವ ಬಹುತೇಕ ಎಲ್ಲಾ ದೇವಾಲಯಗಳಲ್ಲಿಯೂ ಭಕ್ತರ ದಂಡು ಕಂಡು ಬಂತು.

ಚಾಮುಂಡಿಬೆಟ್ಟ: ಮೈಸೂರಿನ ಪ್ರಮುಖ ದೇವಾಲಯಗಳಲ್ಲಿ ಅಗ್ರಸ್ಥಾನ ಹೊಂದಿರುವ ಚಾಮುಂಡಿಬೆಟ್ಟದ ದೇವಾಲಯಕ್ಕೆ ಇಂದು ಬೆಳಗ್ಗಿನಿಂದಲೇ ಭಕ್ತ ಸಾಗರವೇ ಹರಿದು ಬಂದಿತ್ತು. ಕುಟುಂಬದ ಸದಸ್ಯರೊಂದಿಗೆ ಚಾಮುಂಡಿಬೆಟ್ಟದತ್ತ ದಾವಿಸತೊಡಗಿದರು. ಏಕಕಾಲದಲ್ಲಿ ಮೈಸೂರಿನ ನಿವಾಸಿಗಳು ಹಾಗೂ ವಿವಿಧೆಡೆಗಳಿಂದ ಪ್ರವಾಸಿಗರು ಆಗಮಿಸಿದ್ದರಿಂದ ಚಾಮುಂಡಿಬೆಟ್ಟದಲ್ಲಿ ಜನಜಂಗುಳಿಯೊಂದಿಗೆ ವಾಹನ ದಟ್ಟಣೆ ಹೆಚ್ಚಾದ ಹಿನ್ನೆಲೆಯಲ್ಲಿ ಭಕ್ತರು ಹಾಗೂ ಪ್ರವಾಸಿಗರು ಪರದಾಡುವಂತಾಯಿತು. ಎಂದಿನಿಂದ ಹೊಸ ವರ್ಷದ ಮೊದಲ ಬೆಟ್ಟಕ್ಕೆ ಬರುವವರ ಸಂಖ್ಯೆ ಹೆಚ್ಚಾಗಿರುತ್ತದೆಯಾದರೂ ಇಂದು ಮಾತ್ರ ಮಿತಿ ಮೀರಿದ ಸಂಖ್ಯೆಯಲ್ಲಿ ಭಕ್ತರು ನಾಡದೇವಿಯ ದರ್ಶನ ಪಡೆಯುವುದಕ್ಕೆ ಆಗಮಿಸಿದ್ದರು. ದೇವಾಲಯದ ಸುತ್ತಮುತ್ತಲಿನ ಸ್ಥಳಗಳಲ್ಲಿ ಭಕ್ತರ ದಂಡು ಕಿಕ್ಕಿರಿದು ತುಂಬಿತ್ತು. ದೇವಾಲಯಕ್ಕೆ ಧರ್ಮ ದರ್ಶನ, 100 ರೂ. ಹಾಗೂ 300 ರೂ. ಟಿಕೆಟ್ ಪಡೆದು ವಿಶೇಷ ದರ್ಶನ ಪಡೆಯುವುದಕ್ಕಾಗಿ ಸಾವಿರಾರು ಮಂದಿ ಭಕ್ತರು ಸರದಿ ಸಾಲಿನಲ್ಲಿ ನಿಂತಿದ್ದರು. ಮುಂಜಾನೆ 6 ಗಂಟೆಯಿಂದಲೇ ಅನೇಕ ಮಂದಿ ಭಕ್ತರು ಕಾಲ್ನಡಿಗೆಯ ಮೂಲಕ ಚಾಮುಂಡಿಬೆಟ್ಟ ಆಗಮಿಸಿದ್ದರು. ಇದರೊಂದಿಗೆ ವಿವಿಧ ರಾಜ್ಯ, ಜಿಲ್ಲೆಗಳಿಂದಲೂ ಪ್ರವಾಸಿಗರು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬೆಟ್ಟಕ್ಕೆ ಬಂದಿದ್ದರಿಂದ ಬೆಟ್ಟದಲ್ಲಿ ಜನಜಾತ್ರೆ ಉಂಟಾಗಿತ್ತು.

ಟ್ರಾಫಿಕ್ ಜಾಮ್: ಏಕಕಾಲಕ್ಕೆ ಸಾವಿರಾರು ವಾಹನಗಳು ಚಾಮುಂಡಿಬೆಟ್ಟಕ್ಕೆ ಆಗಮಿಸಿದ ಹಿನ್ನೆಲೆಯಲ್ಲಿ ಬೆಟ್ಟದ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಉಂಟಾಗಿತ್ತು. ನೂರಾರು ವಾಹನಗಳು ಬೆಟ್ಟಕ್ಕೆ ಆಗಮಿಸಿದ್ದರಿಂದ ಬೆಟ್ಟದ ರಸ್ತೆಯಲ್ಲಿ ಬೆಳಗ್ಗಿನಿಂದ ಸಂಜೆವರೆಗೂ ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಲೇ ಇತ್ತು.

ಗಣಪತಿ ಆಶ್ರಮದಲ್ಲಿ: ಹೊಸ ವರ್ಷದ ಹಿನ್ನೆಲೆಯಲ್ಲಿ ವಿವಿಧೆಡೆಯಿಂದ ಮೈಸೂರು–ನಂಜನಗೂಡು ರಸ್ತೆಯಲ್ಲಿರುವ ಗಣಪತಿ ಆಶ್ರಮಕ್ಕೆ ಬೇಟಿ ನೀಡಿ, ಅಲ್ಲಿರುವ ಶ್ರೀ ವೆಂಕಟರಮಣಸ್ವಾಮಿ ದೇವಾಲಯಕ್ಕೆ ನೂರಾರು ಮಂದಿ ಭಕ್ತರು ಭೇಟಿ ನೀಡಿ ದೇವರ ದರ್ಶನ ಪಡೆದರು.

ಉತ್ತನಹಳ್ಳಿ: ಚಾಮುಂಡಿಬೆಟ್ಟಕ್ಕೆ ಭಕ್ತರ ಸಂಖ್ಯೆ ಹೆಚ್ಚಾಗಿದ್ದ ಕಾರಣ ನೂರಾರು ಮಂದಿ ಉತ್ತನಹಳ್ಳಿಯಲ್ಲಿರುವ ಶ್ರೀ ತ್ರಿಪುರ ಸುಂದರಿ ದೇವಿ ದೇವಾಲಯಕ್ಕೆ ಬೇಟಿ ದೇವಿಯ ದರ್ಶನ ಪಡೆದರು. ಬೆಳಗ್ಗಿನಿಂದಲೇ ಉತ್ತನಹಳ್ಳಿಗೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬೇಟಿ ನೀಡುವ ಮೂಲಕ ಹೊಸ ವರ್ಷವನ್ನು ಆಚರಿಸಿದರು.

ನಿಮಿಷಾಂಭದೇವಿ ದೇವಾಲಯ: ಶ್ರೀರಂಗಪಟ್ಟಣ ತಾಲೂಕಿನ ಗಂಜಾಂನಲ್ಲಿರುವ ಶ್ರೀ ನಿಮಿಷಾಂಭದೇವಿ ದೇವಾಲಯಕ್ಕೂ ಭಕ್ತರ ದಂಡು ಹೆಚ್ಚಿನ ಸಂಖ್ಯೆಯಲ್ಲಿ ಹರಿದು ಬಂತು. ಹೊಸ ವರ್ಷದ ಮೊದಲ ದಿನ ದೇವಿಯ ದರ್ಶನ ಪಡೆದ ಅಪಾರ ಸಂಖ್ಯೆಯ ಭಕ್ತರು ದೇವಿಯ ದರ್ಶನ ಪಡೆದು ಪುಳಕಿತರಾದರು.

ನಂಜನಗೂಡು: ನಂಜಂನಗೂಡಿನಲ್ಲಿರುವ ಶ್ರೀ ನಂಜುಂಡೇಶ್ವರನ ಸನ್ನಿಧಿಯಲ್ಲಿಯೂ ಸೋಮವಾರ ಅಪಾರ ಸಂಖ್ಯೆಯ ಭಕ್ತರು, ಪ್ರವಾಸಿಗರು ತೆರಳಿದ್ದರಿಂದ ದೇವರ ದರ್ಶನ ಪಡೆಯುವುದಕ್ಕೆ ಗಂಟೆಗಟ್ಟಲೇ ಸರದಿ ಸಾಲಿನಲ್ಲಿ ಕಾದು ನಿಲ್ಲುವಂತಾಯಿತು.

ಮೈಸೂರಿನ ವಿವಿಧೆಡೆ: ಈ ನಡುವೆ ಮೈಸೂರಿನ ನಜರ್‌ಬಾದ್‌ನಲ್ಲಿರುವ ಮಲೆ ಮಹಾದೇಶ್ವರಸ್ವಾಮಿ ದೇವಾಲಯ, ಇಟ್ಟಿಗೆಗೂಡಿನಲ್ಲಿರುವ ದುರ್ಗಾಪರಮೇಶ್ವರಿ ದೇವಾಲಯ, ಕೆಜಿ ಕೊಪ್ಪಲಿನಲ್ಲಿರುವ ಬಂದಂತಮ್ಮ ದೇವಿ ದೇವಾಲಯ, ಕೋಟೆ ಆಂಜನೇಯಸ್ವಾಮಿ ದೇವಾಲಯ ಸೇರಿದಂತೆ ಅನೇಕ ದೇವಾಲಯಗಳಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಗಳಲ್ಲಿ ಆಗಮಿಸಿ ದೇವರ ದರ್ಶನ ಪಡೆದು ಪೂಜೆ ಸಲ್ಲಿಸುವ ಮೂಲಕ ಹೊಸ ವರ್ಷವನ್ನು ಸಂಭ್ರಮದಿಂದ ಭಕ್ತಿಯಿಂದ ಆಚರಿಸಿದರು.

ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಬೆಲೆಯಲ್ಲಿ ಇಳಿಕೆ



ನವದೆಹಲಿ, ಜ.1– ತೈಲ ಮಾರುಕಟ್ಟೆ ಕಂಪನಿಗಳು ಪ್ರತಿ ತಿಂಗಳ ಮೊದಲ ದಿನದಂದು ಎಲ್‌ಪಿಜಿ ಸಿಲಿಂಡರ್‌ಗಳನ್ನು ಪರಿಷ್ಕರಣೆ ಮಾಡುತ್ತವೆ. ಹೊಸ ದರಗಳು ತಿಂಗಳ ಮೊದಲ ದಿನದಿಂದಲೇ ಅನ್ವಯವಾಗುತ್ತವೆ. ಜನವರಿಯಲ್ಲಿಯೂ ವಾಣಿಜ್ಯ ಬಳಕೆಯ 19 ಕೆಜಿ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು ಪರಿಶೀಲಿಸಿ ಹೊಸ ಬೆಲೆಯನ್ನು ಪ್ರಕಟಿಸಿವೆ. ಇಂದಿನಿಂದ 19 ಕೆಜಿ ಸಿಲಿಂಡರ್ ಬೆಲೆಯಲ್ಲಿ ಇಳಿಕೆಯಾಗಿದೆ. ಕೋಲ್ಕತ್ತಾದಲ್ಲಿ 19 ಕೆಜಿ ಸಿಲಿಂಡರ್ ಬೆಲೆ 1927 ರೂ.ಗಳಿಂದ 1911 ರೂ.ಗೆ ಇಳಿಕೆಯಾಗಿದೆ. ಮುಂಬೈನಲ್ಲಿ 1771 ರೂ.ಗಳಿಂದ 1756 ರೂ.ಗೆ ಇಳಿದಿದೆ. ಚೆನ್ನೈನಲ್ಲಿ 1980.50 ರೂ.ಗಳಿಂದ 1980.50. ರೂ.ಗೆ ಕಡಿಮೆಯಾಗಿದೆ.

ರಾಜಧಾನಿ ಬೆಂಗಳೂರಿನಲ್ಲಿಯೂ ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆ ಮೇಲೆ 16 ರೂ.ವರೆಗೆ ಇಳಿಕೆಯಾಗಿದೆ. ಡಿಸೆಂಬರ್‌ನಲ್ಲಿ 1,911 ರೂಪಾಯಿ ಪಾವತಿಸಲಾಗುತ್ತಿತ್ತು. ಜನವರಿಯಲ್ಲಿ ಬೆಲೆ ಇಳಿಕೆಯಾಗಿದ್ದು, ಈ ತಿಂಗಳು 19 ಕೆಜಿ ಎಲ್‌ಪಿಜಿ ಸಿಲಿಂಡರ್ 1,895 ರೂಪಾಯಿಗೆ ಸಿಗುತ್ತದೆ.

ಗೃಹ ಬಳಕೆ ಸಿಲಿಂಡರ್ ಬೆಲೆಯಲ್ಲಿ ಯಾವುದೇ ಬದಲಾವಣೆಗಳು ಆಗಿಲ್ಲ. ಹಳೆಯ ದರಗಳೇ ಮುಂದುವರಿಯಲಿವೆ. ಈ ವರ್ಷದ ಆಗಸ್ಟ್‌ನಿಂದ ಗೃಹ ಬಳಕೆ ಸಿಲಿಂಡರ್ ಬೆಲೆಯಲ್ಲಿ ಯಾವುದೇ ಬದಲಾವಣೆಗಳು ಆಗಿಲ್ಲ. ಕಳೆದ 5 ತಿಂಗಳಿನಿಂದ ಗೃಹಬಳಕೆ ಸಿಲಿಂಡರ್ ಬೆಲೆ ಸ್ಥಿರವಾಗಿದೆ. ಇಂಡೇನ್ ಕಂಪನಿ ಅತಿದೊಡ್ಡ ಎಲ್‌ಪಿಜಿ ಬ್ರ್ಯಾಂಡ್ ಆಗಿದ್ದು, ಇಂಡಿಯನ್ ಆಯಿಲ್ ಎರಡನೇ ಸ್ಥಾನದಲ್ಲಿದೆ. ಇತ್ತೀಚೆಗೆ ಎಲ್‌ಪಿಜಿ ಸಿಲಿಂಡರ್‌ಗಳನ್ನು 5 ಕೆಜಿ ಮತ್ತು 14.2 ಕೆಜಿಗಳಲ್ಲಿಯೂ ವಿತರಣೆ ಮಾಡಲಾಗುತ್ತಿದೆ. ವಾಣಿಜ್ಯ ಬಳಕೆ ಸಿಲಿಂಡರ್‌ಗಳು 19 ಕೆಜಿ, 47.5ಕೆಜಿ ಮತ್ತು 425 ಕೆಜಿ ವಿತರಣೆ ಮಾಡಲಾಗುತ್ತದೆ. 425 ಕೆಜಿ ಜಂಬೋ ಸಿಲಿಂಡರ್‌ಗಳನ್ನು ಕೈಗಾರಿಕೆಗಳಲ್ಲಿ ಬಳಸಲಾಗುತ್ತದೆ.

ಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ 2 ಲಕ್ಷಕ್ಕೂ ಅಧಿಕ ಭಕ್ತರಿಗೆ ಲಾಡು ಪ್ರಸಾದ ವಿತರಣೆ





ಹೊಸ ವರ್ಷದ ಅಂಗವಾಗಿ ಮೈಸೂರಿನ ವಿಜಯನಗರದಲ್ಲಿರುವ ಶ್ರೀಂಯೋಗ ನರಸಿಂಹಸ್ವಾಮಿ ದೇವಾಲಯದ ವತಿಯಿಂದ ತಿರುಪತಿ ಮಾದರಿಯ ಎರಡು ಲಕ್ಷಕ್ಕೂ ಹೆಚ್ಚು ಲಾಡುಗಳನ್ನು ಭಕ್ತಾದಿಗಳಿಗೆ ವಿತರಿಸಲಾಯಿತು.

ಮೈಸೂರು,ಜ.1(ಜಿಎ)–ಹೊಸ ವರ್ಷದ ಅಂಗವಾಗಿ ಮೈಸೂರಿನ ವಿಜಯನಗರದಲ್ಲಿರುವ ಶ್ರೀಯೋಗ ನರಸಿಂಹಸ್ವಾಮಿ ದೇವಾಲಯದ ವತಿಯಿಂದ ತಿರುಪತಿ ಮಾದರಿಯ ಎರಡು ಲಕ್ಷಕ್ಕೂ ಹೆಚ್ಚು ಲಾಡುಗಳನ್ನು ಭಕ್ತಾದಿಗಳಿಗೆ ವಿತರಿಸಲಾಯಿತು.

ಬೆಳಗ್ಗೆಯಿಂದಲ್ಲೇ 4 ಗಂಟೆಗೆ ಶ್ರೀ ಯೋಗ ನರಸಿಂಹಸ್ವಾಮಿಗೆ ನಿತ್ಯಾರಾಧನೆ, ತೋಮಾಲೆ ಸೇವೆ, ಸ್ವರ್ಣ ಪುಷ್ಪ ಸಹಸ್ರನಾಮ ಸಲ್ಲಿಸಿ, ಉತ್ಸವ ಮೂರ್ತಿಯ ಮೆರವಣಿಗೆ ನಡೆಸಿ, ದೇವರಿಗೆ 50 ಕ್ವಿಂಟಾಲ್ ಪುಳಿ ಯೋಗರೆ ನೈವೇದ್ಯ ಅರ್ಪಿಸಲಾಯಿತು. ದೇವಾಲಯಕ್ಕೆ ಆಗಮಿಸಿ ದೇವರ ದರ್ಶನ ಪಡೆದು ತೆರಳುತ್ತಿದ್ದ ಭಕ್ತಾದಿಗಳಿಗೆ ದೇವ ಸ್ಥಾನದ ಸಂಸ್ಥಾಪಕ ನಾಡೋಜ ಡಾ.ಭಾಷ್ಯ ಸ್ವಾಮೀಜಿ, ಆಡಳಿತಾಧಿಕಾರಿ ಶ್ರೀನಿವಾಸ್ ಲಾಡು ವಿತರಿಸಿದರು. ಅಪಾರ ಸಂಖ್ಯೆಯಲ್ಲಿ ಭಕ್ತಸಾಗರ ಹರಿದು ಬಂದಿದ್ದರಿಂದ ಹುಣಸೂರು ಮುಖ್ಯ ರಸ್ತೆವರೆಗೂ ಜನರು ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದುಕೊಂಡು ನಂತರ ಲಾಡು, ಪುಳಿಯೋಗರೆ ಪ್ರಸಾದ ಸ್ವೀಕರಿಸಿದರು. ಸಾವಿರಾರು ಸಂಖ್ಯೆಯಲ್ಲಿ ದೇವಾಲಯಕ್ಕೆ ಭೇಟಿ ನೀಡಿದ ಹಿನ್ನೆಲೆಯಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿತ್ತು.

ಲಾಡು ಸ್ವೀಕರಿಸುವ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸಬಾರದು ಎಂಬ ಹಿತದೃಷ್ಟಿಯಿಂದ ದೇವಸ್ಥಾನದ ಆಡಳಿತ ಮಂಡಳಿ ವತಿಯಿಂದ ವೃದ್ಧರಿಗೆ, ವಿಶೇಷ ಚೇತನರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು. ಮುಂಜಾಗ್ರತೆ ಕ್ರಮವಾಗಿ ಪೊಲೀಸರು ಭದ್ರತೆ ಒದಗಿಸಿದ್ದರು.

ಪದಾರ್ಥಗಳು: ಎರಡು ಲಕ್ಷ ಲಡ್ಡು ತಯಾರಿಕೆಗೆ 100 ಕ್ವಿಂಟಾಲ್ ಕಡ್ಲೆ ಹಿಟ್ಟು, 200 ಕೆಜಿ ಸಕ್ಕರೆ, 10000 ಲೀಟರ್ ಖಾದ್ಯ ತೈಲ, 500 ಕೆಜಿ ಗೋಡಂಬಿ, 500 ಕೆಜಿ ಒಣದ್ರಾಕ್ಷಿ, 250 ಕೆಜಿ ಬಾದಾಮಿ, 1000 ಕೆಜಿ ಡೈಮಂಡ್ ಸಕ್ಕರೆ, 2000 ಕೆಜಿ ಬೂರಾ ಸಕ್ಕರೆ, 50ಕೆಜಿ ಪಿಸ್ತಾ, 50 ಕೆಜಿ ಏಲಕ್ಕಿ, 50ಕೆಜಿ ಜಾಕಾಯಿ ಮತ್ತು 50ಕೆಜಿ ಜಾಪತ್ರೆ, 10 ಕೆಜಿ ಪಚ್ಚೆ ಕರ್ಪೂರ, 200 ಕೆಜಿ ಲವಂಗ ಬಳಸಲಾಗಿತ್ತು.

ಯಾವುದೇ ಅಹಿತಕರ ಘಟನೆಗಳಿಲ್ಲದೆ ಶಾಂತಿಯುತ ಹೊಸ ವರ್ಷಾಚರಣೆ

ಮೈಸೂರು, ಜ. 1(ಆರ್‌ಕೆ)– 2024ರ ಡಿಸೆಂಬರ್ 31ರಂದು ರಾತ್ರಿ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಶಾಂತಿಯುತವಾಗಿ ಹೊಸ ವರ್ಷಾಚರಣೆ ಕಾರ್ಯಕ್ರಮಗಳು ನಡೆದಿವೆ.

ಜಿಲ್ಲೆಯಾದ್ಯಂತ ಎಲ್ಲೂ ಅಪಘಾತ, ಅವಘಡ, ಕಿರಿಕಿರಿ, ಘರ್ಷಣೆಯಾಗಿಲ್ಲ. ಮಂಗಳವಾರ ಸಂಜೆ 4 ಗಂಟೆಯಿಂದಲೇ ಪೊಲೀಸರು ಸರ್ಕಲ್, ರಸ್ತೆ, ರೆಸಾರ್ಟ್, ಹೋಟೆಲು, ಕ್ಲಬ್, ಲಿಕ್ಕರ್ ಶಾಪ್‌ಗಳು, ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ಬಂದೋಬಸ್ತ್‌ಗಾಗಿ ನಿಯೋಜಿಸಿ ಅಧಿಕಾರಿಗಳು ಗಸ್ತು ಕಾರ್ಯಾಚರಣೆ ನಡೆಸುತ್ತಿದ್ದರು.

ರಾತ್ರಿ 7 ಗಂಟೆಗೆ ಆರಂಭವಾದ ಹೊಸ ವರ್ಷಾಚರಣೆ ಪಾರ್ಟಿಗಳು ಮಧ್ಯರಾತ್ರಿ 12.30 ಗಂಟೆವರೆಗೂ ನಡೆದವು. ಸಾವಿರಾರು ಯುವಕ–ಯುವತಿಯರು ಕುಣಿದು ಕುಪ್ಪಳಿಸಿದರು. ನಿಗದಿಯಂತೆ ರಾತ್ರಿ 12 ಗಂಟೆಗೆ ಪಟಾಕಿ ಸಿಡಿಸಿ ಸಂಭ್ರಮದಿಂದ 2025ನೇ ವರ್ಷವನ್ನು ಬರಮಾಡಿಕೊಂಡ ಅವರು, ಮಧ್ಯರಾತ್ರಿ 12.30ರಿಂದ 1 ಗಂಟೆಯೊಳಗೆ ಸಂತೋಷಕೂಟ ಅಂತ್ಯಗೊಳಿಸಿ ಮನೆಗೆ ಹಿಂತಿರುಗಿದರು. ರಾತ್ರಿ ಯಾವುದೇ ಅಹಿತಕರ ಘಟನೆಗಳಾದ ಬಗ್ಗೆ ವರದಿಯಾಗಿಲ್ಲ. ನಿಗದಿತ ಸಮಯದೊಳಗೆ ಎಲ್ಲರೂ ಮನೆಗೆ ಹಿಂದಿರುಗಿದರು. ಬಳಿಕ ಮುಂಜಾನೆ 1.15 ಗಂಟೆ ವೇಳೆಗೆ ಬಹುತೇಕ ಎಲ್ಲರೂ ಮನೆ ತಲುಪಿದ್ದರು ಎಂದು ನಗರ ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ನ್ಯೂ ಇಯರ್ 'ಕಿಕ್': ರಾಜ್ಯದಲ್ಲಿ ಒಂದೇ ದಿನ ಬರೋಬ್ಬರಿ 308 ಕೋಟಿ ರೂ. ಮದ್ಯ ಮಾರಾಟ



ಬೆಂಗಳೂರು, ಜ.1– ಹೊಸ ವರ್ಷದ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಅಬಕಾರಿ ಇಲಾಖೆಗೆ ನೂರಾರು ಕೋಟಿ ರೂ. ಆದಾಯ ಹರಿದುಬಂದಿದೆ. ನಿನ್ನೆ ಒಂದೇ ದಿನದಲ್ಲಿ ಕೆಎಸ್‌ಬಿಸಿಎಲ್‌ನಿಂದ ಬರೋಬ್ಬರಿ 308 ಕೋಟಿ ರೂ. ಮದ್ಯ ಮಾರಾಟವಾಗಿದೆ. ಕಳೆದ ವರ್ಷ 2023ರ ಡಿ.31ರಂದು 193 ಕೋಟಿ ರೂ. ಮದ್ಯ ಮಾರಾಟ ಆಗಿತ್ತು. ಈ ಬಾರಿ 2024 ಡಿ.31ರಂದು 7,305 ಮದ್ಯ ಮಾರಾಟಗಾರರು ಕೆಎಸ್‌ಬಿಸಿಎಲ್ ನಿಂದ ಮದ್ಯ ಖರೀದಿ ಮಾಡಿದ್ದಾರೆ. ಐಎಂಎಲ್– 4,83,715 ಲಕ್ಷ ಬಾಕ್ಸ್ ಮಾರಾಟದಿಂದ 250.25 ಕೋಟಿ ಆದಾಯ ಬಂದಿದೆ. ಬಿಯರ್– 2,92,339 ಲಕ್ಷ ಬಾಕ್ಸ್ ಮಾರಾಟದಿಂದ 57.75 ಕೋಟಿ ಆದಾಯ ಹರಿದುಬಂದಿದೆ. ಒಟ್ಟಾರೆ 7,76,042 ಲಕ್ಷ ಬಾಕ್ಸ್ ಮದ್ಯ ಮಾರಾಟದಿಂದ 308 ಕೋಟಿ ರೂ. ಆದಾಯ ವಾಗಿದೆ. ನಿನ್ನೆ ಬೆಳಗ್ಗೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಕೆಎಸ್‌ಬಿಸಿಎಲ್‌ನಿಂದ ವ್ಯಾಪಾರ ಆಗಿರುವ ಮದ್ಯದ ಮಾಹಿತಿ ಇದಾಗಿದೆ. ಡಿ.27ರ ಶುಕ್ರವಾರದಂದು ಬರೋಬ್ಬರಿ 408.58 ಕೋಟಿ ರೂ. ಮದ್ಯ ಮಾರಾಟವಾಗಿದೆ. ಐಎಂಎಲ್– 6,22,062 ಲಕ್ಷ ಬಾಕ್ಸ್ ಮಾರಾಟದಿಂದ 327.50 ಕೋಟಿ ರೂ. ಆದಾಯ ಬಂದಿತ್ತು. ಬಿಯರ್– 4,04,998 ಲಕ್ಷ ಬಾಕ್ಸ್ ಮಾರಾಟದಿಂದ 80.58 ಕೋಟಿ ರೂ. ಆದಾಯ ಬಂದಿತ್ತು. ಐಎಂಎಲ್, ಬಿಯರ್ ಸೇರಿ ಒಟ್ಟು– 10,27,060 ಲಕ್ಷ ಬಾಕ್ಸ್ ಮದ್ಯ ಮಾರಾಟದಿಂದ 408.50 ಕೋಟಿ ರೂ. ಆದಾಯವಾಗಿತ್ತು.

ಡಿ.31ರಂದು ಮೈಸೂರು ಜಿಲ್ಲೆಯಲ್ಲಿ 2,39,481ಲೀ. ಲಿಕ್ಕರ್, 1,06,208 ಲೀ. ಬಿಯರ್ ಮಾರಾಟ

ಮೈಸೂರು, ಜ.1(ಆರ್‌ಕೆ)– ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ 2,39,481 ಲೀಟರ್ ಐಎಂಎಲ್ (ಲಿಕ್ಕರ್) ಹಾಟ್ ಡ್ರಿಂಕ್ಸ್ ಹಾಗೂ 1,06,208 ಲೀಟರ್ ಬಿಯರ್ ಮಾರಾಟವಾಗಿದೆ. ಮೈಸೂರು ನಗರ ಮತ್ತು ತಾಲೂಕಿನಲ್ಲಿ ಸರಾಸರಿ 9 ಲೀಟರ್ ಸಾಮರ್ಥ್ಯದ 10,260 ಬಾಕ್ಸ್ ಐಎಂಎಲ್ ಮತ್ತು ಸರಾಸರಿ 8 ಲೀಟರ್ ಸಾಮರ್ಥ್ಯದ 8,042 ಬಾಕ್ಸ್ ಬಿಯರ್ ಮಾರಾಟವಾದರೆ, ಜಿಲ್ಲೆಯಾದ್ಯಂತ ಉಳಿದ ತಾಲೂಕುಗಳಲ್ಲಿ 16,340 ಐಎಂಎಲ್ ಹಾಗೂ 5,234 ಬಾಕ್ಸ್ ಬಿಯರ್ ಮಾರಾಟವಾಗಿದೆ. ಅದರಂತೆ 2024ರ ವರ್ಷಾಂತ್ಯ ಡಿಸೆಂಬರ್ 31ರಂದು ಜಿಲ್ಲೆಯಲ್ಲಿ 2,39,481 ಲೀಟರ್ ಹಾಟ್ ಡ್ರಿಂಕ್ಸ್ (ಐಎಂಎಲ್) ಹಾಗೂ 1,06,208 ಲೀಟರ್ ಬಿಯರ್ ಖರ್ಚಾಗಿದೆ ಎಂದು ಅಬಕಾರಿ ಇಲಾಖೆ ಅಧಿಕಾರಿಗಳು ತಿಳಿಸಿ ದ್ದಾರೆ. ಹೊಸ ವರ್ಷಾಚರಣೆಗೆ ಒಂದೇ ದಿನ ಎಂಎಸ್‌ಐಎಲ್ ಮಳಿಗೆ, ಟ್ರೊ ಸ್ಪಿರಿಟ್, ವೈನ್ ಸ್ಟೋರ್, ಕ್ಲಬ್, ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲಿ ಮದ್ಯ ಖರೀದಿಗೆ ಮಂಗಳವಾರ ನೂಕು–ನುಗ್ಗಲು ಉಂಟಾಗಿತ್ತು. ಪಾರ್ಟಿ, ಸಂತೋಷ ಕೂಟಗಳಲ್ಲಿ ಅಂದು ಅತೀ ಹೆಚ್ಚು ಲಿಕ್ಕರ್ ಮತ್ತು ಬಿಯರ್ ಬಾಟಲಿಗಳು ಮಾರಾಟವಾಗಿವೆ ಎಂದು ಹೇಳಲಾಗಿದೆ.

ಮೈಸೂರು ಮಿತ್ರ

ಮಂಡ್ಯ ಪತ್ರಕರ್ತರ ಸಂಘ ರಾಜ್ಯದಲ್ಲಿಯೇ ಮಾದರಿ

ಸಂಘದ ನೂತನ ಅಧ್ಯಕ್ಷರಾಗಿ ನವೀನ್‌ಕುಮಾರ್ ಅವಿರೋಧ ಆಯ್ಕೆ



ಮಂಡ್ಯ ನಗರ ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಅಧ್ಯಕ್ಷ ನವೀನ್ ಕುಮಾರ್ ಅವರನ್ನು ಸನ್ಮಾನಿಸುತ್ತಿರುವುದು.

ಮಂಡ್ಯ: ಜಿಲ್ಲೆಯಲ್ಲಿನ ಪತ್ರಕರ್ತರ ಸಂಘವು ಎಲ್ಲಾ ದೃಷ್ಟಿಕೋನದಲ್ಲಿಯೂ ವಿಭಿನ್ನತೆ ತೋರುವ ಮೂಲಕ ರಾಜ್ಯದಲ್ಲಿಯೇ ಮಾದರಿ ಸಂಘವಾಗಿ ಗುರುತಿಸಿಕೊಂಡಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯದರ್ಶಿ ಮತ್ತೀಕೆರೆ ಜಯರಾಂ ತಿಳಿಸಿದರು.

ನಗರದ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸಂಘದ ನೂತನ ಅಧ್ಯಕ್ಷ ಕೆ.ಎನ್. ನವೀನ್‌ಕುಮಾರ್ ಅವರ ಪದಗ್ರಹಣ ಸಮಾರಂಭವನ್ನು ಉದ್ದೇಶಿಸಿ ಅವು ಮಾತನಾಡಿದ ಅವರು, ಸಂಘದ ಒಮ್ಮತದ ಮನೋಭಾವನೆ ಕಾಪಾಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದು, ಇದೇ ಹಾದಿಯಲ್ಲಿ ಗ್ರಾಮೀಣ ಭಾಗದ ಮಂಜುನಾಥ್ ಅವರಿಗೂ ರಾಜ್ಯ ಸಂಘದ ಸದಸ್ಯರನ್ನಾಗಿ ಆಯ್ಕೆಯಾಗುವ ಅವಕಾಶ ಕಲ್ಪಿಸಲಾಗಿದೆ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಅವಕಾಶ ವಂಚಿತರಿಗೂ ಅವಕಾಶ ಒದಗಿಸುವ ನಿಟ್ಟಿನಲ್ಲಿ ಅಧಿಕಾರ ಹಂಚಿಕೆ ಪದ್ಧತಿಯನ್ನು ಜಾರಿಯಲ್ಲಿಡಲಾಗಿದೆ ಎಂದು ಹೇಳಿದರು.

ನೂತನ ಅಧ್ಯಕ್ಷರು ಇಲ್ಲಿವರೆಗೂ ಅಧ್ಯಕ್ಷರಾಗಿದ್ದವರ ಹಾದಿಯಲ್ಲಿ ಸಂಘದ ಏಳ್ಗೆಗೆ ಶ್ರಮಿಸಲಿ, ಇವರ ಕೆಲಸಗಳಿಗೆ ಸಂಘದ ಕಾರ್ಯಕಾರಿ ಮಂಡಳಿ ಸದಾ ಸಹಕಾರವಾಗಿ ನಿಲ್ಲಲಿ ಎಂದು ಆಶಿಸಿದರು.

ಮತ್ತೊರ್ವ ರಾಜ್ಯ ಕಾರ್ಯದರ್ಶಿ ಸೋಮಶೇಖರ್ ಕೆರಗೋಡು ಮಾತನಾಡಿ, ಸಂಘದ ಆಗಬೇಕಾದ ಎಲ್ಲಾ ಕಾರ್ಯಗಳು ಪೂರ್ಣಗೊಂಡಿದ್ದು, ನೂತನ ಅಧ್ಯಕ್ಷ ಹಿರಿಯ ಹಾಗೂ ಕಿರಿಯ ಪತ್ರಕರ್ತರನ್ನು ವಿಶ್ವಾಸಕ್ಕೆ ಪಡೆದು ಸಂಘವನ್ನು ಮುನ್ನಡೆಸುವುದೇ ಸವಾಲಿದ್ದು, ಸಮರ್ಥವಾಗಿ ನಿಭಾಯಿಸಬೇಕೆಂದು ಕಿವಿಮಾತು ಹೇಳಿದರು.

ಸಂಘದ ಅಭಿವೃದ್ಧಿಗೆ ತಮಗೆ ದೊರೆತ ಅವಧಿಯಲ್ಲಿ ಸಾಧ್ಯವಾದಷ್ಟು ಕೆಲಸ ಮಾಡಿ, ತಮ್ಮ ಕೆಲಸಗಳಿಗೆ ಪತ್ರಕರ್ತರಲ್ಲಿ ಯಾವುದೇ ರೀತಿ ಅಸಮಾಧಾನ ಇರದಂತೆ ನೋಡಿಕೊಂಡು ಜಿಲ್ಲಾ ಎಲ್ಲಾ ತಾಲೂಕು ಸಂಘಗಳನ್ನು ಸಕ್ರಿಯವಾಗಿ ಮುನ್ನಡೆಸುವಂತಾಗಲಿ ಎಂದು ಶುಭ ಹಾರೈಸಿದರು.

ನೂತನ ಅಧ್ಯಕ್ಷ ಕೆಎನ್.ನವೀನ್‌ಕುಮಾರ್ ಮಾತನಾಡಿ, ಅನಿವಾರ್ಯ ಕಾರಣಕ್ಕೆ ಪತ್ರಿಕಾರಂಗ ಪ್ರವೇಶಬೇಕಾಗಿದ್ದು, ಹಿರಿಯ ಪತ್ರಕರ್ತರ ಮಾರ್ಗದರ್ಶನದಲ್ಲಿ ಪತ್ರಿಕಾರಂಗದಲ್ಲಿ ಕೂಡಿಕೊಂಡಿದ್ದೇನೆ. ಹಲವು ಹಂತಗಳಲ್ಲಿ ಕೆಲಸ ಮಾಡಿದ ನನಗೆ ಈ ಟಿವಿ ವಾಹಿನಿಯಿಂದ ಜಿಲ್ಲೆಯ ಪರಿಚಯ ಹಾಗೂ ಜಿಲ್ಲೆಗೆ ನನ್ನ ಪರಿಚಯವಾಯಿತು ಎಂದರು.

ಕಾವೇರಿ ಹೋರಾಟದ ಸಂದರ್ಭವನ್ನು ನೆನೆದರೆ ಮೈಜುಮ್ಮೆನಿಸುವ ಭಾವನೆ ಮೂಡುತ್ತದೆ. ಸದರಿ ಹೋರಾಟದಿಂದ ಮಂಡ್ಯ ಎಂದರೆ ಇಂಡಿಯಾ ಎನ್ನುವಂತೆ ಹೆಸರುವಾಸಿಯಾಯಿತು. ಈ ಸಂದರ್ಭವನ್ನು ಜೀವನದಲ್ಲಿ ಮರೆಯುವಂತಿಲ್ಲ. ಮಾಧ್ಯಮದಲ್ಲಿ ಛಾಯಾಗ್ರಾಹಕ, ವರದಿಗಾರ, ಸಂಪಾದಕನಾಗಿ ಕೆಲಸ ಮಾಡಿದ್ದು, ಇದರಿಂದ ದೊರೆತ ಅನುಭವದಿಂದ ಸಂಘದ ಸದಸ್ಯರಿಗೆ ಅನುಕೂಲವಾಗುವಂತೆ ಕೆಲಸ ನಿರ್ವಹಿಸುತ್ತೇನೆ ಎಂದರು.

ಸಂಘದ ಕಟ್ಟಡ ನಿರ್ಮಾಣಕ್ಕೆ ಮತ್ತೀಕೆರೆ ಜಯರಾಂ ಅವರು ಕಾರಣರಾದರೆ, ಮಾಜಿ ಅಧ್ಯಕ್ಷರಾದ ಕೆ.ಎನ್.ರವಿ ಅವರು ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಿದರು. ಸೋಮಶೇಖರ್ ಕೆರಗೋಡು ಅವರು ಹೈಟೆಕ್ ಸ್ಪರ್ಷ ನೀಡಿದರು. ಕೆ.ಎನ್.ಮಂಜುನಾಥ್ ಪತ್ರಕರ್ತರ ವಿಭಾಗಿಯ ಸಮ್ಮೇಳನ ಮಾಡಿ ಯಶಸ್ವಿಯಾಗಿದ್ದು, ಕ್ಷೇಮಾಭಿವೃದ್ಧಿ ನಿಧಿಗೆ ಲಕ್ಷಾಂತರ ರೂ. ಹಣ ಸಂಗ್ರಹಿಸಿದರು.

ಈ ಸಂದರ್ಭದಲ್ಲಿ ನಿಕಟಪೂರ್ವ ಅಧ್ಯಕ್ಷ ಬಿ.ಪಿ.ಪ್ರಕಾಶ್, ಮಾಜಿ ಅಧ್ಯಕ್ಷ ಕೆ.ಸಿ.ಮಂಜುನಾಥ್, ಉಪಾಧ್ಯಕ್ಷರಾದ ಗಣಂಗೂರು ನಂಜೇಗೌಡ, ರವಿ ಸಾವಂದಿಪುರ ಕಾರ್ಯದರ್ಶಿಗಳಾದ ಲೋಕೇಶ್ ಚಿನಕುರಳಿ, ಜಯರಾಂ, ಮಂಜುಳ ಕಿರುಗಾವಲು, ಮಂಜುನಾಥ್, ನಂಜುಂಡ ಸ್ವಾಮಿ ಉಪಸ್ಥಿತರಿದ್ದರು.

ಶಾಸಕ ರವಿಕುಮಾರ್ ಗಣಿಗ ಹುಟ್ಟುಹಬ್ಬ ಆಚರಣೆ



ದೇವಾಲಯದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಶಾಸಕ ರವಿಕುಮಾರ್ ಗಣಿಗ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಮಂಡ್ಯ: ನಗರದಲ್ಲಿರುವ ಶ್ರೀವಿದ್ಯಾಗಣಪತಿ ದೇವಾಲಯದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳು ಮತ್ತು ನಿತ್ಯ ಶಾಸಕ ರವಿಕುಮಾರ್‌ಗೌಡ ಯುವ ಬ್ರಿಗೇಡ್ ಅಭಿಮಾನಿಗಳು ಆಯೋಜಿಸಿದ್ದ ಮಂಡ್ಯ ವಿಧಾನ ಸಭಾ ಕ್ಷೇತ್ರದ ಶಾಸಕ ಪಿ.ರವಿಕುಮಾರ್‌ಗೌಡ ಅವರ ಜನ್ಮದಿನ ಪ್ರಯುಕ್ತ ಆಯುಸ್ಸು–ಆರೋಗ್ಯ–ರಾಜಕೀಯ ಭವಿಷ್ಯ ವೃದ್ಧಿಗಾಗಿ ವಿಶೇಷ ಪೂಜೆ ಮತ್ತು ವಿವಿಧ ಸೇವಾಕಾರ್ಯಗಳಿಗೆ ಚಾಲನೆಗೆ ಪೂಜೆ ಸಲ್ಲಿಸಿದರು.

ಬಳಿಕ ಮಾತನಾಡಿದ ಭೂ ನ್ಯಾಯ ಮಂಡಳಿ ಸದಸ್ಯ ಅರುಣ್ ಪಣಕನಹಳ್ಳಿ, ಇಂದು ನಾವು ನಮ್ಮ ಜನಪ್ರಿಯ ಶಾಸಕರ ಜನ್ಮದಿನವನ್ನು ಅರ್ಥಪೂರ್ಣವಾಗಿ ವಿವಿಧ ಸೇವಾಕಾರ್ಯಗಳ ಮೂಲಕ ಸರಳವಾಗಿ ಆಚರಿಸುತ್ತಿದ್ದೇವೆ, ದೇವಾಲಯಗಳಲ್ಲಿ ಆಯುಸ್ಸು–ಆರೋಗ್ಯ–ರಾಜಕೀಯ ಭವಿಷ್ಯ ವೃದ್ಧಿಗಾಗಿ ವಿಶೇಷ ಪೂಜೆ–ಪ್ರಾರ್ಥನೆ ಸಲ್ಲಿಸಿದ್ದೇವೆ ಎಂದರು.

ನಗರ ಸಮೀಪವಿರುವ ವಿಕಾಸ ಜೋಗುಳ ದತ್ತು ಕೇಂದ್ರದ ಮಕ್ಕಳಿಗೆ ಬೆಳಿಗ್ಗಿನ ಉಪಾಹಾರ ತಿಂಡಿ, ಹಣ್ಣು ಮತ್ತು ಸಿಹಿ ವಿತರಣೆ ಮತ್ತ ರಾತ್ರಿ ವೇಳೆಯ ಒಬ್ಬಟ್ಟು ಹೋಳಿಗೆ ಊಟ ಆಯೋಜಿಸಿದ್ದೇವು ,ಮಧ್ಯಾಹ್ನ ಕೆಂಪೇಗೌಡ ಉದ್ಯಾನವನದಲ್ಲಿ ಸ್ವಚ್ಛತಾ ಕಾರ್ಯಕ್ರಮ ಮತ್ತು ಸಸಿಗಳನ್ನು ನೆಟ್ಟು ನೀರೆರೆದವು ಎಂದು ತಿಳಿಸಿದರು.

ನಗರಸಭಾ ಸದಸ್ಯರಿಂದ ಪೂಜೆ–ಹಣ್ಣುಹಂಪಲು ವಿತರಣೆ: ಮುಡಾ ಅಧ್ಯಕ್ಷ ನಹೀಂ ನೇತೃತ್ವದಲ್ಲಿ ನಗರಸಭಾ ಸದಸ್ಯರು ಮತ್ತು ಯುವ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿರುವ ಶ್ರೀ ವಿದ್ಯಾಗಣಪತಿ ದೇವಾಲಯದಲ್ಲಿ ಶಾಸಕ ರವಿಕುಮಾರ್‌ಗೌಡ ಹೆಸರಿನಲ್ಲಿ ಅರ್ಚನೆ ಅಭಿಷೇಕ–ಪೂಜೆ ಸಲ್ಲಿಸಿದರು. ಅಯಸ್ಸು ಆರೋಗ್ಯ ವೃದ್ಧಿಗಾಗಿ ಪ್ರಾರ್ಥಿಸಿದರು. ಜಿಲ್ಲಾಸ್ಪತ್ರೆಯ ಹೆರಿಗೆ ವಾರ್ಡ್‌ಗಳಲ್ಲಿರುವ ಗರ್ಭಿಣಿ–ಬಾಣಂತಿಯರಿಗೆ ಹಣ್ಣು–ಹಂಪಲು ವಿತರಿಸಿದರು.

ಬಳಿಕ ಮಾತನಾಡಿದ ಮುಡಾ ಅಧ್ಯಕ್ಷ ನಹೀಂ, ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ 25 ವರ್ಷಗಳಿಂದ ಅಭಿವೃದ್ಧಿ ಕಾಣದಿರುವುದನ್ನು ಶಾಸಕರಾದ ರವಿಕುಮಾರ್‌ಗೌಡ ಅವರು ಮಾಡಿಸುತ್ತಿದ್ದಾರೆ, ನಗರ ಅಭಿವೃದ್ಧಿಗೂ ಹೆಚ್ಚಿನ ಆಧ್ಯತೆ ನೀಡಿದ್ದಾರೆ ಎಂದರು.

ಮಂಡ್ಯ ಜಿಲ್ಲಾ ಕೇಂದ್ರ ಮಂಡ್ಯ ವಿಧಾನ ಸಭಾ ಕ್ಷೇತ್ರ ಮತ್ತು ನಗರವ್ಯಾಪ್ತಿಯ ಅಭಿವೃದ್ಧಿಗೆ ಹೊಸ ಬದಲಾವಣೆ ತರುತ್ತಿದ್ದಾರೆ, ಅವರ ಕನಸುಗಳು ಈಡೇರಲಿ, ದೇವರು ಅವರಿಗೆ ಶಕ್ತಿ ಮತ್ತು ರಾಜಕೀಯ ಭವಿಷ್ಯ ವೃದ್ಧಿಸಲಿ, ಜನರ ಸಮಸ್ಯೆಗಳಿಗೆ ಸ್ಪಂದನೆ, ರಸ್ತೆಗಳ ಅಭಿವೃದ್ಧಿಯೊಂದಿಗೆ ಬಡವರ ಪರಧ್ವನಿಯಾಗಿದ್ದಾರೆ ಎಂದು ನುಡಿದರು.

ಮುಂದಿನ ದಿನಗಳಲ್ಲಿ ರಾಜಕೀಯ ಭವಿಷ್ಯದಲ್ಲಿ ಸಚಿವರಾಗುವ ಅವಕಾಶ ಲಭ್ಯವಾಗಲಿ, ಬಡವರ ಬಗ್ಗೆ ಕಾಳಜಿವಹಿಸುತ್ತಾರೋ ಅದೇ ರೀತಿ ಕ್ಷೇತ್ರಾಭಿವೃದ್ಧಿಗೂ ಆದ್ಯತೆ ನೀಡುತ್ತಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನಗರಸಭಾ ಸದಸ್ಯರಾದ ಮಂಜು, ಶ್ರೀಧರ್, ಪೂರ್ಣಿಮಾ, ಮಂಗಳಾ, ಪವಿತ್ರಾ, ಸೌಭಾಗ್ಯ ಗೀತಾ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಂಜನಾ, ಉಪಾಧ್ಯಕ್ಷೆ ನೀಲಾಮೂರ್ತಿ, ವಿಜಯಕುಮಾರ್, ಚಂದಗಾಲು ವಿಜಯ್, ಅಶೋಕ್, ಉಮ್ಮಡಹಳ್ಳಿ ಉಮೇಶ್, ಆಟೋಕೃಷ್ಣ ಚಿಕ್ಕಮಂಡ್ಯ ಮೋಹನ್, ವೀಣಾ, ವಿಜಯಲಕ್ಷ್ಮಿ, ಜಯಲಕ್ಷ್ಮಿ ಮತ್ತಿತರರಿದ್ದರು.

ಗೌರವ ಸಮರ್ಪಣೆ...



ಕಿಕ್ಕೇರಿ ನಾಡಕಚೇರಿ ಗ್ರಾಮ ಆಡಳಿತಾಧಿಕಾರಿ ಕೆ.ಎಸ್.ಸೋಮಾಚಾರ್ (ರಾಷ್ಟ್ರೀಯ ಕುಸ್ತಿಪಟು– ಮಧ್ಯದಲ್ಲಿ ಕುಳಿತಿರುವವರು) ಅವರು ಗ್ರಾಮ ಆಡಳಿತಾಧಿಕಾರಿ ಸಂಘದ ಜಿಲ್ಲಾ ಘಟಕದ ಉಪಾಧ್ಯಕ್ಷರಾಗಿ ಇತ್ತೀಚೆಗೆ ಆಯ್ಕೆಯಾದರು. ಈ ವೇಳೆ ಸಂಘದ ವತಿಯಿಂದ ಅಭಿನಂದಿಸಲಾಯಿತು. ರಾಜ್ಯ ಸಂಘದ ಪ್ರಧಾನ ಕಾರ್ಯದರ್ಶಿ ಶಿವಾನಂದನಾಯಕ್, ಜಿಲ್ಲಾಧ್ಯಕ್ಷ ಡಿ.ಪಿ ಹರೀಶ್, ದೇವರಾಜು, ಎಸ್. ಮಂಜುನಾಥ್, ಸುನಿಲ್ ಶಿರಸಂಗಿ, ಚನ್ನಪ್ಪ, ಸುನಿಲ್‌ಬಾಬು, ಸೋಮಶೇಖರ್ ಇತರರು ಭಾಗವಹಿಸಿದ್ದರು.

ಪಂದ್ಯಾವಳಿ ವಿಜೇತ ತಂಡಗಳಿಗೆ ಬಹುಮಾನ ವಿತರಣೆ

ಭಾರತೀನಗರ, ಜ.1– ಕ್ರೀಡೆ ದೈಹಿಕ ಮತ್ತು ಆರೋಗ್ಯಕ್ಕೆ ಉತ್ತಮವಾದುದ್ದು. ಆಸಕ್ತಿ ಉಳ್ಳವರು ಕ್ರೀಡೆಯನ್ನು ವೃತ್ತಿಯನ್ನಾಗಿ ಭಾವಿಸಿ ಅಭ್ಯಾಸದಲ್ಲಿ ತೊಡಗಬೇಕೆಂದು ಶಾಸಕ ಮಧು ಜಿ.ಮಾದೇಗೌಡ ಹೇಳಿದರು.

ಭಾರತೀನಗರದ ಭಾರತೀಕಾಲೇಜಿನ ಜಿ.ಮಾದೇಗೌಡರ ಸ್ಮಾರಕ ಕ್ರೀಡಾಂಗಣದಲ್ಲಿ ಮಧುಜಿಮಾದೇಗೌಡರ ಅಭಿಮಾನಿಗಳ ಬಳಗ, ಆಶಯ್ ಮಧುಮಾದೇಗೌಡರ ಅಭಿಮಾನಿಗಳ ಬಳಗದಿಂದ ಆಯೋಜಿಸಿದ್ದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ ಮತ್ತು ಕ್ರಿಕೆಟ್ ಪಂದ್ಯಾವಳಿಯ ಎಂಜಿಎಂ–ಕಪ್ 2024ರ ಕ್ರೀಡೆಯಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

ನಂತರ ಕ್ರೀಡಾಂಗಣಕ್ಕೆ ತೆರಳಿ ತಂಡಗಳನ್ನು ಪರಿಚಯಿಸಿಕೊಂಡು ಎಲ್ಲಾ ತಂಡಗಳಿಗೂ ಶುಭಹಾರೈಸಿದರು.

ವಿಜೇತ ತಂಡಗಳಿಗೆ ಮೊದಲನೇ ಬಹುಮಾನ 60 ಸಾವಿರ, ದ್ವಿತೀಯ ಬಹುಮಾನ 30 ಸಾವಿರ, ತೃತೀಯ ಬಹುಮಾನ 15 ಸಾವಿರ, ಚತುರ್ಥ ಬಹುಮಾನ 10 ಸಾವಿರ ಜೊತೆಗೆ ಆಕರ್ಷಕ ಟ್ರೋಫಿಯನ್ನು ಪಂದ್ಯಾವಳಿಯಲ್ಲಿ ಇಡಲಾಗಿತ್ತು. ಹಾಗಾಗಿ ಈ ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ 20ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು.



ವಾಲಿಬಾಲ್ ಪಂದ್ಯಾವಳಿಯಲ್ಲಿ ವಿಜೇತರಾದ ತಂಡಕ್ಕೆ ಬಹುಮಾನ ವಿತರಣೆ ಮಾಡಲಾಯಿತು.

ವಾಲಿಬಾಲ್ ವಿಜೇತ ತಂಡ: ಪ್ರಥಮ ಬಹುಮಾನ ಮಂಗಳೂರು ತಂಡ, ದ್ವಿತೀಯ ಬಹುಮಾನ ಮೈಸೂರು ತಂಡ, ತೃತೀಯ ಬಹುಮಾನ ಮಂಡ್ಯ ತಂಡ, ಚತುರ್ಥ ಬಹುಮಾನ ಮೆಣಸಗೆರೆ ತಂಡ ಪಡೆದುಕೊಂಡಿದೆ.

ಕ್ರಿಕೆಟ್ ವಿಜೇತ ತಂಡ: ಕ್ರಿಕೆಟ್ ಪಂದ್ಯಾವಳಿ ಬೆಸಗರಹಳ್ಳಿ ತಂಡ ಪ್ರಥಮ, ಸ್ಟಾರ್ ಮದ್ದೂರು ದ್ವಿತೀಯ, ಶಿವಪುರ ತೃತೀಯ ಸ್ಥಾನಗಳಿಸಿ ಆಕರ್ಷಕ ಟ್ರೋಫಿ ಪಡೆದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ಪ್ರಾಂಶುಪಾಲ ಎಂ.ಎಸ್.ಮಹದೇವ ಸ್ವಾಮಿ, ಮಧು ಜಿ. ಮಾದೇಗೌಡರ ಅಭಿಮಾನಿಗಳ ಬಳಗದ ಆರ್.ಸಿದ್ದಪ್ಪ, ಬಿ.ಗಿರೀಶ್, ಕಾರ್ಕಹಳ್ಳಿ ಸ್ವರೂಪ್‌ಚಂದ್ರ, ವಿನಯ್‌ಹೊನ್ನೇಗೌಡ, ಕಳ್ಳಿಮೆಳೆದೊಡ್ಡಿ ಶಿವಕುಮಾರ್, ದೈಹಿಕ ಶಿಕ್ಷಣ ನಿರ್ದೇಶಕರಾದ ಎಂ.ಕೆ. ಸುನಿಲ್‌ಕುಮಾರ್, ಎಸ್.ಶೋಭಾ, ಕೆ.ಟಿ. ಪುಟ್ಟಸ್ವಾಮಿ, ಜಿ.ಎನ್.ಜಗದೀಶ್, ಜಿ.ಬಿ. ನಂದೀಶ್, ಡಿ.ಪಿ.ಪ್ರಮೋದ್, ನಿಖಿಲ್, ಪ್ರಸನ್ನ, ಶಂಕರ್, ಬಸವರಾಜು ಇದ್ದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಹಲವು ಕುಟುಂಬಗಳ ಜೀವನ ಹಸನು



ಕೆ.ಆರ್.ಪೇಟೆ,ಜ.1– ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ರಾಜ್ಯದಲ್ಲಿ ಉತ್ತಮವಾಗಿ ಕೆಲಸ ಮಾಡುತ್ತಿದ್ದು ಶ್ರೀ ಕ್ಷೇತ್ರದ ಯೋಜನೆಯಿಂದಲೇ ಸಾವಿರಾರು ಕುಟುಂಬಗಳ ಉತ್ತಮ ನೆಲೆ ಕಂಡುಕೊಂಡಿವೆ ಎಂದು ತಾಲೂಕು ವಕೀಲರ ಸಂಘದ ಮಾಜಿ ಅಧ್ಯಕ್ಷರು ಹಾಗೂ ಹಿರಿಯ ನ್ಯಾಯವಾದಿ ಎನ್.ಆರ್.ರವಿಶಂಕರ್ ಅಭಿಪ್ರಾಯಪಟ್ಟರು.

ಕೆ.ಆರ್.ಪೇಟೆ ಪಟ್ಟಣದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾ ಕಚೇರಿಯಲ್ಲಿ ಆಯೋಜಿಸಿದ್ದ ಸರಳ ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರದಿಂದ ಹೊರತಂದಿರುವ 2025ನೇ ವರ್ಷದ ಡೈರಿ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷರಾದ ಹಿರಿಯ ಮುಖಂಡ ನಾಯಕನಹಳ್ಳಿ ಬಿ.ನಂಜಪ್ಪ ಮಾತನಾಡಿದರು. ಈ ಸಮಯದಲ್ಲಿ ಹಿರಿಯ ಪತ್ರಕರ್ತರಾದ ಕೆ.ಆರ್.ನೀಲಕಂಠ, ಹರಿಚರಣತಿಲಕ್, ಬಳ್ಳೇಕೆರೆ ಮಂಜುನಾಥ್, ಆರ್.ಶ್ರೀನಿವಾಸ್, ಕಾಡುಮೆಣಸಚಂದ್ರು, ಮರುವನಹಳ್ಳಿಬಸವರಾಜ್, ಗಂಜೀಗೆರೆ ಮಹೇಶ್, ಶಿಕ್ಷಕ ನಾಗರಾಜ್, ಬೇಕರಿ ದಿನೇಶ್ ಯೋಜನಾಧಿಕಾರಿ ತಿಲಕ್‌ರಾಜ್ ಮತ್ತು ಸಬ್ಬಂದಿಗಳು ಹಾಜರಿದ್ದರು.

ಮೂರನೇ ಪುಟದಿಂದ

ಭವ್ಯವಾದ 'ಸಿದ್ದರಾಮಯ್ಯ ವೃತ್ತ'

ಮೈಸೂರು ವಿಶ್ವವಿದ್ಯಾನಿಲಯದ ಹೆಸರಿನಲ್ಲಿ ರಚನೆಯಾಗಿರುವ ವಸತಿ ಬಡಾವಣೆಯಲ್ಲಿ ವಿಶಾಲವಾದ, ಕ್ಲಾಕ್ ಟವರ್ ಹೊಂದಿರುವ ವೃತ್ತಕ್ಕೆ 'ಸಿದ್ದರಾಮಯ್ಯ ವೃತ್ತ' ಹೆಸರಿದೆ.

ಮೈಸೂರಿನ ಪ್ರತಿಷ್ಠಿತ ಕೆಆರ್‌ಎಸ್ ರಸ್ತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರನ್ನು ನಾಮಕರಣ ಮಾಡಬೇಕೆಂಬ ಪ್ರಸ್ತಾಪ ಇದೀಗ ತೀವ್ರ ವಿವಾದಕ್ಕೆ ಕಾರಣವಾಗಿದೆ. ಕುಂಬಾರ ಕೊಪ್ಪಲಿಗೆ ಹೊಂದಿಕೊಂಡಂತೆ ಪ್ರಶಾಂತ ಸ್ಥಳದಲ್ಲಿ ಅಂದಿನ ರಾಜಕುಮಾರಿ ಕೃಷ್ಣಾಜಮ್ಮಣ್ಣಿ ಅವರು ಟಿಬಿ ಕಾಯಿಲೆಯಿಂದ ಬಳಲುವವರಿಗೆ ಚಿಕಿತ್ಸೆ ನೀಡಬೇಕೆಂಬ ಸದುದ್ದೇಶದಿಂದ ಸುಸಜ್ಜಿತ ಆಸ್ಪತ್ರೆಯೊಂದನ್ನು ಕಟ್ಟಿಸಿದ್ದರು. ಅದಕ್ಕಾಗಿಯೇ ಈ ಆಸ್ಪತ್ರೆಗೆ ಪಿಕೆಟಿಬಿ (ಪ್ರಿನ್ಸೆಸ್ ಕೃಷ್ಣಾಜಮ್ಮಣ್ಣಿ) ಎಂದು ಹೆಸರಿಡಲಾಗಿತ್ತು. ಈ ಹಿನ್ನೆಲೆಯಲ್ಲಿ ಅದರ ಮುಂದೆ ಹಾದುಹೋಗುವ ಮಾರ್ಗಕ್ಕೆ (ಈಗ ಕೆಆರ್‌ಎಸ್ ರಸ್ತೆ ಎಂದು ಕರೆಯಲಾಗುವ) ಈ ಹಿಂದೆಯೇ 'ಪ್ರಿನ್ಸೆಸ್ ರೋಡ್' ಎಂದು ನಾಮಕಾರಣ ಮಾಡಲಾಗಿತ್ತು ಎಂಬ ಉಲ್ಲೇಖಗಳು ದಾಖಲೆಗಳಲ್ಲಿ ನಮೂದಾಗಿವೆ ಎಂದು ಹೇಳಲಾಗುತ್ತಿದೆ.

ಈ ಮಧ್ಯೆ ಮೈಸೂರಿನ ಚಾಮರಾಜಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರು ಕೆಆರ್‌ಎಸ್ ರಸ್ತೆ ಎಂದು ಪ್ರಚಲಿತದಲ್ಲಿರುವ ಈ ಮಾರ್ಗಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರಿಡಬೇಕೆಂಬ ಪ್ರಸ್ತಾಪವನ್ನು ನಗರಪಾಲಿಕೆ ಮುಂದಿಟ್ಟಿದ್ದಾರೆ. ಈ ಮಾರ್ಗದಲ್ಲಿ ಬರುವ ಪಿಕೆಟಿಬಿ ಆವರಣದಲ್ಲಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಡಿಯಲ್ಲಿ ಬರುವ ರಾಜಕುಮಾರಿ ಕೃಷ್ಣಾಜಮ್ಮಣ್ಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾ ಕೇರ್ ಸೆಂಟರ್, ಜಯದೇವ ಹೃದ್ರೋಗ ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆ ಕಟ್ಟಡಗಳನ್ನು ಮೊದಲ ಬಾರಿ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲೇ ಸಿದ್ದರಾಮಯ್ಯ, ಅಂದು ಶಾಸಕರಾಗಿದ್ದ ವಾಸು ಅವರ ಪ್ರಸ್ತಾವದಂತೆ ನೂರಾರು ಕೋಟಿ ಅನುದಾನ ನೀಡಿ, ಅವುಗಳ ನಿರ್ಮಾಣಕ್ಕೆ ಕಾರಣಕರ್ತರಾಗಿದ್ದರು. ಹಾಗಾಗಿ ಇಲ್ಲಿ ಹಾದು ಹೋಗುವ ಪ್ರತಿಷ್ಠಿತ ಕೆಆರ್‌ಎಸ್ ರಸ್ತೆಗೆ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಹೆಸರಿಡಬೇಕು ಎಂದು ಒತ್ತಾಯಿಸಿದ್ದು, ಅದಕ್ಕೆ ವಿರೋಧ ವ್ಯಕ್ತವಾಗಿ, ಇದೀಗ ವಿವಾದಕ್ಕೆ ಎಡೆ ಮಾಡಿಕೊಟ್ಟಿದೆ.

ಆದರೆ, ಈ ರಸ್ತೆಯಲ್ಲಿ ಬರುವ ಪಿಕೆಟಿಬಿ ಆಸ್ಪತ್ರೆಯನ್ನು ನಿರ್ಮಿಸಿ, ಹಳೇ ಮೈಸೂರು ಭಾಗದ ಟಿಬಿ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡುವ ವ್ಯವಸ್ಥೆಯನ್ನು ಅಂದಿನ ಅರಸರು ಕಲ್ಪಿಸಿದ್ದರು. ಜೊತೆಗೆ ಜನರ ಕಲ್ಯಾಣಕ್ಕಾಗಿ ತ್ಯಾಗ ಮಾಡಿದ್ದರು. ಅದಕ್ಕಾಗಿಯೇ ಈ ರಸ್ತೆಗೆ 'ಪ್ರಿನ್ಸೆಸ್ ರೋಡ್' ಎಂದು ನಾಮಕರಣ ಮಾಡಿದ್ದು, ಇದು ಸರ್ಕಾರಿ ದಾಖಲೆಗಳಲ್ಲಿ ನಮೂದಾಗಿದೆ ಎಂಬುದನ್ನು, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಹಲವು ಹಿರಿಯ ನಾಗರಿಕರು ಪ್ರತಿಪಾದಿಸುತ್ತಿದ್ದಾರೆ.

ಈ ನಡುವೆ ಕೆಲ ಕಾಂಗ್ರೆಸ್ ನಾಯಕರು, 'ಪ್ರಿನ್ಸೆಸ್ ರೋಡ್' ಎಂಬುದಕ್ಕೆ ಯಾವುದೇ ದಾಖಲೆಗಳು ಇಲ್ಲ. ಹಾಗಾಗಿಯೇ ಈ ರಸ್ತೆಯನ್ನು ಕೆಆರ್‌ಎಸ್ ರಸ್ತೆ ಎಂದು ಕರೆಯಲ್ಪಡುತ್ತಿತ್ತು. ಈಗಲೂ ಕೆಆರ್‌ಎಸ್ ರಸ್ತೆ ಎಂದೇ ಪ್ರಚಲಿತದಲ್ಲಿದೆಯೇ ಹೊರತು 'ಪ್ರಿನ್ಸೆಸ್ ರೋಡ್' ಎಂದು ಎಲ್ಲಿಯೂ ಕೇಳಿಬರುತ್ತಿಲ್ಲ ಎಂದು ವಾದಿಸುತ್ತಿದ್ದಾರೆ. ಆಶ್ಚರ್ಯವೆಂದರೆ, ನಿನ್ನೆ (ಡಿ.31)ಯಷ್ಟೇ ಸ್ಥಳೀಯ ಕಾಂಗ್ರೆಸ್ ನಾಯಕರ ನಿಯೋಗವೊಂದು ಮೈಸೂರು ಮಹಾನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರನ್ನು ಭೇಟಿ ಮಾಡಿ, ಪ್ರಿನ್ಸೆಸ್ ರೋಡ್ ಎಂದು ಹೆಸರಿಲ್ಲದಿದ್ದಲ್ಲಿ ಕೆಆರ್‌ಎಸ್ ರಸ್ತೆಯನ್ನು 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಎಂದು ನಾಮಕರಣ ಮಾಡಬೇಕು ಎಂದು ಒತ್ತಾಯಿಸಿದೆ.

ಈ ವೇಳೆ ಪಾಲಿಕೆ ಆಯುಕ್ತರು, ಮೈಸೂರು ಮಹಾನಗರ ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳ ವಲಯಾಧಿಕಾರಿಗಳಿಂದ ಮಾಹಿತಿ ತರಿಸಿಕೊಂಡಿದ್ದೇವೆ. ಮೈಸೂರಿನಲ್ಲಿ ಎಲ್ಲಿಯೂ ರಸ್ತೆ, ಸರ್ಕಲ್, ಬಡಾವಣೆಗಳಿಗೆ ಸಿದ್ದರಾಮಯ್ಯನವರ ಹೆಸರಿರುವ ಬಗ್ಗೆ ದಾಖಲಾತಿಗಳು ಕಂಡುಬರುತ್ತಿಲ್ಲ ಎಂದು ವರದಿ ನೀಡಿದ್ದಾರೆ. ಹಾಗೆಯೇ ಇದುವರೆಗೆ ಪರಿಶೀಲಿಸಿದ ಮೈಸೂರು ನಗರಪಾಲಿಕೆ ದಾಖಲಾತಿಗಳಲ್ಲಿ 'ಪ್ರಿನ್ಸೆಸ್ ರೋಡ್' ಉಲ್ಲೇಖ ಇಲ್ಲ ಎಂದು ಕಾಂಗ್ರೆಸ್ ನಿಯೋಗಕ್ಕೆ ಆಯುಕ್ತರು ಮಾಹಿತಿ ನೀಡಿದ್ದಾರೆ.

ರುದ್ರನರ್ತನ

ಗಂಭೀರ ವಿಚಾರಗಳನ್ನು ಬಿಡಿಸಿಟ್ಟರು. ಯುವಜನತೆ ನಮ್ಮ ಸಮಾಜದ ಆಸ್ತಿ, ಇವರ ಭವಿಷ್ಯ ಹಾಳಾ ಗದಂತೆ ಎಚ್ಚರ ವಹಿಸಬೇಕು, ಡ್ರಗ್ಸ್ ಹಾವಳಿ ಹೆಚ್ಚಾಗಿ ಅಪರಾಧಿಕ ಜಗತ್ತಿನ ಕಡೆ ಯುವ ಜನರು ಆಕರ್ಷಿತರಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ವಿಜ್ಞಾನ, ತಂತ್ರ ಜ್ಞಾನ ಬಹಳಷ್ಟು ಅಭಿವೃದ್ಧಿಯಾಗಿದೆ, ಅದನ್ನು ಪೊಲೀಸ್ ಇಲಾಖೆಯೂ ಸಮರ್ಥವಾಗಿ ಬಳಕೆ ಮಾಡಿಕೊಳ್ಳುತ್ತಿದೆ. ಇಷ್ಟಾದರೂ ಡ್ರಗ್ಸ್ ಹಾವಳಿ ಮತ್ತು ಕ್ರೈಮ್ ತಡೆಯುವಲ್ಲಿ ಏಕೆ ವಿಫಲರಾಗಿದ್ದೀರಿ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ನೀವು, ಅಧಿಕಾರಿ ವರ್ಗ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದರೆ, ರಾಜ್ಯದಲ್ಲಿ ಅದ್ಭುತ ಬದಲಾವಣೆ ಮತ್ತು ಸುಧಾರಣೆಗಳನ್ನು ತರಲು ಸಾಧ್ಯವಿದೆ, ಇದಕ್ಕಾಗಿ ನಿಮ್ಮ ಕಾರ್ಯಕ್ಷಮತೆ ಬಳಕೆಯಾಗಲಿ ಎಂದರು.

ಅಧಿಕಾರಿ ವರ್ಗಕ್ಕೆ ನಮ್ಮ ಸಲಹೆ ಅಗತ್ಯವಿಲ್ಲ. ನೀವು ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಂಡರೆ ಸಾಕು, ಭ್ರಷ್ಟಾಚಾರ ವ್ಯವಸ್ಥೆ ಕಡಿಮೆ ಆಗುವ ಬದಲಿಗೆ ಹೆಚ್ಚುತ್ತಿರುವುದು ದುರಂತ. ಆದ್ದರಿಂದ ನಾವೆಲ್ಲರೂ ನಮ್ಮ ಆತ್ಮಸಾಕ್ಷಿಗೆ ತಕ್ಕಂತೆ ಪ್ರಾಮಾಣಿಕವಾಗಿ ನಡೆದುಕೊಳ್ಳೋಣ ಎಂದು ಕರೆ ನೀಡಿದರು.

ನಮ್ಮ–ನಿಮ್ಮ ಉದ್ದೇಶ ಒಂದೆ, ಸಮಾಜದ ಪ್ರಗತಿ ಮತ್ತು ಆರೋಗ್ಯಕರ ಬದಲಾವಣೆ, ಇದಕ್ಕಾಗಿ ನಾವು ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳೋಣ. ಹೊಸ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲು ಹಣವಿಲ್ಲ, ನಿಜ. ಆದರೆ, ಬೊಕ್ಕಸ ಬರಿದಾಗಿದೆ, ಅಭಿವೃದ್ಧಿಗೆ ಹಣವಿಲ್ಲ ಎಂಬುದು ಅಪ್ಪಟ ಸುಳ್ಳು.

ಹಿಂದಿನ ಬಿಜೆಪಿ ಸರ್ಕಾರ ಬಜೆಟ್ ಅನುಮತಿ ಪಡೆಯದೇ 2 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಕಾಮಗಾರಿಗಳಿಗೆ ಹಸಿರು ನಿಶಾನೆ ತೋರಿದ್ದೇ ಇಂತಹ ಪರಿಸ್ಥಿತಿಗೆ ಕಾರಣ.

ತಮ್ಮ ತಪ್ಪನ್ನು ಮರೆಮಾಚಿ ದಿನನಿತ್ಯ ಹಣ ಇಲ್ಲ ಎಂದು ನಮ್ಮನ್ನು ದೂಷಿಸುತ್ತಾ ಪ್ರತಿಪಕ್ಷದವರು ಬೊಬ್ಬೆ ಹೊಡೆಯುತ್ತಿದ್ದಾರೆ ಎಂದು ಕಿಡಿಕಾರಿದರು. ಹಣ ಸಂಗ್ರಹಿಸುವ ಮತ್ತು ವೆಚ್ಚ ಮಾಡುವ ಇಲಾಖೆಗಳೆರಡೂ ಸಮತೋಲನದಿಂದ ಕರ್ತವ್ಯ ನಿರ್ವಹಿಸುವ ಮೂಲಕ ಹೆಚ್ಚು ಸೋರಿಕೆ ಆಗದಂತೆ ತಡೆಯುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ. ರಾಜ್ಯದ ಜನರ ಆರ್ಥಿಕ ಶಕ್ತಿ ಹೆಚ್ಚಿಸಲು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿ. ಪ್ರಾದೇಶಿಕ ಅಸಮತೋಲನ, ಅಸಮಾನತೆ ತೊಡೆಯಲು ಅಧಿಕಾರಿಗಳು ಹೆಚ್ಚು ಶ್ರಮ ವಹಿಸಬೇಕು ಎಂದರು. ಆಡಳಿತದಲ್ಲಿ ಅಧಿಕಾರಿಗಳ ಜವಾಬ್ದಾರಿ ಹೆಚ್ಚು, ನಾವು ಕಾನೂನುಗಳನ್ನು, ರಚಿಸಿ, ಜಾರಿ ಆಗುವ ದಿಕ್ಕಿನಲ್ಲಿ ನಿಗಾ ವಹಿಸುತ್ತೇವೆ. ಅಧಿಕಾರಿ ವರ್ಗ ಸಮಾಜಕ್ಕೆ ಪೂರಕವಾಗಿ ಕ್ರಿಯಾಶೀಲತೆಯಿಂದ ಕರ್ತವ್ಯ ನಿರ್ವಹಿಸಬೇಕು.

ಸಮಾಜದ ಎಲ್ಲಾ ವರ್ಗಗಳಿಗೆ ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯ ಒದಗಿಸಬೇಕು. ಇಲ್ಲದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥ ಬರುವುದಿಲ್ಲ ಎಂಬುದಾಗಿ ಸಂವಿಧಾನ ಜಾರಿ ಸಂದರ್ಭದಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದರು ಎಂದು ಮುಖ್ಯಮಂತ್ರಿ ಉಲ್ಲೇಖಿಸಿದರು.

ಭಾರತ ಆರ್ಥಿಕ ಹಿಂಜರಿತ ಎದುರಿಸುತ್ತಿದ್ದಾಗ, ಪ್ರಧಾನಿಯಾಗಿದ್ದ ಡಾ.ಮನಮೋಹನ್ ಸಿಂಗ್ ದೇಶದ ಆರ್ಥಿಕತೆಗೆ ಹೊಸ ಚೈತನ್ಯ ನೀಡಿದರು, ಇದರ ಲಾಭ ಜನರಿಗೆ ಲಭಿಸುವಂತೆ ಮಾಡಿದರು. ಸಮಾನ ಅವಕಾಶಗಳು ಸಿಕ್ಕಾಗ ಸಮಾನತೆಯ ದಿಕ್ಕಿನಲ್ಲಿ ಸಾಗಬಹುದು ಎನ್ನುವ ಕಾರಣದಿಂದಲೇ ನಮ್ಮ ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿ ಮಾಡಿದೆ. ಜನರ ಕೈಯ್ಯಲ್ಲಿ ಹಣ ಇದ್ದಾಗ ಖರೀದಿ ಶಕ್ತಿ ಹೆಚ್ಚಾಗುತ್ತದೆ. ಮಧ್ಯವರ್ತಿಗಳ ಹಾವಳಿ ಇಲ್ಲದೆ ಜನರಿಗೆ ನೇರ ಹಣ ತಲುಪಿಸುತ್ತಿದ್ದೇವೆ, ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ ಎಂದರು.

ಸರ್ವೆ ಕಾರ್ಯ ಆಗಲೇಬೇಕು; ತಾಕೀತು

ಹೈಕೋರ್ಟ್, ಹೈಕೋರ್ಟ್ ಆದೇಶ ಉಲ್ಲಂಘಿಸಿದ್ದಕ್ಕಾಗಿ ಛೀಮಾರಿ ಹಾಕಿ, ಎಚ್ಚರಿಕೆ ನೀಡಿರುವುದು ಸರ್ಕಾರದ ಪಾಲಿಗೆ ಮುಜುಗರದ ವಿಷಯವಾಗಿದೆ. ಅರಣ್ಯ ಜಮೀನು ಜಂಟಿ ಸರ್ವೆಗೆ ಸಂಬಂಧಿಸಿದಂತೆ ಪ್ರಾದೇಶಿಕ ಆಯುಕ್ತರು ಹೊರಡಿಸಿದ್ದಂತಹ ಆದೇಶಗಳನ್ನು ರದ್ದುಪಡಿಸಿರುವ ಹೈಕೋರ್ಟ್, ಜ.15ರಂದು ಅರಣ್ಯ ಇಲಾಖೆಯ ನೇತೃತ್ವದಲ್ಲಿ ಜಂಟಿ ಸರ್ವೆ ನಡೆಸಿ ಜ.30 ರೊಳಗಾಗಿ ವರದಿ ಸಲ್ಲಿಸಿ, ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಿರುವುದು ರಮೇಶ್‌ಕುಮಾರ್ ಪಾಳಯದಲ್ಲಿ ಆತಂಕ ತಂದಿದೆ. ಜಂಟಿ ಸರ್ವೆ ಕಾರ್ಯದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಭಾಗಿಯಾಗದಂತೆ ಆದೇಶಿಸುವ ಮೂಲಕ ಆರ್‌ಸಿಯವರು ನ್ಯಾಯಾಲಯ ಆದೇಶ ಉಲ್ಲಂಘಿಸಿದ್ದಾರೆಂದು ವಕೀಲ ಶಿವಾರೆಡ್ಡಿ ಅವರು ಹೈಕೋರ್ಟ್ ಮೊರೆ ಹೋಗಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯವು, 2013ರಲ್ಲಿ ಹೈಕೋರ್ಟ್ ನಿರ್ದೇಶನದಂತೆ ಜಂಟಿ ಸರ್ವೆ ಕಾರ್ಯ ಹಾಗೂ ಮುಂದಿನ ಕ್ರಮಗಳು 14 ವರ್ಷಗಳು ವಿಳಂಬವಾಗಿದ್ದು, ಜ.15ರಂದು ಸರ್ವೆ ಕಾರ್ಯ ನಡೆಸಬೇಕೆಂದು ನ್ಯಾಯಮೂರ್ತಿಗಳು ತಿಳಿಸಿದ್ದಾರೆ.

ಯಾರು ಬರದಿದ್ದರೂ ಸರ್ವೆ ಆಗಬೇಕು: ಅರಣ್ಯ ಇಲಾಖೆಯಿಂದ ನಡೆಸುವಂತಹ ಜಂಟಿ ಸರ್ವೆಯಲ್ಲಿ ಜಿಲ್ಲಾಧಿಕಾರಿಗಳು, ಭೂ ದಾಖಲೆಗಳ ಇಲಾಖೆಯ ಉಪನಿರ್ದೇಶಕರು ಮತ್ತು ಒತ್ತುವರಿದಾರ ರಮೇಶ್‌ಕುಮಾರ್ ಅವರು ಕಡ್ಡಾಯವಾಗಿ ಭಾಗವಹಿಸಬೇಕು. ಜಿಲ್ಲಾಧಿಕಾರಿಗಳು ಖುದ್ದು ರಮೇಶ್‌ಕುಮಾರ್ ಅವರಿಗೆ ನೋಟಿಸ್ ಕೊಟ್ಟು ಸರ್ವೆ ಕಾರ್ಯದಲ್ಲಿ ಭಾಗವಹಿಸುವಂತೆ ಸೂಚಿಸಬೇಕು. ಒಂದೊಮ್ಮೆ ರಮೇಶ್‌ಕುಮಾರ್ ಅವರು ಸರ್ವೆಯಲ್ಲಿ ಭಾಗವಹಿಸದೆ ಗೈರಾದರೂ ಸಹ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಬೇಕು. ರಮೇಶ್‌ಕುಮಾರ್ ಅವರು ಸರ್ವೆ ಕಾರ್ಯದಲ್ಲಿ ಭಾಗವಹಿಸದಿದ್ದರೆ ಮುಂದೆ ಅವರು ಯಾವುದೇ ವಿಷಯದಲ್ಲಿ ಅಪೀಲು ಹೋಗುವ ಅಧಿಕಾರ ಇರುವುದಿಲ್ಲ ಎಂದು ತಿಳಿಸಿದೆ.

ಮಾರುಹೋದ ಲಕ್ಷಾಂತರ ಜನ

2024ರ ಡಿ.21ರ ಸಂಜೆ ಫಲಪುಷ್ಪ ಪ್ರದರ್ಶನ ಉದ್ಘಾಟನೆಗೊಂಡಿತು. ಆ ಬಳಿಕ ರಾತ್ರಿ 7 ಗಂಟೆಯಿಂದ 8.30ರವರೆಗೆ 3,515 ಮಂದಿ ವೀಕ್ಷಿಸಿದ್ದಾರೆ. ಉಳಿದ ದಿನಗಳಲ್ಲಿ ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿತ್ತು. ಅದರಂತೆ ಡಿ.22ರಂದು 14,067 ಮಂದಿ ವೀಕ್ಷಿಸಿ ಸಂಭ್ರಮಿಸಿದ್ದಾರೆ. ಅಂತೆಯೇ 23ರಂದು 10,824, ಡಿ.24ರಂದು 12,869, ಡಿ.25ರಂದು 20,907, ಡಿ.26ರಂದು 10,496, ಡಿ.27 ರಂದು 14,649, ಡಿ.28ರಂದು 15,343, ಡಿ.29ರಂದು 16,761, ಡಿ.30ರಂದು 8,643, ಡಿ.31ರಂದು 6,870 ಮಂದಿ ಫಲಪುಷ್ಪ ಪ್ರದರ್ಶನಕ್ಕೆ ಭೇಟಿ ನೀಡಿದ್ದಾರೆ.

ಅರಮನೆ ಮಂಡಳಿ ಒದಗಿಸಿರುವ ಮಾಹಿತಿಯಂತೆ ಒಟ್ಟಾರೆ 1,34,944 ಮಂದಿ ವೀಕ್ಷಿಸಿದ್ದಾರೆ. ವಯಸ್ಕರು ಮತ್ತು ವಿದೇಶಿಯರಿಗೆ 30 ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿತ್ತು. ಅಂತೆಯೇ 10ರಿಂದ 18 ವರ್ಷದ ಒಳಗಿನ ಮಕ್ಕಳಿಗೆ 20 ರೂ. ನಿಗದಿಗೊಳಿಸಿದ್ದರೆ, 10 ವರ್ಷದ ಒಳಗನ ಮಕ್ಕಳಿಗೆ ಉಚಿತ ಪ್ರವೇಶ ಕಲ್ಪಿಸಲಾಗಿತ್ತು.

ಡಿಎಪಿ ಗೊಬ್ಬರಕ್ಕೆ ಸಬ್ಸಿಡಿ

ಈ ಸಬ್ಸಿಡಿ ಜ.1ರಿಂದ ಜಾರಿಗೆ ಬರಲಿದ್ದು, ಮುಂದಿನ ಆದೇಶದವರೆಗೆ ಜಾರಿಯಲ್ಲಿ ಇರಲಿದೆ. ಕಳೆದ ವರ್ಷ ಸರ್ಕಾರವು ಏಪ್ರಿಲ್ 1 ರಿಂದ ಡಿಸೆಂಬರ್ 31ಕ್ಕೆ ಅನ್ವಯವಾಗುವಂತೆ ಒಂದು ಟನ್‌ಗೆ 3,500 ರೂ. ವಿಶೇಷ ಸಬ್ಸಿಡಿಗೆ ಅನುಮತಿ ನೀಡಿತ್ತು. ಈ ಅವಧಿಯಲ್ಲಿ ಏರುತ್ತಿರುವ ವೆಚ್ಚ ಸರಿದೂಗಿಸಲು 2,625 ಕೋಟಿ ರೂ. ಪ್ಯಾಕೇಜ್ ಘೋಷಿಸಿತ್ತು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ರೈತರು 1,350 ರೂ.ಗೆ 50 ಕೆಜಿ ಡಿಎಪಿ ರಸಗೊಬ್ಬರ ಖರೀದಿ ಮಾಡುವುದನ್ನು ಮುಂದುವರಿಸಬಹುದು. ಬೇರೆ ದೇಶಗಳಲ್ಲಿ 50 ಕೆಜಿ ರಸಗೊಬ್ಬರಕ್ಕೆ 3 ಸಾವಿರ ರೂ.ಗೂ ಅಧಿಕ ವೆಚ್ಚವಾಗುತ್ತದೆ. 2014–24 ಅವಧಿಯಲ್ಲಿ ರೈತರಿಗಾಗಿ 11.9 ಲಕ್ಷ ಕೋಟಿ ರೂ. ಸಬ್ಸಿಡಿ ನೀಡಲಾಗಿದೆ. 2004–14ರ ಅವಧಿಗೆ ಹೋಲಿಸಿದರೆ ಸಬ್ಸಿಡಿ ಪ್ರಮಾಣ ದುಪ್ಪಟ್ಟಾಗಿದೆ ಎಂದು ತಿಳಿಸಿದರು.

2024 ರಿಂದ ಕೋವಿಡ್ ಮತ್ತು ಯುದ್ಧ ಸಂಬಂಧಿತ ಅಡೆತಡೆಗಳಿಂದ ಉಂಟಾದ ಮಾರುಕಟ್ಟೆ ಏರಿ ಳಿತಗಳ ಭಾರವನ್ನು ರೈತರು ಭರಿಸಬೇಕಾಗಿಲ್ಲ. ಜಾಗತಿಕ ಬಿಕ್ಕಟ್ಟಿನಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಡಿಎಪಿ ರಸಗೊಬ್ಬರ ಬೆಲೆ ಏಕಾಏಕಿ ಬದಲಾವಣೆಯಾಗುತ್ತಿದೆ. ಈ ಕಾರಣಕ್ಕೆ ಮುಂಗಾರು ಮತ್ತು ಹಿಂಗಾರು ಅವಧಿಯಲ್ಲಿ ರೈತರಿಗೆ ಅನುಕೂಲ ಕಲ್ಪಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಪೊಲೀಸರು ಇನ್ನೂ ಎಫ್‌ಐಆರ್ ದಾಖಲಿಸಿಲ್ಲ

ಎಫ್‌ಐಆರ್ ದಾಖಲಿಸಿಲ್ಲ. ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಬದಲಾಗಿದೆ, ಅಧಿಕಾರದಲ್ಲಿರುವ ಕಾಂಗ್ರೆಸ್ ಮುಖಂಡರಿಗೆ ಒಂದು ಕಾನೂನು ಮತ್ತು ಕಾಂಗ್ರೆಸ್ಸೇತರ ಪಕ್ಷಗಳ ಮುಖಂಡರಿಗೆ ಮತ್ತೊಂದು ಕಾನೂನು ಇದೆ ಎಂದು ವಾಗ್ದಾಳಿ ನಡೆಸಿದರು. ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ನನ್ನ ವಿರುದ್ಧ ನೀಡುವ ದೂರು ಕೂಡಲೇ ಸ್ವೀಕೃತವಾಗುತ್ತದೆ ಮತ್ತು ಎಫ್‌ಐಆರ್ ಸಹ ದಾಖಲಾಗುತ್ತದೆ. ಆದರೆ ನಾನು ಪೊಲೀಸ್ ದೌರ್ಜನ್ಯದ ಬಗ್ಗೆ ಡಿ.19ರಂದು ದೂರು ನೀಡಿದ್ದರೂ, ಸಿಐಡಿ ಅಧಿಕಾರಿ ಮತ್ತು ಡಿಜಿಪಿ–ಐಜಿ ಇಬ್ಬರೂ ತಮ್ಮ ಗಮನಕ್ಕೆ ಬಂದಿಲ್ಲವೆನ್ನುತ್ತಾರೆ ಎಂದರು.

ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆ ವಿರುದ್ಧ ಸಾಕ್ಷ್ಯ ಇಲ್ಲ

ಬೆಂಗಳೂರು, ಜ.1– ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವ



ಪ್ರಿಯಾಂಕ್ ಖರ್ಗೆ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಹೇಳಿದ್ದಾರೆ. ಇಂದು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದ್ದು, ಅದರ ವರದಿಗಾಗಿ ಕಾಯಲಾಗುತ್ತಿದೆ ಎಂದರು.

ಡೆತ್‌ನೋಟ್‌ನಲ್ಲಿ ಪ್ರಿಯಾಂಕ್ ಖರ್ಗೆ ಹೆಸರಿಲ್ಲ. ಅದರಲ್ಲಿ ಅವರ ಪಾತ್ರವಿಲ್ಲ. ಅವರ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳಿಲ್ಲ. ಆದರೂ ರಾಜೀನಾಮೆ ನೀಡುವಂತೆ ಪ್ರತಿಪಕ್ಷಗಳು ಕೇಳುತ್ತಿವೆ ಎಂದರು.

40 ಪರ್ಸೆಂಟ್ ಕಮಿಷನ್ ಕೇಳುತ್ತಿದ್ದಾರೆ ಎಂದು ಗುತ್ತಿಗೆದಾರರೊಬ್ಬರು ಹೇಳಿದ್ದಕ್ಕೆ ಕೆ.ಎಸ್.ಈಶ್ವರಪ್ಪ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆದರೆ ಪ್ರಿಯಾಂಕ್ ಖರ್ಗೆ ಏಕೆ ರಾಜೀನಾಮೆ ನೀಡುತ್ತಿಲ್ಲ ಎಂಬ ಬಿಜೆಪಿ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿಎಂ, ಅವರೇಕೆ ರಾಜೀನಾಮೆ ನೀಡಬೇಕು ಸೂಸೈಡ್ ನೋಟ್‌ನಲ್ಲಿ ಈಶ್ವರಪ್ಪ ಅವರ ಹೆಸರಿತ್ತು. ಹೀಗಾಗಿ ರಾಜೀನಾಮೆ ನೀಡಿದ್ದರು ಎಂದು ತಿರುಗೇಟು ನೀಡಿದರು. ಆತ್ಮಹತ್ಯೆ ಪತ್ರದಲ್ಲಿ ಪ್ರಿಯಾಂಕ್ ಖರ್ಗೆ ಹೆಸರಿದೆಯೇ ಅವರ ಹೆಸರನ್ನು ಎಲ್ಲಿಯೂ ಉಲ್ಲೇಖಿಸಿಲ್ಲ. ಈ ಸಂಬಂಧ ಯಾವುದೇ ತನಿಖೆಗೂ ಸಿದ್ಧ ಎಂದು ಸಚಿವರು ಹೇಳಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದರು. ಸಿಬಿಐ ತನಿಖೆಗೆ ಬಿಜೆಪಿ ಆಗ್ರಹದ ಬಗ್ಗೆ ಪ್ರತಿಕ್ರಿಯಿಸಿದ ಸಿಎಂ, ಕೇಸರಿ ಬಿಜೆಪಿಗೆ ರಾಜ್ಯ ಪೊಲೀಸರ ಮೇಲೆ ನಂಬಿಕೆ ಇಲ್ಲವೇ ಎಂದು ಪ್ರಶ್ನಿಸಿದರು. ಬಿಜೆಪಿ ಅಧಿಕಾರದಲ್ಲಿದ್ದಾಗ ಒಂದೇ ಒಂದು ಪ್ರಕರಣವನ್ನೂ ಸಿಬಿಐಗೆ ವಹಿಸಿರಲಿಲ್ಲ. ಬಿಜೆಪಿಗೆ ಈಗ ಸಿಬಿಐ ಒಪ್ಪಿಸುವಂತೆ ಕೇಳಲು ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಪೋಸ್ಟರ್ ಅಂಟಿಸಿದ 13 ಬಿಜೆಪಿ ನಾಯಕರ ವಿರುದ್ಧ ಎಫ್‌ಐಆರ್

ಬೆಂಗಳೂರು, ಜ. 1– ಬೀದರ್‌ನಲ್ಲಿ ಗುತ್ತಿಗೆದಾರ ಸಚಿನ್ ಪಾಂಚಾಲ್ ಆತ್ಮಹತ್ಯೆ ಪ್ರಕರಣದಲ್ಲಿ ಬಿಜೆಪಿ–ಕಾಂಗ್ರೆಸ್ ಮಧ್ಯೆ ಆರೋಪ ಪ್ರತ್ಯಾರೋಪಗಳು ಜೋರಾಗಿವೆ. ಈ ಮಧ್ಯೆ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಪೋಸ್ಟರ್ ಅಂಟಿಸಿದ 13 ಬಿಜೆಪಿ ನಾಯಕರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ನಾಯಕರು ನಿನ್ನೆ ಬೆಳಗ್ಗೆ ರೇಸ್ ಕೋರ್ಸ್ ರಸ್ತೆಯ ಸಾರ್ವಜನಿಕ ಶೌಚಾಲಯದ ಗೋಡೆಗೆ 'ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಿ', 'ಸೂಸೈಡ್ ಹಾಗೂ ಸುಫಾರಿ ಭಾಗ್ಯ ನೀಡಿದ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ' ಎಂಬ ಪೋಸ್ಟರ್ ಅಂಟಿಸಿದ್ದರು. ಆ ಮೂಲಕ ಬೆಂಗಳೂರು ನಗರದ ಸೌಂದರ್ಯಕ್ಕೂ ಧಕ್ಕೆ ತರುವಂತೆ ಅಂಟಿಸುತ್ತಿದದ್ದು ಕಂಡುಬಂದಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ಹಿನ್ನಲೆ ಅಕ್ರಮವಾಗಿ ರಸ್ತೆಯಲ್ಲಿ ಗುಂಪು ಸೇರಿ ಸಾರ್ವಜನಿಕರಿಗೆ ಅಡ್ಡಿಪಡಿಸಿದ ಆರೋಪದ ಮೇಲೆ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ಸದಸ್ಯರಾದ ಸಿ.ಟಿ.ರವಿ, ಎನ್.ರವಿಕುಮಾರ್ ಸೇರಿ ಒಟ್ಟು 13 ಬಿಜೆಪಿ ನಾಯಕರ ವಿರುದ್ಧ ಪಿಎಸ್ಐ ಶಶಿಧರ ವಣ್ಣೂರ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ.

ಜ.16ಕ್ಕೆ 'ಲೋಕಪಾಲ ದಿನ' ಆಚರಣೆ

ನವದೆಹಲಿ, ಜ.1– ಇದೇ ಮೊದಲ ಬಾರಿಗೆ ಜನವರಿ 16 ಅನ್ನು 'ಲೋಕಪಾಲ ದಿನ'ವನ್ನಾಗಿ ಆಚರಿಸಲಾಗುತ್ತಿದ್ದು, ದೆಹಲಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಕೇಂದ್ರ ಸರ್ಕಾರ ಬುಧವಾರ ಹೇಳಿದೆ. ಪ್ರತೀ ವರ್ಷ ಜನವರಿ 16 ಅನ್ನು 'ಲೋಕಪಾಲ ದಿನ'ವನ್ನಾಗಿ ಆಚರಿಸಬೇಕೆಂದು ಕೇಂದ್ರ ಸರ್ಕಾರ ಕಳೆದ ಮಾರ್ಚ್‌ನಲ್ಲಿಯೇ ನಿರ್ಧರಿಸಿತ್ತು. ಇದೇ ವೇಳೆ ಅಟಾರ್ನಿ ಜನರಲ್ ಆರ್.ವೆಂಕಟರಮಣಿ, ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಹಾಗೂ ಪದ್ಮಭೂಷಣ ಅಣ್ಣಾ ಹಜಾರೆ ಅವರನ್ನು ಗೌರವಿಸಲಾಗುವುದು ಎಂದು ಕೇಂದ್ರ ಸರ್ಕಾರವು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಚೆಲುವಾಂಬ ಉದ್ಯಾನವನದ ಬಳಿ ಪ್ರಿನ್ಸಸ್ ರಸ್ತೆ ನಾಮಫಲಕ ಅಳವಡಿಕೆ



ಚೆಲುವಾಂಬ ಉದ್ಯಾನವನದ ವಿವೇಕಾನಂದ ಪ್ರತಿಮೆ ಮುಂಭಾಗವಿರುವ ನಂದಿ ವಿಗ್ರಹದ ಕೆಳಭಾಗದಲ್ಲಿ ಪ್ರಿನ್ಸಸ್ ರಸ್ತೆ ಎಂಬ ನಾಮಫಲಕವನ್ನು ಅಳವಡಿಸಿದರು.

ಮೈಸೂರು, ಜ.1(ಜಿಎ)–ಮೈಸೂರಿನ ಕೆಆರ್‌ಎಸ್ ರಸ್ತೆಗೆ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಎಂದು ಹೆಸರಿಡಲು ಪರ–ವಿರೋಧ ಚರ್ಚೆ ನಡೆಯುತ್ತಿರುವ ನಡುವೇ ಕರ್ನಾಟಕ ರಾಷ್ಟ್ರಸೇನೆ ಸಂಘಟನೆ ಸೇರಿದಂತೆ ಇನ್ನಿತರ ಸಂಘಟನೆಗಳು ಒಗ್ಗೂಡಿ ಚೆಲುವಾಂಬ ಉದ್ಯಾನವನದ ವಿವೇಕಾನಂದ ಪ್ರತಿಮೆ ಮುಂಭಾಗವಿರುವ ನಂದಿ ವಿಗ್ರಹದ ಕೆಳ ಭಾಗದಲ್ಲಿ ಪ್ರಿನ್ಸಸ್ ರಸ್ತೆ ಎಂಬ ನಾಮಫಲಕ ಅಳವಡಿಸಿದ್ದಾರೆ.

ಈ ವೇಳೆ ಸೇನೆಯ ಜಿಲ್ಲಾಧ್ಯಕ್ಷ ಆದರ್ಶ ಅರಸು ಮಾಧ್ಯಮಗಳೊಂದಿಗೆ ಮಾತನಾಡಿ, ಕೆಆರ್‌ಎಸ್ ರಸ್ತೆಗೆ 1921ರಲ್ಲಿ ಮಹಾರಾಜರು ಪ್ರಿನ್ಸಸ್ ರಸ್ತೆ ಎಂದು ನಾಮಕರಣ ಮಾಡಿದ್ದಾರೆ. ಅಂಚೆ ಮತ್ತು ರೈಲ್ವೆ ಇಲಾಖೆಯ ದಾಖಲೆಗಳಲ್ಲೂ ಪ್ರಿನ್ಸಸ್ ರಸ್ತೆ ಎಂದು ಉಲ್ಲೇಖಿಸಲಾಗಿದೆ. ಹಾಗಾಗಿ ಈ ರಸ್ತೆಗೆ ಸಿದ್ದರಾಮಯ್ಯ ಆರೋಗ್ಯ ಮಾರ್ಗ ಎಂದು ಮರುನಾಮಕರಣ ಮಾಡಬಾರದು. ಪ್ರಿನ್ಸಸ್ ರಸ್ತೆ ಎಂಬುದಕ್ಕೆ ಸೂಕ್ತ ದಾಖಲೆಗಳು ನಮ್ಮ ಬಳಿ ಇವೆ. ಆದರೆ ಪಾಲಿಕೆ ಆಯುಕ್ತರು ಯಾವುದೇ ದಾಖಲೆಗಳು ಇಲ್ಲ ಎಂದಿದ್ದಾರೆ. ಜನರ ದಿಕ್ಕು ತಪ್ಪಿಸುತ್ತಿರುವ ಪಾಲಿಕೆ ಆಯುಕ್ತರನ್ನು ಸೇವೆಯಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು.

ಕ್ಯಾಲೆಂಡರ್ ಬಿಡುಗಡೆ...



ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಟ್ರಸ್ಟ್‌ನ ನೂತನ ವರ್ಷದ ಕ್ಯಾಲೆಂಡರ್ ಅನ್ನು ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಬಿಡುಗಡೆಗೊಳಿಸಿದರು. ಈ ವೇಳೆ ಐಎನ್‌ಬಿಡಬ್ಲ್ಯೂಎಫ್ ಯುವ ಘಟಕದ ರಾಜ್ಯಾಧ್ಯಕ್ಷ ಸಂತೋಷ್, ಇಲವಾಲ ಅಂಬೇಡ್ಕರ್ ಯುವಕರ ಸಂಘದ ಅಧ್ಯಕ್ಷ ಚೆಲುವರಾಜ್, ಮೈಸೂರು ಗ್ರಾಮಾಂತರ ಯುವ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಜಟ್ಟಿಹುಂಡಿ ಸುನೀಲ್, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹರೀಶ್ ರೆಡ್ಡಿ, ಹುಯಿಲಾಳು ಮಂಜುನಾಥಪ್ರಸಾದ್, ಕಾಂಗ್ರೆಸ್ ಮುಖಂಡ ಶಿವಕುಮಾರ್, ಪುಟ್ಟಸ್ವಾಮಿ, ಮಹೇಶ್, ಮಹದೇವಪ್ರಸಾದ್, ಶಿವಶಂಕರ್, ಬೊಮ್ಮನಹಳ್ಳಿ ಕುಮಾರ್ ಇನ್ನಿತರರಿದ್ದರು.

ಯದುವೀರ್ ಒರಿಜಿನಲ್ ರಾಜವಂಶಸ್ಥರಲ್ಲ

- ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ವ್ಯಂಗ್ಯೋಕ್ತಿ
- ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಒರಿಜಿನಲ್ ರಾಜವಂಶಸ್ಥ
- ಅರಮನೆಗೆ ಯದುವೀರ್ ದತ್ತುಪುತ್ರ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಗುರುವಾರ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು, ಜ.1(ಬಿಎಲ್‌ಯು)–ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಒರಿಜಿನಲ್ ರಾಜವಂಶಸ್ಥರಲ್ಲ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಜರಿದಿದ್ದಾರೆ.

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜವಂಶಸ್ಥರನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಟಾರ್ಗೆಟ್ ಮಾಡುತ್ತಿದೆ ಎಂಬ ಯದುವೀರ್ ಹೇಳಿಕೆಗೆ ಲಕ್ಷ್ಮಣ್ ತಿರುಗೇಟು ನೀಡಿದ್ದಾರೆ.

ಒರಿಜಿನಲ್ ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರಿಗೆ ಕಾಂಗ್ರೆಸ್ ನಾಲ್ಕು ಬಾರಿ ಟಿಕೆಟ್ ನೀಡಿ ಸಂಸದರನ್ನಾಗಿ ಮಾಡಿದೆ. ಶ್ರೀಕಂಠದತ್ತ ನರಸಿಂಹ ಒಡೆಯರ್ ಅವರ ವಿರುದ್ಧ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದ ಬಿಜೆಪಿಗೆ ಯದುವೀರ್ ಈಗ ಸೇರ್ಪಡೆಗೊಂಡಿದ್ದಾರೆ ಎಂದು ಕಿಡಿಕಾರಿದರು.

ಯದುವೀರ್ ಮೈಸೂರು ಅರಮನೆಗೆ ದತ್ತು ಪುತ್ರರಾಗಿದ್ದು, ಒರಿಜಿನಲ್ ರಾಜವಂಶಸ್ಥರಲ್ಲ. ಇದರಿಂದ ನಾವೇನು ಅವರನ್ನು ಟಾರ್ಗೆಟ್ ಮಾಡುವ ಅವಶ್ಯಕತೆ ಇಲ್ಲ ಎಂದು ಲಕ್ಷ್ಮಣ ಟಾಂಗ್ ನೀಡಿದರು. ಹಾಗಾದರೆ ಚಾಮುಂಡಿಬೆಟ್ಟಕ್ಕೆ ಬೇಲಿ ಹಾಕಿಕೊಂಡರೂ ನಾವು ಕೇಳಬಾರದೇ ಎಂದು ಪ್ರಶ್ನಿಸಿದರು.

ಪ್ರಿಯಾಂಕ್ ಖರ್ಗೆ ರಾಜೀನಾಮೆ ಏಕೆ ನೀಡಬೇಕು: ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣದಲ್ಲಿ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಬಿಜೆಪಿ ಪಟ್ಟು ಹಿಡಿದಿದೆ. ಆದರೆ ಗುತ್ತಿಗೆದಾರ ಸಚಿನ್ ಬರೆದಿರುವ ಡೆತ್‌ನೋಟ್‌ನಲ್ಲಿ ಪ್ರಿಯಾಂಕ್ ಖರ್ಗೆ ಹೆಸರು ಉಲ್ಲೇಖಿಸಿಲ್ಲ. ಹೀಗಿರುವಾಗ ಪ್ರಿಯಾಂಕ್ ಖರ್ಗೆ ರಾಜೀನಾಮೆ ಏಕೆ ಕೊಡಬೇಕು ಎಂದು ಲಕ್ಷ್ಮಣ್ ಪ್ರಶ್ನಿಸಿದರು.

ಸಚಿನ್ ಆತ್ಮಹತ್ಯೆಗೆ ಪ್ರಿಯಾಂಕ್ ಖರ್ಗೆ ಪಾತ್ರ ಇರುವ ಬಗ್ಗೆ ಯಾವುದಾದರೊಂದು ಒಂದೇ ಒಂದು ದಾಖಲೆ ಇದ್ದರೆ ತೋರಿಸಲಿ. ಅದು ಬಿಟ್ಟು ರಾಜಕೀಯ ಕಾರಣಕ್ಕೆ ಸುಖಾಸುಮ್ಮನೆ ರಾಜೀನಾಮೆ ಕೇಳುವುದು ಎಷ್ಟರಮಟ್ಟಿಗೆ ಸರಿ ಎಂದು ಮರು ಪ್ರಶ್ನಿಸಿದರು.

ಸಚಿನ್ ಡೆತ್‌ನೋಟ್‌ನಲ್ಲಿರುವ ರಾಜು ಕಪನೂರ ಬಿಜೆಪಿ ನಾಯಕರಿಗೆ ಆಪ್ತನಾಗಿದ್ದಾನೆ. ಅಲ್ಲದೆ ಈತ ಬಿಜೆಪಿ ಮುಖಂಡ ಚಂದುಪಾಟೀಲ್ ಆಪ್ತನಾಗಿದ್ದಾನೆ. ರಾಜು ಕಪನೂರ ಪ್ರಿಯಾಂಕ್ ಖರ್ಗೆ ಜೊತೆ ಫೋಟೋ ತೆಗೆಸಿಕೊಂಡಿದ್ದಾನೆ ಎಂಬ ಒಂದೇ ಕಾರಣಕ್ಕೆ ರಾಜೀನಾಮೆ ಆಗ್ರಹಿಸುವುದು ಸರಿಯೇ ಎಂದು ಪ್ರಶ್ನಿಸಿದರು.

ಬಿಜೆಪಿಯವರಿಗೆ ದಲಿತರನ್ನು ಕಂಡರೆ ಆಗುವುದಿಲ್ಲ. ಈ ಕಾರಣಕ್ಕೆ ಮಲ್ಲಿಕಾರ್ಜುನ ಖರ್ಗೆ ಹಾಗೂ ಪ್ರಿಯಾಂಕ್ ಖರ್ಗೆ ವಿರುದ್ಧ ಆರೋಪ ಮಾಡಿ ಅವರ ಹೆಸರಿಗೆ ಕಳಂಕ ತರಲು ಕಾಯುತ್ತಿರುತ್ತಾರೆ ಎಂದು ಲಕ್ಷ್ಮಣ್ ಕಿಡಿಕಾರಿದರು.

ಬಿಜೆಪಿ ಹಾಗೂ ಆರ್‌ಎಸ್‌ಎಸ್ ಚಡ್ಡಿಯನ್ನು ತಲೆ ಮೇಲೆ ಇಟ್ಟುಕೊಂಡವರನ್ನು ಮುಂದೆ ಬಿಟ್ಟು ಕಾಂಗ್ರೆಸ್ ನಾಯಕರ ವಿರುದ್ಧ ಮಾತನಾಡಿಸುತ್ತಿದ್ದಾರೆ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವಿರುದ್ಧ ಪರೋಕ್ಷವಾಗಿ ಆಕ್ರೋಶ ವ್ಯಕ್ತಪಡಿಸಿದ ಲಕ್ಷ್ಮಣ್, ಸರ್ಕಾರದಲ್ಲಿ ಒಳ್ಳೆಯ ಕೆಲಸ ಮಾಡುವವರನ್ನು ಕಂಡರೆ ಹೊಟ್ಟೆಯುರಿ. ಆದ ಕಾರಣ ಇಂತಹ ಆಧಾರರಹಿತ ಆಪಾದನೆ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಪುತ್ರ ಬಳ್ಳಾರಿಯಲ್ಲಿ ಅಪಘಾತ ಮಾಡಿ ನಾಲ್ಕು ಜನರ ಸಾವಿಗೆ ಕಾರಣರಾದರು. ಆಗ ಅವರು ರಾಜೀನಾಮೆ ನೀಡಿದರೆ? ಕುಣಿಗಲ್ ಬಳಿ ಸಿ.ಟಿ.ರವಿ ಅಪಘಾತ ಎಸಗಿ ನಾಲ್ವರು ಅಮಾಯಕರ ಸಾವಿಗೆ ಕಾರಣರಾದಾಗ ರಾಜೀನಾಮೆ ಕೊಟ್ಟರೆ ಎಂದು ಲಕ್ಷ್ಮಣ ಪ್ರಶ್ನೆಗಳ ಸುರಿಮಳೆಗೈಯ್ದರು. ಕೆಪಿಸಿಸಿ ಕಾರ್ಯದರ್ಶಿ ಭಾಸ್ಕರ್, ನಗರ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮಾಧ್ಯಮ ವಕ್ತಾರ ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ದಾಖಲಾತಿಯಲ್ಲಿ ಪ್ರಿನ್ಸಸ್ ಹೆಸರಿಲ್ಲದಿದ್ದರೆ ಸಿದ್ದರಾಮಯ್ಯ ಹೆಸರಿಡಲಿ: ಆರ್.ಮೂರ್ತಿ

ಮೈಸೂರಿನ ಕೆಆರ್‌ಎಸ್ ರಸ್ತೆಗೆ ಪ್ರಿನ್ಸಸ್ ಹೆಸರಿದ್ದರೆ ಹಾಗೆ ಇರಲಿ, ಇಲ್ಲದಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡಲಿ ಎಂದು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಸ್ಪಷ್ಟಪಡಿಸಿದರು.

ಮೈಸೂರಿನ ಯಾವ ರಸ್ತೆಗೂ ಸಿದ್ದರಾಮಯ್ಯ ಹೆಸರು ಇಲ್ಲ. ಅಲ್ಲದೆ ಈಗಿರುವ ಕೆಆರ್‌ಎಸ್ ರಸ್ತೆಗೆ ಅಧಿಕೃತವಾಗಿ ಯಾವ ಹೆಸರು ಇಲ್ಲ. ಒಂದು ವೇಳೆ ಪ್ರಿನ್ಸಸ್ ಹೆಸರಿದ್ದರೆ ದಾಖಲಾತಿ ತೋರಿಸಲಿ. ಆಗ ಪ್ರಿನ್ಸಸ್ ಹೆಸರು ಮುಂದುವರೆಸಲು ನಮ್ಮ ತಕರಾರು ಇಲ್ಲ. ಒಂದು ವೇಳೆ ಪ್ರಿನ್ಸಸ್ ಹೆಸರು ಇಲ್ಲದಿದ್ದರೆ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡಲಿ ಎಂದು ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಕೆಆರ್‌ಎಸ್ ರಸ್ತೆಗೆ ಪ್ರಿನ್ಸಸ್ ರಸ್ತೆ ಎಂದು ಅಧಿಕೃತವಾಗಿ ನಾಮಕರಣ ಮಾಡಿಲ್ಲ. 1931 ರಿಂದ ಈ ರಸ್ತೆಯನ್ನು ಕೆಆರ್‌ಎಸ್ ರಸ್ತೆ ಎಂಬ ಹೆಸರಿನಿಂದ ಕರೆಯಲಾಗುತ್ತಿದೆ. ಇದಕ್ಕೆ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ದಾಖಲಾತಿ ತೋರಿಸುತ್ತದೆ. ಒಂದು ವೇಳೆ ಪ್ರಿನ್ಸಸ್ ರಸ್ತೆ ಎಂದಿದ್ದರೆ ದಾಖಲಾತಿಯೇ ಸಾಕ್ಷಿ. ಇದನ್ನು ಸಾಬೀತು ಮಾಡಿದರೆ ಅದನ್ನೇ ಮುಂದುವರೆಸಲು ನಮ್ಮ ಅಭ್ಯಂತರವಿಲ್ಲ ಎಂದು ಸ್ಪಷ್ಟಪಡಿಸಿದರು.

ಮೈಸೂರಿನ ಯಾವುದಾದರೂ ರಸ್ತೆಗೆ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡಲಾಗಿದೆಯೇ ಎಂದು ನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರು ನಗರಪಾಲಿಕೆಯ 9 ವಲಯ ಕಚೇರಿಯಿಂದ ವರದಿ ಪಡೆದಿದ್ದು, ಎಲ್ಲೂ ಸಿದ್ದರಾಮಯ್ಯ ಹೆಸರಿಟ್ಟಿಲ್ಲ. ಈ ಹಿನ್ನೆಲೆಯಲ್ಲಿ ಈಗ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡಲು ಪ್ರಸ್ತಾವನೆ ಸಲ್ಲಿಸಿದ್ದೇವೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಹೆಸರು ನಾಮಕರಣ ಮಾಡುವ ಸಂಬಂಧ ದಾಖಲಾತಿ ಸಮೇತ ಆಕ್ಷೇಪಣೆ ಸಲ್ಲಿಸಲು ಇನ್ನೂ ಕಾಲಾವಕಾಶವಿದೆ. ಈ ಸಂದರ್ಭದಲ್ಲಿ 'ಪ್ರಿನ್ಸಸ್ ರಸ್ತೆ' ಎಂಬುದು ಸಾಬೀತಾಗದಿದ್ದರೆ ನೂರಕ್ಕೆ ನೂರರಷ್ಟು ಸಿದ್ದರಾಮಯ್ಯ ಹೆಸರು ಇಟ್ಟೇ ಇಡುತ್ತೇವೆ. ಇದಕ್ಕೆ ಯಾವ ದೊಣ್ಣೆ ನಾಯಕನ ಅನುಮತಿ ಬೇಕಿಲ್ಲ ಎಂದು ಹೇಳಿದರು.

ವಿಶ್ವಮಾನವ ಗಾಲ್ಫ್ ಓಪನ್ ಚಾಂಪಿಯನ್‌ಶಿಪ್



ಮೈಸೂರಿನ ಜೆಡಬ್ಲ್ಯೂ ಗಾಲ್ಫ್ ಕ್ಲಬ್‌ನಲ್ಲಿ ನಡೆದ 15ನೇ ಆವೃತ್ತಿ ವಿಶ್ವಮಾನವ ಗಾಲ್ಫ್ ಓಪನ್ ಚಾಂಪಿಯನ್‌ಶಿಪ್–2024 ವಿಜೇತರು. (ಕುಳಿತಿರುವವರು ಎಡದಿಂದ ಬಲಕ್ಕೆ): ಸೋನಮ್ ಚುಗ್ (ಟೂರ್ನಮೆಂಟ್ ಸಬ್ ಕಮಿಟಿ ಅಧ್ಯಕ್ಷ), ವಿ.ಜಿ.ಆಚಾರ್ಯ (ಕಾರ್ಯದರ್ಶಿ), ಆರ್.ಎಸ್.ನಿತೀಶ್ (ಖಜಾಂಚಿ), ಎಂ.ಎಸ್.ಯಶ್ವಂತ್ (ಕ್ಯಾಪ್ಟನ್), ಡಾ.ಅಬ್ರಹಾಂ ಥಾಮಸ್ (ಅಧ್ಯಕ್ಷ), ಬಿ.ಎಂ.ನಾಗೇಶ್ (ವಿಶ್ವಮಾನವ ಗಾಲ್ಫರ್ಸ್ ಅಸೋಸಿಯೇಷನ್ ಅಧ್ಯಕ್ಷ), ಹೆಚ್.ಸಿ.ಸುಬ್ರಮಣ್ಯ (ಉಪಾಧ್ಯಕ್ಷ), ರಾಘವ ಲಿಂಗೇಗೌಡ (ಖಜಾಂಚಿ); (ನಿಂತಿರುವವರು ಎಡದಿಂದ ಬಲಕ್ಕೆ): ಹರೀಶ್ ಖಾಡೆ, ಎಂ.ಎಸ್.ದಿನೇಶ್‌ಕುಮಾರ್, ಕೆ.ಎಸ್.ಗಣೇಶ್, ಎಂ.ಚಿರಾಯು, ಕೆ.ಕೆ.ಚೆಂಗಪ್ಪ, ಪಿ.ಕೆ.ಸೋಮಯ್ಯ, ಟಿ.ಎನ್.ಶಶಿಕುಮಾರ್, ಕೃಷಾ ನಿಚಾನಿ, ಎಸ್.ಜಿ.ಪ್ರಭು, ಎಸ್.ಎನ್.ಹೇಮಂತ್, ಬಿ.ಎಸ್.ಹರಿಶಂಕರ್, ಯುಕ್ತಾ ಜನಾರ್ಧನ್, ಎಂ.ಜಿ.ಚೆಂಗಪ್ಪ, ಪಿ.ಲಾವಿತ್, ಎಂ.ಪಿ.ಮಂಜುನಾಥ್ ಮತ್ತು ಡಾ.ಹೆಚ್.ಸಿ.ಲೋಕೇಶ್ ಚಂದ್ರ ಅವರನ್ನು ಕಾಣಬಹುದು.

ಅಭಿನಂದನೆ...



ಮೈಸೂರಿನ ಚಲುವಾಂಬ ತಾಯಿ–ಮಕ್ಕಳ ಆಸ್ಪತ್ರೆಯ ನಿವೃತ್ತ ಅಧೀಕ್ಷಕ ಹಾಗೂ ಮಕ್ಕಳ ತಜ್ಞ ಡಾ.ರಾಜೇಂದ್ರಕುಮಾರ್ ಅವರನ್ನು ಪೇಪರ್ ಮಂಜು ನಾಡನಹಳ್ಳಿ, ನಿವೃತ್ತ ಬ್ಯಾಂಕ್ ವ್ಯವಸ್ಥಾಪಕ ವೈ.ಎಂ.ರಂಗಸ್ವಾಮಿ, ಲೋಕೇಶ್ವರ, ನಿವೃತ್ತ ಪ್ರೊ.ಬಸವರಾಜು, ಪಂಡಿತ್ ನಾಗರಾಜು ಇತರರು ಅಭಿನಂದಿಸಿದರು.

ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೆವಾಲ್‌ಗೆ ಏನಾದರೂ ತೊಂದರೆಯಾದರೆ ಕೇಂದ್ರ ಸರ್ಕಾರವೇ ಹೊಣೆ

- ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಎಚ್ಚರಿಕೆ
- ಜ.29 ಬೆಂಗಳೂರಿನ ರಿಸರ್ವ್ ಬ್ಯಾಂಕ್ ಮುಂಭಾಗ ಪ್ರತಿಭಟನೆ



ನಾಗೇಂದ್ರ

ಮೈಸೂರು,ಜ.1(ಜಿಎ)– ಡಾ.ಎಂ.ಎಸ್.ಸ್ವಾಮಿನಾಥನ್ ವರದಿಯನ್ವಯ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಖಾತರಿಗೊಳಿಸುವಂತೆ ಆಗ್ರಹಿಸಿ, ಪಂಜಾಬಿನಲ್ಲಿ ಹೋರಾಟ ನಡೆಸುತ್ತಿರುವ ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೆವಾಲ್ ಅವರಿಗೆ ಏನಾದರೂ ಹೆಚ್ಚು ಕಡಿಮೆ ಆದರೆ, ಅದಕ್ಕೆ ಕೇಂದ್ರ ಸರ್ಕಾರ ನೇರ ಹೊಣೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಗಜಿತ್ ಸಿಂಗ್ ದಲ್ಲೆವಾಲ್ ಅವರು ಕಳೆದ 37 ದಿನಗಳಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದು, ಅವರಿಗೆ ಆರೋಗ್ಯದಲ್ಲಿ ಏರುಪೇರು ಆಗಿ ಏನಾದರೂ ಹೆಚ್ಚು ಕಡಿಮೆ ಆದರೆ ಕೇಂದ್ರ ಸರ್ಕಾರ ನೇರ ಹೊಣೆಯಾಗಲಿದೆ ಎಂದು ಹೇಳಿದರು.

ಈ ಹಿಂದೆ ದೆಹಲಿಯ ಸುತ್ತಾಮುತ್ತಾ ನಡೆದ ರೈತ ಚಳುವಳಿಯಲ್ಲಿ ಕೇಂದ್ರ ಸರ್ಕಾರ 786 ಮಂದಿ ರೈತರನ್ನು ಬಲಿ ತೆಗೆದುಕೊಂಡಿದೆ. ಇನ್ನೆಷ್ಟು ರೈತರ ಬಲಿ ಬೇಕಾಗಿದೆ. ಕೂಡಲೇ ಕೇಂದ್ರ ಸರ್ಕಾರ ರೈತರೊಂದಿಗೆ ಮಾತುಕತೆಗೆ ಮುಂದಾಗಬೇಕು ಎಂದು ಆಗ್ರಹಿಸಿದರು.

ರೈತರಿಗೆ ನೀಡುವ ಕೃಷಿ ಸಾಲವನ್ನು ಕಡಿತಗೊಳಿಸಿರುವ ನಬಾರ್ಡ್ ನೀತಿ ಖಂಡಿಸಿ ಹಾಗೂ ಮೈಕ್ರೋ ಫೈನಾನ್ಸ್ ಹಾವಳಿ ತಪ್ಪಿಸಲು ಒತ್ತಾಯಿಸಿ ಜ.29ರಂದು ಬೆಂಗಳೂರಿನ ರಿಸರ್ವ್ ಬ್ಯಾಂಕ್ ಮುಂಭಾಗ ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು. ಸದ್ಯದಲ್ಲಿಯೇ ಮಹದೇಶ್ವರ ಬೆಟ್ಟದಲ್ಲಿ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಕುಡಿಯುವ ನೀರು, ಸಣ್ಣ ನೀರಾವರಿ, ಶಿಕ್ಷಣ, ಕೃಷಿ ಅಭಿವೃದ್ಧಿ, ಪ್ರವಾಸೋದ್ಯಮ ಮತ್ತು ಮೂಲಸೌಕರ್ಯಗಳಿಗೆ ಹೆಚ್ಚು ಒತ್ತು ನೀಡುವ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಮೈಸೂರು ಜಿಲ್ಲೆಯ ಸರಗೂರು, ಸಾಲಿಗ್ರಾಮ ತಾಲೂಕುಗಳು ಘೋಷಣೆಯಾಗಿ ಬಹಳ ವರ್ಷಗಳಾಗಿವೆ. ಆದರೆ, ಎರಡು ತಾಲೂಕುಗಳು ತಾಲೂಕು ಕೇಂದ್ರವಾಗಿ ಅಭಿವೃದ್ಧಿಯಾಗಿಲ್ಲ. ಈ ಹಿನ್ನೆಲೆಯಲ್ಲಿ ಈ ಬಜೆಟ್‌ನಲ್ಲಿ ವಿಶೇಷ ಯೋಜನೆ ಘೋಷಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಹೊಸಕೋಟೆ ಬಸವರಾಜ್, ಹೊಸೂರು ಕುಮಾರ್, ಮಂಡಕಳ್ಳಿ ಮಹೇಶ್, ಪಿ.ಮರಂಕಯ್ಯ, ನೇತ್ರಾವತಿ, ಮೀನಾಕ್ಷಿ ಉಪಸ್ಥಿತರಿದ್ದರು.

ಜ.5ರಂದು ವಿವಿಧ ಕ್ಷೇತ್ರಗಳ ಸಾಧಕರಿಗೆ ಹೊಯ್ಸಳ ಪ್ರಶಸ್ತಿ ಪ್ರದಾನ

ಮೈಸೂರು, ಜ. 1– ಮೈಸೂರಿನ ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗದ ವತಿಯಿಂದ ವಿವಿಧ ಕ್ಷೇತ್ರಗಳ ಸಾಧಕರಿಗೆ ಹೊಯ್ಸಳ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜ.5 ರಂದು ಬೆಳಗ್ಗೆ 10.30ಕ್ಕೆ ಗಾನಭಾರತೀ ವೀಣೆ ಶೇಷಣ್ಣ ಭವನದಲ್ಲಿ ಏರ್ಪಡಿಸಲಾಗಿದೆ. ಪ್ರಸಾರಾಂಗದ ವಿಶ್ರಾಂತ ನಿರ್ದೇಶಕ ಕೆ.ಟಿ. ವೀರಪ್ಪ, ಸಾಹಿತಿ ಗಜಾನನ ಶರ್ಮ, ವಿಜ್ಞಾನಿ ಟಿ.ಆರ್. ಅನಂತರಾಮು, ವೈದ್ಯ ಡಾ. ಸದಾನಂದ ಹಾಗೂ ನೃತ್ಯಕಲಾವಿದ ಡಾ. ಕೆ. ಕುಮಾರ್ ಸೇರಿದಂತೆ 18 ಮಂದಿ ವಿವಿಧ ಕ್ಷೇತ್ರಗಳ ಸಾಧಕರು ಹೊಯ್ಸಳ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಡಾ.ಎಚ್.ಬಿ.ರಾಜಶೇಖರ್ ಅಧ್ಯಕ್ಷತೆಯಲ್ಲಿ ನಡೆದ ಹೊಯ್ಸಳ ಪ್ರಶಸ್ತಿ ಆಯ್ಕೆ ಸಮಿತಿ ಸಭೆಯಲ್ಲಿ ಈ ಆಯ್ಕೆ ಮಾಡಲಾಯಿತು.

ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ



ಮೈಸೂರಿನ ಕಲಾಮಂದಿರದ ಸುಚಿತ್ರ ಗ್ಯಾಲರಿಯಲ್ಲಿ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಆಚರಿಸಲಾಯಿತು.

ಮೈಸೂರು,ಜ.1–ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಕಲಾಮಂದಿರದ ಸುಚಿತ್ರ ಗ್ಯಾಲರಿಯಲ್ಲಿ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯನ್ನು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸರಳವಾಗಿ ಆಚರಿಸಲಾಯಿತು. ಭಾರತದ ಮಾಜಿ ಪ್ರಧಾನಮಂತ್ರಿ ಡಾ.ಮನಮೋಹನ್‌ಸಿಂಗ್ ನಿಧನರಾಗಿರುವ ಹಿನ್ನೆಲೆಯಲ್ಲಿ ಏಳು ದಿನಗಳು ರಾಜ್ಯಾದ್ಯಂತ ಶೋಕವನ್ನು ಆಚರಿಸುವುದರಿಂದ ಸರಳವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ವಿಭಾಗೀಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್ ಹಾಗೂ ಸಮುದಾಯದ ಮುಖಂಡರು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕೃಪಾಕರ–ಸೇನಾನಿಯಿಂದ ವನ್ಯಜೀವಿ ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ಜಿಲ್ಲಾ ಪತ್ರಕರ್ತರ ಭವನದಲ್ಲಿ ವನ್ಯಜೀವಿ ಛಾಯಾಗ್ರಾಹಕರಾದ ಕೃಪಾಕರ್–ಸೇನಾನಿ ವನ್ಯಜೀವಿ ಚಿತ್ರಗಳುಳ್ಳ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಮೈಸೂರು, ಜ.1(ಎಂಟಿವೈ)– ವನ್ಯಜೀವಿ ಹಾಗೂ ಪಕ್ಷಿ ಚಿತ್ರಗಳುಳ್ಳ ಪತ್ರಿಕಾ ಹಾಗೂ ವನ್ಯಜೀವಿ ಛಾಯಾಗ್ರಾಹಕರಾದ ಎಸ್.ಆರ್. ಮಧುಸೂದನ್ ಹಾಗೂ ಜಿ.ಎಸ್.ರವಿಶಂಕರ್ ಪ್ರಕಟಿಸಿರುವ ಕ್ಯಾಲೆಂಡರ್ ಅನ್ನು ವನ್ಯಜೀವಿ ಛಾಯಾಗ್ರಾಹಕರಾದ ಕೃಪಾಕರ–ಸೇನಾನಿ ಬಿಡುಗಡೆ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಿರಿಯ ಪತ್ರಿಕಾ ಛಾಯಾಗ್ರಾಹಕ ನೇತ್ರರಾಜು ಅವರ ಸ್ಮರಣಾರ್ಥ ಛಾಯಾಗ್ರಾಹಕರಾದ ಎಸ್.ಆರ್. ಮಧುಸೂದನ್ ಹಾಗೂ ಜಿ.ಎಸ್.ರವಿಶಂಕರ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಈ ವೇಳೆ ಖ್ಯಾತ ವನ್ಯಜೀವಿ ಛಾಯಾಗ್ರಾಹಕರಾದ ಕೃಪಾಕರ್ ಮಾತನಾಡಿ, ಕ್ಯಾಲೆಂಡರ್‌ಗೆ 3–4 ಸಾವಿರ ವರ್ಷಗಳ ಇತಿಹಾಸವಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಕ್ಯಾಲೆಂಡರ್ ಸಂಸ್ಕೃತಿ ನಶಿಸುತ್ತಿದೆ. ಮೊಬೈಲ್‌ನಿಂದಾಗಿ ಸಾಂಸ್ಕೃತಿಕ ಬದಲಾವಣೆ ಆಗುತ್ತಿದೆ. ಹೀಗಾಗಿ ಎಷ್ಟು ಮಂದಿ ಕ್ಯಾಲೆಂಡರ್ ಬಳಸುತ್ತಾರೆ ಎಂಬ ಪ್ರಶ್ನೆ ಎದ್ದಿರುವ ಈ ದಿನಗಳಲ್ಲಿ ಇವರು ಹೊರತಂದಿರುವ ಕ್ಯಾಲೆಂಡರ್ ಆಕರ್ಷಕವಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ವನ್ಯಜೀವಿ ಛಾಯಾಗ್ರಾಹಕ ಸೇನಾನಿ ಮಾತನಾಡಿ, ಈ ಕ್ಯಾಲೆಂಡರ್ ಮನೆಯ ಗೋಡೆ ಮೇಲೆ ತೂಗು ಹಾಕಲು ಅರ್ಹವಾದ ಚಿತ್ರಗಳನ್ನು ಹೊಂದಿದೆ. ಪ್ರಮುಖವಾಗಿ ಪಕ್ಷಿಗಳ ಚಿತ್ರಗಳೇ ಪ್ರಧಾನವಾಗಿದೆ. ಇದರಿಂದ ಕ್ಯಾಲೆಂಡರ್ ಮನೆಯ ಗೋಡೆ ಮೇಲೆ ಹಾಕಲು ಜನ ಇಷ್ಟಪಡುತ್ತಾರೆ. ಪಕ್ಷಿಗಳ ಚಿತ್ರ ನೋಡಿದ ಮಕ್ಕಳು ಅವುಗಳ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಬೆಳೆಸಿಕೊಳ್ಳಲು ಸಹಕಾರಿಯಾಗುತ್ತದೆ. ಕ್ಯಾಲೆಂಡರ್ ನೋಡಿದ ನೂರು ಮಕ್ಕಳಲ್ಲಿ ಒಂದು ಮಗುವಾದರೂ ಇದು ಯಾವ ಪಕ್ಷಿ ಎಂದು ಕೇಳಿದಲ್ಲಿ ವನ್ಯಜೀವಿ ಸಂರಕ್ಷಣೆಯಲ್ಲಿ ಜಾಗೃತಿ ಮೂಡಿಸಿದಂತಾಗುತ್ತದೆ. ಅವುಗಳ ಬಗ್ಗೆ ಪ್ರೀತಿ ಬೆಳೆಸಿದಂತಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಅರಣ್ಯಾಧಿಕಾರಿ ಕಾಂತರಾಜ್, ಪತ್ರಿಕಾ ಛಾಯಾಗ್ರಾಹಕರಾದ ವಿಶ್ವನಾಥ್ ಸುವರ್ಣ, ಎಸ್.ಆರ್.ಮಧುಸೂದನ್, ಛಾಯಾಗ್ರಾಹಕ ಮಹೇಶ್, ವನ್ಯಜೀವಿ ಛಾಯಾಗ್ರಾಹಕ ಜಿ.ಎಸ್.ರವಿಶಂಕರ್, ಉರಗ ತಜ್ಞ ಸ್ನೇಕ್ ಶ್ಯಾಂ ಇನ್ನಿತರರಿದ್ದರು.

ದೇಶ - ವಿದೇಶ

ಸುಚಿರ್ ಬಾಲಾಜಿ ಸಾವು ಆತ್ಮಹತ್ಯೆಯಲ್ಲ ಎಂದ ತಾಯಿ; ಎಫ್‌ಬಿಐ ತನಿಖೆಗೆ ಆಗ್ರಹ



ಸ್ಯಾನ್‌ಫ್ರಾನ್ಸಿಸ್ಕೋ: ಕಳೆದ ಅಮೆರಿಕದ ಓಪನ್ ಎಐ ಸಂಸ್ಥೆಯಲ್ಲಿ ಸಂಶೋಧಕರಾಗಿದ್ದ ಭಾರತೀಯ ಮೂಲದ ಸುಚಿರ್ ಬಾಲಾಜಿ ಅವರು ನ.26ರಂದು ತಾವು ನೆಲೆಸಿದ್ದ ಸ್ಯಾನ್ ಫ್ರಾನ್ಸಿಸ್ಕೊ ಅಪಾರ್ಟ್‌ಮೆಂಟ್‌ನಲ್ಲಿ ಶವವಾಗಿ ಪತ್ತೆಯಾಗಿದ್ದರು. ಹೆಚ್ಚು ಜನಪ್ರಿಯವಾಗಿರುವ ಕೃತಕ ಬುದ್ಧಿಮತ್ತೆ ಕಾರ್ಯಕ್ರಮವಾದ ಚಾಟ್ ಜಿಪಿಟಿ ಅಭಿವೃದ್ಧಿಯಲ್ಲಿ ಅಮೆರಿಕದ ಹಕ್ಕುಸ್ವಾಮ್ಯ ಕಾನೂನನ್ನು ತಮ್ಮ ಕಂಪನಿ ಉಲ್ಲಂಘಿಸಿದೆ ಎಂದು ಓಪನ್ ಎಐ ವಿರುದ್ಧ ಸುಚಿರ್ ಬಾಲಾಜಿ ಬಹಿರಂಗವಾಗಿ ಆರೋಪಿಸಿದ ಮೂರು ತಿಂಗಳ ನಂತರ ಈ ದುರಂತ ಸಂಭವಿಸಿದೆ.

ಬಾಲಾಜಿ ಸಾವು ಆತ್ಮಹತ್ಯೆ ಎಂದು ಹೇಳಲಾಗಿತ್ತು. ಆದರೆ ಅವರ ತಾಯಿ ಕೊಲೆ ಆರೋಪ ಮಾಡಿದ್ದು, ಎಫ್‌ಬಿಐ ತನಿಖೆಗೆ ಒತ್ತಾಯಿಸಿದ್ದಾರೆ. ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪೂರ್ಣಿಮಾ ರಾಮರಾವ್, ನಾವು ಈ ಕುರಿತು ತನಿಖೆಗೆ ಖಾಸಗಿ ತನಿಖಾಧಿಕಾರಿ ನೇಮಿಸಿದ್ದೇವೆ. ಸಾವಿನ ಕಾರಣವನ್ನು ಪತ್ತೆ ಹಚ್ಚಲು 2ನೇ ಬಾರಿಗೆ ಶವಪರೀಕ್ಷೆ ಮಾಡಿದ್ದೇವೆ. ಖಾಸಗಿ ಶವಪರೀಕ್ಷೆಯು ಪೊಲೀಸರು ಹೇಳಿದ ಕಾರಣವನ್ನು ದೃಢೀಕರಿಸುವುದಿಲ್ಲ. ಸುಚಿರ್ ಇದ್ದ ಅಪಾರ್ಟ್ಮೆಂಟ್‌ನ ಬಾತ್ ರೂಂನಲ್ಲಿ ರಕ್ತದ ಕಲೆಗಳು ಇದ್ದವು. ಯಾರೋ ಅವನನ್ನು ಹೊಡೆದಂತೆ ತೋರುತ್ತಿದೆ ಎಂದು ಹೇಳಿದ್ದಾರೆ.

ಪ್ರವಾಸಕ್ಕೆ ಕರೆತಂದು ತಾಯಿ, ನಾಲ್ವರು ಸಹೋದರಿಯರ ಹತ್ಯೆಗೈದ ಯುವಕ

ಲಕ್ನೋ: ಉತ್ತರ ಪ್ರದೇಶದ ರಾಜಧಾನಿ ಲಕ್ನೋದಲ್ಲಿ ಹೊಸ ವರ್ಷದ ಮೊದಲ ದಿನವೇ ವ್ಯಕ್ತಿಯೊಬ್ಬ ತನ್ನ ತಾಯಿ ಮತ್ತು ನಾಲ್ವರು ಸಹೋದರಿಯರನ್ನು ಬರ್ಬರವಾಗಿ ಹತ್ಯೆ ಮಾಡಿರುವ ಹೃದಯವಿದ್ರಾವಕ ಘಟನೆ ಬೆಳಕಿಗೆ ಬಂದಿದೆ. ಕೊಲೆ ಆರೋಪಿ ಅರ್ಷದ್‌ನನ್ನು(24) ಪೊಲೀಸರು ಬಂಧಿಸಿದ್ದಾರೆ. ಲಖನೌದಲ್ಲಿ ಹೊಸ ವರ್ಷಾಚರಣೆ ಮಾಡಲು ಅರ್ಷದ್ ತನ್ನ ಪೋಷಕರು ಮತ್ತು ನಾಲ್ವರು ಸಹೋದರಿಯರನ್ನು ಕರೆತಂದಿದ್ದನು. ಇವರೆಲ್ಲರೂ ಆಗ್ರಾದ ನಿವಾಸಿಗಳು. ಆದರೆ, ಅರ್ಷದ್‌ನ ತಂದೆ ಪತ್ತೆಯಾಗಿಲ್ಲ. ತಂದೆಯ ಹುಡುಕಾಟದಲ್ಲಿ ಪೊಲೀಸರು ನಿರತರಾಗಿದ್ದಾರೆ. ಪ್ರಾಥಮಿಕ ವಿಚಾರಣೆ ವೇಳೆ ಆರೋಪಿ ಅರ್ಷದ್ ತನ್ನ ನಾಲ್ವರು ಸಹೋದರಿಯರು ಮತ್ತು ತಾಯಿಯನ್ನು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಊರಿನಲ್ಲಿ ತಮ್ಮ ಜಮೀನನ್ನು ಕಬಳಿಸಲು ಸ್ಥಳೀಯರು ತನ್ನ ಕುಟುಂಬಕ್ಕೆ ಕಿರುಕುಳ ನೀಡುತ್ತಿದ್ದಾರೆ ಎಂದು ಹೇಳಿದ್ದಾನೆ. ತನಗೇನಾದರೂ ಆಗಿದ್ದರೆ ತನ್ನ ತಾಯಿ ಮತ್ತು ತಂಗಿಯ ಪಾಡು ಏನಾಗುತ್ತದೋ ಎಂಬ ಭಯ ಅವನಿಗಿತ್ತು. ಆದ್ದರಿಂದ ಅವರನ್ನು ಕೊಲ್ಲಲು ನಿರ್ಧರಿಸಿದ ನಂತೆ. ಘಟನೆಗೆ ಬಳಸಿದ್ದ ಕಟಿಂಗ್ ಬ್ಲೇಡ್ ಹಾಗೂ ಸ್ಕಾರ್ಫ್ ವಶಪಡಿಸಿಕೊಳ್ಳಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಆರೋಪಿಯನ್ನು ಕೂಲಂಕಷವಾಗಿ ವಿಚಾರಣೆ ನಡೆಸಲಾಗುತ್ತಿದೆ.


ಡೊನಾಲ್ಡ್ ಟ್ರಂಪ್ ಲೈಂಗಿಕ ದೌರ್ಜನ್ಯದ ತೀರ್ಪು ಎತ್ತಿ ಹಿಡಿದ ನ್ಯಾಯಾಲಯ



ವಾಷಿಂಗ್‌ಟನ್: ಅಮೆರಿಕಾ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿರುದ್ಧ ಲೈಂಗಿಕ ದೌರ್ಜನ್ಯದ ಪ್ರಕರಣವೊಂದರಲ್ಲಿ ಫೆಡರಲ್ ಮೇಲ್ಮನವಿ ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

1996ರಲ್ಲಿ ಉನ್ನತ ದರ್ಜೆಯ ಡಿಪಾರ್ಟ್‌ಮೆಂಟ್ ಸ್ಟೋರ್ ಡ್ರೆಸ್ಸಿಂಗ್ ರೂಮ್‌ನಲ್ಲಿ ಅಂಕಣಕಾರರನ್ನು ಲೈಂಗಿಕವಾಗಿ ನಿಂದಿಸಿದ್ದ ಆರೋಪ ಡೊನಾಲ್ಡ್ ಟ್ರಂಪ್ ವಿರುದ್ಧ ದಾಖಲಾಗಿತ್ತು. ಸಿವಿಲ್ ಪ್ರಕರಣದಲ್ಲಿ ತೀರ್ಪುಗಾರರ ತೀರ್ಮಾನವನ್ನು ಫೆಡರಲ್ ಕೋರ್ಟ್ ಎತ್ತಿಹಿಡಿದಿದೆ. 2ನೇ U.S. ಸರ್ಕ್ಯೂಟ್ ಕೋರ್ಟ್ ಆಫ್ ಅಪೀಲ್ಸ್, ಮ್ಯಾನ್‌ಹ್ಯಾಟನ್ ತೀರ್ಪುಗಾರರು ಇ. ಜೀನ್ ಕ್ಯಾರೊಲ್‌ಗೆ ಮಾನನಷ್ಟ ಮತ್ತು ಲೈಂಗಿಕ ನಿಂದನೆ'ಗಾಗಿ ನೀಡಿದ $5 ಮಿಲಿಯನ್ ದಂಡದ ಶಿಕ್ಷೆಯನ್ನು ಎತ್ತಿಹಿಡಿದಿದೆ. 1996ರಲ್ಲಿ ಟ್ರಂಪ್ ಅಂಗಡಿಯ ಡ್ರೆಸ್ಸಿಂಗ್ ಕೋಣೆಗೆ ತಮಾಷೆಯಾಗಿ ಪ್ರವೇಶಿಸಿದ ನಂತರ ಸೌಹಾರ್ದಯುತ ಮುಖಾಮುಖಿಯನ್ನು ಹಿಂಸಾತ್ಮಕ ದಾಳಿಯಾಗಿ ಪರಿವರ್ತಿಸಿದರು ಎಂದು ದೀರ್ಘಕಾಲದ ನಿಯತಕಾಲಿಕದ ಅಂಕಣಕಾರರು 2023ರ ವಿಚಾರಣೆಯಲ್ಲಿ ಸಾಕ್ಷ್ಯ ನೀಡಿದ್ದರು. ದಾಳಿ ನಡೆದಿಲ್ಲ ಎಂದು ಪದೇ ಪದೆ ನಿರಾಕರಿಸಿದ ನಂತರ ಟ್ರಂಪ್ ವಿಚಾರಣೆಯಿಂದ ಪಲಾಯನ ಮಾಡಿದ್ದರು.

44 ವರ್ಷಗಳ ಬಳಿಕ ಬಾಗಿಲು ತೆರೆದ ಮತ್ತೊಂದು ದೇವಾಲಯ



ಮೊರಾದಾಬಾದ್: ಮೊರಾದಾಬಾದ್‌ನಲ್ಲಿ ಕೋಮು ಹಿಂಸಾಚಾರದ ಹಿನ್ನೆಲೆಯಲ್ಲಿ ದಶಕಗಳ ಕಾಲ ಮುಚ್ಚಲಾಗಿದ್ದ ದೌಲತಾಬಾಗ್ ಪ್ರದೇಶದಲ್ಲಿನ ದೇವಾಲಯವನ್ನು ಮತ್ತೆ ತೆರೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಉತ್ತರಪ್ರದೇಶದ ವಿವಿಧ ಭಾಗಗಳಲ್ಲಿ ಅನೇಕ ಕೈಬಿಡಲಾದ ಅಥವಾ ಬೀಗ ಹಾಕಲಾದ ದೇವಾಲಯಗಳನ್ನು ಪ್ರಾರ್ಥನೆಗಾಗಿ ಪುನಃ ತೆರೆಯಲಾಗುತ್ತಿದೆ. 44 ವರ್ಷಗಳ ನಂತರ ಸೋಮವಾರ ದೇವಾಲಯವನ್ನು ತೆರೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆಡಳಿತದ ಆದೇಶದ ಮೇರೆಗೆ ಪೊಲೀಸ್ ಮತ್ತು ಮುನ್ಸಿಪಲ್ ಕಾರ್ಪೊರೇಷನ್ ಸಿಬ್ಬಂದಿಯನ್ನು ಒಳಗೊಂಡ ತಂಡವು ದೇವಾಲಯವನ್ನು ಪುನಃ ತೆರೆಯಲು ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಯಾವುದೇ ವಿರೋಧ ಅಥವಾ ಅಶಾಂತಿ ಕಂಡುಬಂದಿಲ್ಲ, ಮತ್ತು ಸ್ಥಳೀಯರು ಈ ಪ್ರಯತ್ನಕ್ಕೆ ಸಹಕರಿಸುತ್ತಿದ್ದಾರೆ ಎಂದು ನಾಗಫಣಿ ಪೊಲೀಸ್ ಇನ್ಸ್‌ಪೆಕ್ಟರ್ ಸುನೀಲ್‌ಕುಮಾರ್ ಹೇಳಿದರು. ಮತ್ತೆ ತೆರೆದ ನಂತರ ಕೆಲವು ದೇವಾಲಯದ ವಿಗ್ರಹಗಳು ಕಾಣೆಯಾಗಿವೆ. ಸ್ಥಳೀಯ ಅಧಿಕಾರಿಗಳು ಈಗ ಪುನಃಸ್ಥಾಪನೆ ಕಾರ್ಯವನ್ನು ನೋಡಿಕೊಳ್ಳುತ್ತಿದ್ದಾರೆ, ಜಾಗವನ್ನು ಸ್ವಚ್ಛಗೊಳಿಸಲಾಗಿದೆ, ದುರಸ್ತಿ ಮಾಡಲಾಗಿದೆ ಮತ್ತು ಮತ್ತೊಮ್ಮೆ ಸಾಮಾನ್ಯ ಪೂಜೆಗೆ ಸಿದ್ಧವಾಗಿದೆ ಎಂದರು.

ತೈವಾನ್ ಕಬಳಿಸಿಯೇ ಸಿದ್ಧ: ಹೊಸ ವರ್ಷದ ಭಾಷಣದಲ್ಲಿ ಚೀನಾ ಅಧ್ಯಕ್ಷ



ಬೀಜಿಂಗ್: ತೈವಾನ್ ಚೀನಾದ ಅವಿಭಾಜ್ಯ ಅಂಗವಾಗಿದ್ದು, ಅದನ್ನು ವಶಪಡಿಸಿಕೊಳ್ಳುವ ನಮ್ಮ ದೃಢ ನಿರ್ಧಾರದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಹೇಳಿದ್ದಾರೆ. ಹೊಸ ವರ್ಷದ ಮುನ್ನಾದಿನ ದೇಶವನ್ನುದ್ದೇಶಿಸಿ ಮಾತನಾಡಿದ ಅವರು, ತೈವಾನ್ ವಿಷಯದಲ್ಲಿ ನಮ್ಮನ್ನು ತಡೆಯುವುದು ಯಾರಿಂದಲೂ ಸಾಧ್ಯವಿಲ್ಲ ಎಂದು ಸ್ಪಷ್ಟ ನುಡಿಗಳಲ್ಲಿ ಹೇಳಿದ್ದಾರೆ.

ತೈವಾನ್ ಮರುವಶ ಮಾಡಿಕೊಳ್ಳುವುದು ನಮ್ಮ ಹಕ್ಕು. ಏಕೀಕೃತ ಚೀನಾದ ಕನಸು ನನಸಾಗಬೇಕಾದರೆ ದ್ವೀಪ ರಾಷ್ಟ್ರವು ಚೀನಾದ ಭಾಗವಾಗಲೇಬೇಕು. ತೈವಾನ್‌ಗಾಗಿ ಜಗತ್ತಿನ ಯಾವುದೇ ಶಕ್ತಿಯನ್ನು ನಾವು ಎದುರು ಹಾಕಿಕೊಳ್ಳಲು ಸಿದ್ಧ ಎಂದು ಕ್ಸಿ ಜಿನ್‌ಪಿಂಗ್ ಗುಡುಗಿದ್ದಾರೆ.

ತೈವಾನ್‌ಗಾಗಿ ನಾವು ಏನು ಬೇಕಾದರೂ ಮಾಡಲು ಸಿದ್ಧ. ಅದು ರಾಜತಾಂತ್ರಿಕ ಮಾತುಕತೆಗಳೇ ಆಗಿರಬಹುದು ಅಥವಾ ಮಿಲಿಟರಿ ಕಾರ್ಯಾಚರಣೆಯೇ ಆಗಿರಬಹುದು. ಯಾವುದೇ ಬಾಹ್ಯ ಶಕ್ತಿ ನಮ್ಮನ್ನು ತಡೆಯುವ ದುಸ್ಸಾಹಸ ಮಾಡಲಾರದು ಎಂದು ಕ್ಸಿ ಜಿನ್‌ಪಿಂಗ್ ಅವರು ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವ ಕೇವಲ ಮೂರು ವಾರಗಳ ಮೊದಲೇ ಪರೋಕ್ಷವಾಗಿ ಅಮೆರಿಕಕ್ಕೆ ಎಚ್ಚರಿಕೆ ನೀಡಿದ್ದಾರೆ.

ಸರ್ಕಾರಿ ಗೌರವದೊಂದಿಗೆ ಯೋಧ ದಿವಿನ್ ಅಂತ್ಯಕ್ರಿಯೆ

● ಮಾಲಂಬಿ ಗ್ರಾಮದಲ್ಲಿ ಅಂತಿಮ ವಿಧಿವಿಧಾನ ● ತಾಯಿ ಜಯಾ ರೋಧನೆ

ಮಡಿಕೇರಿ, ಜ.1-ಜಮ್ಮು-ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ಸಂಭವಿಸಿದ ಸೇನಾ ವಾಹನ ಅಪಘಾತದಲ್ಲಿ ಗಂಭೀರ ಗಾಯಗೊಂಡು ಹುತಾತ್ಮರಾದ ವೀರ ಯೋಧ ಪಳಂಗೋಟು ಪಿ.ದಿವಿನ್ ಅಂತ್ಯಕ್ರಿಯೆ ಸೋಮವಾರಪೇಟೆ ತಾಲೂಕಿನ ಆಲೂರು ಸಿದ್ದಾಪುರ ಸಮೀಪದ ಮಾಲಂಬಿ ಗ್ರಾಮದಲ್ಲಿ ಬುಧವಾರ ಸಕಲ ಸರ್ಕಾರಿ ಗೌರವದೊಂದಿಗೆ ನಡೆಸಲಾಯಿತು.

ಗೌಡ ಸಮುದಾಯದ ವಿಧಿವಿಧಾನಗಳನ್ನು ನೆರವೇರಿಸಿದ ಬಳಿಕ ದಿವಿನ್ ಅವರ ಚಿಕ್ಕಪ್ಪನ ಪುತ್ರ ಚಿರಾಗ್ ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ ಮಾಡಿದರು. ಈ ಮೂಲಕ ವೀರಯೋಧ ದಿವಿನ್ ಪಂಚಭೂತಗಳಲ್ಲಿ ಲೀನವಾದರು. ಭಾರತ್ ಮಾತಾ ಕೀ ಜೈ, ವೀರ ಯೋಧ ದಿವಿನ್ ಅಮರ್ ರಹೇ ಎಂಬ ಘೋಷಣೆಗಳು ಮುಗಿಲು ಮುಟ್ಟಿದ್ದರೆ, ದಿವಿನ್ ತಾಯಿ ಜಯಾ ರೋಧನೆ ನೋಡುಗರ ಕಣ್ಣಾಲಿಗಳಲ್ಲಿ ಕಂಬನಿ ತರಿಸಿತು.

ಸಾರ್ವಜನಿಕರ ದರ್ಶನ: ಮಂಗಳವಾರ ರಾತ್ರಿ ಬೆಂಗಳೂರಿನಿಂದ ಪಾರ್ಥಿವ ಶರೀರವನ್ನು ಸೇನಾ ವಾಹನದ ಮೂಲಕ ಕುಶಾಲನಗರಕ್ಕೆ ತಂದು ಇಲ್ಲಿನ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದ ಶೈತ್ಯಾಗಾರದಲ್ಲಿ ಇಡಲಾಗಿತ್ತು. ಬುಧವಾರ ಬೆಳಗ್ಗೆ 8 ರಿಂದ 11 ಗಂಟೆ ವರೆಗೆ ಕುಶಾಲನಗರದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಮಾಡಲಾಗಿತ್ತು.

ಬಳಿಕ ಆಲೂರು ಸಿದ್ದಾಪುರಕ್ಕೆ ಕೊಂಡೊಯ್ದು ಮಧ್ಯಾಹ್ನ 2.30ರವರೆಗೆ ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ಜಿಲ್ಲಾಡಳಿತ ಪರವಾಗಿ ಜಿಲ್ಲಾಧಿಕಾರಿ ವೆಂಕಟ್ ರಾಜಾ, ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ತಹಸೀಲ್ದಾರ್ ಕಿರಣ್ ಜಿ.ಗೌರಯ್ಯ, ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ, ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಪ್ರೊಬೇಷನರಿ ಎಸ್‌ಪಿ ಬೆನಕ ಪ್ರಸಾದ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್, ಕಿರಿಕೊಡ್ಲಿ ಮಠಾಧ್ಯಕ್ಷರಾದ ಶ್ರೀ ಸದಾಶಿವ ಸ್ವಾಮೀಜಿ, ಸೋಮವಾರಪೇಟೆ ತಹಸೀಲ್ದಾರ್ ಶ್ರೀಧರ್, ಕುಶಾಲನಗರ ಪುರಸಭೆ ಅಧ್ಯಕ್ಷೆ ಜಯಲಕ್ಷ್ಮಿ, ಮುಖ್ಯಾಧಿಕಾರಿ ಕೃಷ್ಣಪ್ರಸಾದ್, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಐಮುಡಿಯಂಡ ರಾಣಿ ಮಾಚಯ್ಯ, ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಸೂರ್ತಲೆ ಸೋಮಣ್ಣ, ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷ ಅಂಬೆಕಲ್ಲು ನವೀನ್, ಕುಶಾಲನಗರ ಗೌಡ ಸಮಾಜದ ಅಧ್ಯಕ್ಷ ಗಣಿ ಪ್ರಸಾದ್, ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಾಜಿ, ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ವೀರ ಯೋಧ ದಿವಿನ್‌ಗೆ ಪುಷ್ಪ ನಮನ ಸಲ್ಲಿಸಿದರು.



ಹುತಾತ್ಮ ಯೋಧ ಪಳಂಗೋಟು ಪಿ.ದಿವಿನ್ ಅವರ ಪಾರ್ಥಿವ ಶರೀರದ ಮೇಲೆ ಹೊದಿಸಿದ್ದ ತ್ರಿವರ್ಣ ಧ್ವಜವನ್ನು ಅವರ ತಾಯಿ ಜಯಾ ಅವರಿಗೆ ಹಸ್ತಾಂತರಿಸಲಾಯಿತು.

ಮಾರ್ಗ ಉದ್ದಕ್ಕೂ ಶ್ರದ್ಧಾಂಜಲಿ: ದಿವಿನ್ ಪಾರ್ಥಿವ ಶರೀರವನ್ನು ಸೇನಾ ವಾಹನದಲ್ಲಿ ಕುಶಾಲನಗರದ ಪ್ರಮುಖ ಬೀದಿ ಮೂಲಕ ಕೂಡಿಗೆ, ಹೆಬ್ಬಾಲೆ ಮಾರ್ಗವಾಗಿ ಆಲೂರು ಸಿದ್ದಾಪುರ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಆವರಣಕ್ಕೆ ತರಲಾಯಿತು. ಈ ವೇಳೆ ರಸ್ತೆಬದಿಗಳಲ್ಲಿ ಸಾಲುಗಟ್ಟಿ ನಿಂತಿದ್ದ ಸಾರ್ವಜನಿಕರು, ಶಾಲಾ ವಿದ್ಯಾರ್ಥಿಗಳು ಪಾರ್ಥಿವ ಶರೀರವಿದ್ದ ಸೇನಾ ವಾಹನಕ್ಕೆ ಪುಷ್ಪಾರ್ಚನೆ ಮಾಡಿ ಅಗಲಿದ ಯೋಧನಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ದಿವಿನ್ ವಿದ್ಯಾಭ್ಯಾಸ ಮಾಡಿದ್ದ ಆಲೂರು ಸಿದ್ದಾಪುರ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ರಸ್ತೆಯ 1 ಕಿ.ಮೀ ಉದ್ದಕ್ಕೂ ಸಾಲುಗಟ್ಟಿ ನಿಂತು ಶಾಲಾ ಬ್ಯಾಂಡ್ ಮೂಲಕ ಪಾರ್ಥಿವ ಶರೀರಕ್ಕೆ ಪುಷ್ಪಾರ್ಚನೆ ಮಾಡಿದರು.

ಕುಶಲ ತೋಪಿನ ಸಲಾಮಿ: ವೀರ ಯೋಧ ಪಿ.ದಿವಿನ್‌ಗೆ ಪೊಲೀಸ್ ಇಲಾಖೆ ಹಾಗೂ ಭಾರತೀಯ ಸೇನೆ ವತಿಯಿಂದ 21 ಸುತ್ತುಗಳ ಕುಶಲ ತೋಪು ಸಿಡಿಸುವ ಮೂಲಕ ರಾಷ್ಟ್ರೀಯ ವಂದನೆ ಸಲ್ಲಿಸಲಾಯಿತು. ಮಡಿಕೇರಿ ಜಿಲ್ಲಾ ಸಶಸ್ತ್ರ ದಳದ ಸಿಬ್ಬಂದಿ ಮತ್ತು ಬೆಂಗಳೂರಿನಿಂದ ಆಗಮಿಸಿದ್ದ ಆರ್ಮಿ ಸಪ್ಲೈ ಕೋರ್‌ನ ಗಾರ್ಡ್‌ಗಳು ಕುಶಲತೋಪು ಸಿಡಿಸಿ ಅಂತಿಮ ವಂದನೆ ಸಮರ್ಪಿಸಿದರು.

ತ್ರಿವರ್ಣ ಧ್ವಜ ಹಸ್ತಾಂತರ: ಹುತಾತ್ಮ ಯೋಧ ಪಳಂಗೋಟು ಪಿ.ದಿವಿನ್ ಅವರ ಪಾರ್ಥಿವ ಶರೀರದ ಮೇಲೆ ಶ್ರೀನಗರದ ಉದಂಪುರ್ ಸೇನಾ ನೆಲೆಯಲ್ಲಿ ಸೇನಾ ಗೌರವ ಸಲ್ಲಿಸಿ ರಾಷ್ಟ್ರೀಯ ಗೌರವವಾಗಿ ತ್ರಿವರ್ಣ ಧ್ವಜ ಹೊದಿಸಲಾಗಿತ್ತು. ತ್ರಿವರ್ಣ ಧ್ವಜವನ್ನು ಹೊದ್ದಿದ್ದ ಪೆಟ್ಟಿಗೆಯಿಂದ ಮೃತದೇಹವನ್ನು ಹೊರ ತೆಗೆದು ಚಿತೆಗಿಡುವ ಮುನ್ನ ಮರಾಠ ಲೈಟ್ ಇನ್‌ಫೆಂಟ್ರಿ ಸುಬೇದಾರ್ ಮೇಜರ್ ಮಹೇಶ್ ಜಾಧವ್ ಅವರು ತ್ರಿವರ್ಣ ಧ್ವಜ ತೆಗೆದು ಗೌರವಪೂರ್ವಕವಾಗಿ ಮೇಜರ್ ನಿಖಿಲ್ ಅವರಿಗೆ ಹಸ್ತಾಂತರಿಸಿದರು.

ನಂತರ ಮೇಜರ್ ನಿಖಿಲ್ ತ್ರಿವರ್ಣ ಧ್ವಜವನ್ನು ದಿವಿನ್ ಅವರ ತಾಯಿ ಜಯಾ ಅವರಿಗೆ ಹಸ್ತಾಂತರಿಸಿ ಸೆಲ್ಯೂಟ್ ಮೂಲಕ ಭಾರತೀಯ ಸೇನೆ ಪರವಾಗಿ ಅರ್ಪಿಸಿದರು. ಈ ಸಂದರ್ಭ ಮರಾಠ ಲೈಟ್ ಇನ್‌ಫೆಂಟ್ರಿ ರೆಜಿಮೆಂಟ್ ಯೂನಿಟ್‌ನ ಯೋಧರು ಕೂಡ ಭಾವುಕರಾಗಿ ಕಣ್ಣೀರಾದರು. ಆಲೂರು ಸಿದ್ದಾಪುರ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಸಹಸ್ರಾರು ಜನರು ಅಂತಿಮ ದರ್ಶನದಲ್ಲಿ ಪಾಲ್ಗೊಂಡು ಹುತಾತ್ಮ ಯೋಧ ದಿವಿನ್‌ಗೆ ಅಂತಿಮ ಗೌರವ ಸಲ್ಲಿಸಿದರು.

ಸಮಾನತೆ ದೃಷ್ಟಿಯಿಂದ ಯಾವುದೇ ಸಮುದಾಯದ ಸಾಂಪ್ರದಾಯಿಕ ಉಡುಗೆ ಬೇಡ ಎಂಬ ನಿರ್ಧಾರ

ಮೃತ್ಯುಂಜಯ ದೇವಸ್ಥಾನ ಸ್ವಯಂ ಸೇವಕ ಕಟ್ಟೆಮನೆ ಸೋನಾ



ಸುದ್ದಿಗೋಷ್ಠಿಯಲ್ಲಿ ಮೃತ್ಯುಂಜಯ ದೇವಸ್ಥಾನದ ಸ್ವಯಂ ಸೇವಕರಾದ ಕಟ್ಟೆಮನೆ ಸೋನಾ ಮಾತನಾಡಿದರು.

ಮಡಿಕೇರಿ, ಜ.1-ತಾರತಮ್ಯತೆಗೆ ಎಡೆ ಇಲ್ಲದೆ, ಎಲ್ಲಾ ಜಾತಿ, ಜನಾಂಗಗಳು ಸರ್ವ ಸಮಾನತೆಯಿಂದ ದೇವರ ಕಾರ್ಯಗಳಲ್ಲಿ ಒಂದಾಗಿ ಬೆರೆಯಬೇಕೆನ್ನುವ ಉದಾತ್ತ ಚಿಂತನೆಗಳಡಿ ಕಟ್ಟೆಮಾಡಿನ ಮೃತ್ಯುಂಜಯ ದೇವಸ್ಥಾನದಲ್ಲಿ ಯಾವುದೇ ಸಮುದಾಯದ ಸಾಂಪ್ರದಾಯಿಕ ಆಚರಣೆ ಬೇಡ ಎನ್ನುವ ನಿಯಮವನ್ನು ಮಾಡಲಾಗಿದೆ. ಇದನ್ನು ಜಿಲ್ಲಾಡಳಿತ ಗೌರವಿಸಲಿದೆ ಎನ್ನುವ ವಿಶ್ವಾಸವನ್ನು ಗ್ರಾಮಸ್ಥರು ಹಾಗೂ ದೇವಸ್ಥಾನದ ಸ್ವಯಂ ಸೇವಕರಾದ ಕಟ್ಟೆಮನೆ ಸೋನಾ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಟ್ಟೆಮಾಡು ಗ್ರಾಮ ವ್ಯಾಪ್ತಿಯಲ್ಲಿ ಅಂದಾಜು ಶೇ.30ರಷ್ಟು ಗೌಡ ಸಮುದಾಯ, ಶೇ.15ರಿಂದ 20ರಷ್ಟು ಕೊಡವ ಸಮುದಾಯ, ಶೇ.50ರಷ್ಟು ವಿವಿಧ ಜನಾಂಗದವರಿದ್ದಾರೆ. ಇವರೆಲ್ಲರೂ ದೇವಸ್ಥಾನದಲ್ಲಿ ಸರ್ವ ಸಮಾನರಾಗಿ ತೊಡಗಿಸಿಕೊಳ್ಳಬೇಕೆನ್ನುವ ಚಿಂತನೆಯಿಂದ ದೇವಸ್ಥಾನದಲ್ಲಿ ಯಾವುದೇ ಸಮುದಾಯದ ಸಾಂಪ್ರದಾಯಿಕ ಉಡುಪು, ಆಚರಣೆ ಬೇಡವೆನ್ನುವ ನಿಯಮವನ್ನು ಗ್ರಾಮಸ್ಥರೆಲ್ಲರ ಸಮ್ಮತಿಯೊಂದಿಗೆ ರಚಿಸಲಾಗಿತ್ತು. ಅದರಂತೆ ಕಳೆದ ಒಂದು ವರ್ಷದಿಂದ ಗ್ರಾಮದ ಎಲ್ಲಾ ಸಮುದಾಯದವರು ನಡೆದುಕೊಂಡು ಬಂದಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಕಟ್ಟೆಮಾಡು ಗ್ರಾಮದ ವಿವಿಧ ಜನಾಂಗ ಹಾಗೂ ಕುಟುಂಬಗಳ ಪ್ರತಿನಿಧಿಗಳಿಗೆ ಕೈಜೋಡು ದೇವಸ್ಥಾನ ಆಡಳಿತ ಮಂಡಳಿಯಲ್ಲಿ ಅವಕಾಶ ನೀಡಲಾಗಿದೆ. ಕೊಡವ, ಗೌಡ ಜನಾಂಗವನ್ನು ಒಳಗೊಂಡಂತೆ 10ಕ್ಕೂ ಹೆಚ್ಚು ವಿವಿಧ ಜನಾಂಗಗಳ ಪ್ರತಿನಿಧಿಗಳು ಆಡಳಿತ ಮಂಡಳಿಯಲ್ಲಿದ್ದಾರೆ. ಎಲ್ಲರೂ ದೇವತಾ ಕಾರ್ಯಗಳಲ್ಲಿ ಬಿಳಿ ಪಂಚೆ, ಶಾಲು ಧರಿಸಿ ಪಾಲ್ಗೊಳ್ಳುತ್ತಿದ್ದಾರೆ ಎಂದು ಸ್ಪಷ್ಟಪಡಿಸಿದರು.

ದೌರ್ಜನ್ಯ ಆರೋಪ ಸುಳ್ಳು: ಮೃತ್ಯುಂಜಯ ದೇವಾಲಯ ವಾರ್ಷಿಕೋತ್ಸವದಲ್ಲಿ ಉಂಟಾದ ವಿವಾದದ ವೇಳೆ ಮಹಿಳೆಯರು, ಕೊಡವರ ಮೇಲೆ ದೌರ್ಜನ್ಯ ನಡೆದಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಸುದ್ದಿಗಳೆಲ್ಲವು ಸುಳ್ಳು. ಅಂತಹ ಯಾವುದೇ ಘಟನೆ ನಡೆದಿಲ್ಲವೆಂದು ಕಟ್ಟೆಮನೆ ಸೋನಾ ತಿಳಿಸಿದರು.

ಉತ್ಸವದ ಸಂಜೆ ದೇವರ ಜಳಕಕ್ಕೆ ತೆರಳುವ ಹಂತದಲ್ಲಿ ಮೂರು-ನಾಲ್ಕು ಜೀಪ್‌ಗಳಲ್ಲಿ ಸಾಂಪ್ರದಾಯಿಕ ಉಡುಪು ಧರಿಸಿ ಬಂದವರಿಗೆ, ದೇವಸ್ಥಾನ ನಿಯಮಗಳ ಬಗ್ಗೆ ತಿಳಿಸಲಾಗಿತ್ತು. ಈ ವೇಳೆ ಉಂಟಾದ ವಿವಾದ ನಿಜಕ್ಕೂ ಬೇಸರ ಉಂಟು ಮಾಡಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮೃತ್ಯುಂಜಯ ದೇವಸ್ಥಾನ ಸಮಿತಿ ಸದಸ್ಯ ಹೆಚ್.ಎಸ್.ಪುರುಷೋತ್ತಮ, ದೇವಸ್ಥಾನದ ಸ್ವಯಂ ಸೇವಕರಾದ ರೋಷನ್ ಕಟ್ಟೆಮನೆ, ಗ್ರಾಮಸ್ಥರಾದ ಹೆಚ್.ಸಿ.ರಾಮಚಂದ್ರ, ಹೆಚ್.ವಿ.ಗನು, ಹೆಚ್.ಎಂ.ಹರೀಶ್ ಉಪಸ್ಥಿತರಿದ್ದರು.

ಜ.7ರವರೆಗೆ ನಿಷೇಧಾಜ್ಞೆ ಮುಂದುವರಿಕೆ

ಮಡಿಕೇರಿ, ಜ.1-ಕಟ್ಟೆಮಾಡು ಮೃತ್ಯುಂಜಯ ದೇವಸ್ಥಾನ ವ್ಯಾಪ್ತಿ ಜಾರಿಗೊಳಿಸಿರುವ ನಿಷೇಧಾಜ್ಞೆಯನ್ನು ಜ.7ರ ಬೆಳಗ್ಗೆ 6 ಗಂಟೆವರೆಗೆ ಮುಂದುವರೆಸಿ ಉಪವಿಭಾಗಾಧಿಕಾರಿ ವಿನಾಯಕ್ ನರ್ವಾಡೆ ಆದೇಶಿಸಿದ್ದಾರೆ.

ದೇವಸ್ಥಾನ ವಾರ್ಷಿಕೋತ್ಸವ ಸಂದರ್ಭ ವಸ್ತ್ರಸಂಹಿತೆ ಸಂಬಂಧ ಉಂಟಾಗಿರುವ ವಿವಾದ ಕುರಿತು ಆರಕ್ಷಕ ಅಧೀಕ್ಷಕರ ಕೋರಿಕೆ ಪರಿಗಣಿಸಿ, ಜ.2ರ ಬೆಳಗ್ಗಿನಿಂದ ಜ.7ರ ಬೆಳಗ್ಗೆ 6 ಗಂಟೆವರೆಗೆ ದೇವಸ್ಥಾನದ 5 ಕಿ.ಮೀ. ವ್ಯಾಪ್ತಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಅಮ್ಮವ್ವ ನಿಧನ



ನಾಪೋಕ್ಲು, ಜ.1-ಸಮೀಪದ ಪಾಲೂರು ಗ್ರಾಮದ ಪುದಿಯನೆರವನ ದೇವಪ್ಪ ಅವರ ಪತ್ನಿ ಅಮ್ಮವ್ವ (70) ಬುಧವಾರ ನಿಧನರಾದರು.

ಮೃತರು ಪತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಸ್ವಗೃಹ ಆವರಣದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೃತ್ಯುಂಜಯ ದೇವಾಲಯ ವಾರ್ಷಿಕೋತ್ಸವದಲ್ಲಿ ವಸ್ತ್ರಸಂಹಿತೆ ಸಂಬಂಧ ವಿವಾದ ಹಿನ್ನೆಲೆ

ಚೇರಂಬಾಣೆಯಲ್ಲಿ ಪ್ರತಿಭಟನಾ ಮೆರವಣಿಗೆ



ಬೇಂಗ್‌ನಾಡ್ ಕೊಡವ ಸಮಾಜದ ಪ್ರಮುಖರು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮಡಿಕೇರಿ, ಜ.1-ಕಟ್ಟೆಮಾಡು ಶ್ರೀ ಮಹಾ ಮೃತ್ಯುಂಜಯ ದೇವಾಲಯ ವಾರ್ಷಿಕೋತ್ಸವ ವೇಳೆ ವಸ್ತ್ರಸಂಹಿತೆ ಸಂಬಂಧ ವಿವಾದ ಉಂಟು ಮಾಡಲಾಗಿದೆ ಎಂದು ಬೇಂಗ್‌ನಾಡ್ ಕೊಡವ ಸಮಾಜದ ಪ್ರಮುಖರು ಹಾಗೂ ಸದಸ್ಯರು ಚೇರಂಬಾಣೆಯಲ್ಲಿ ಪ್ರತಿಭಟನೆ ನಡೆಸಿದರು.

ಚೇರಂಬಾಣೆಯಲ್ಲಿ ಒಂದು ಗಂಟೆ ಕಾಲ ಸ್ವಯಂ ಘೋಷಿತ ಬಂದ್ ಆಚರಿಸಿ, ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ನಂತರ ಮಾನವ ಸರಪಳಿ ರಚಿಸಿದ ಪ್ರತಿಭಟನಾಕಾರರು, ವಿವಾದ ಕುರಿತು ಅಸಮಾಧಾನ ವ್ಯಕ್ತಪಡಿಸಿದರು.

ಕೊಡವ ಸಾಹಿತ್ಯ ಅಕಾಡೆಮಿ ಸದಸ್ಯ ನಾಪಂಡ ಗಣೇಶ್, ಕೊಡವ ಸಮಾಜದ ಅಧ್ಯಕ್ಷ ಬಾಚರಣಿಯಂಡ ಗಣಪತಿ, ಉಪಾಧ್ಯಕ್ಷ ಕೇಕಡ ಮೊಣ್ಣಪ್ಪ ಹಾಗೂ ಪ್ರಮುಖರಾದ ಮಂದಪಂಡ ಮನೋಜ್ ಕಟ್ಟೆಮಾಡು ಮಾತನಾಡಿ, ಮೃತ್ಯುಂಜಯ ದೇವಾಲಯ ವಾರ್ಷಿಕೋತ್ಸವ ನಡೆಯುತ್ತಿರುವ ಸಂದರ್ಭ ವಸ್ತ್ರಸಂಹಿತೆ ಸಂಬಂಧ ವಿವಾದ ದೃಷ್ಟಿಸಿ, ದೌರ್ಜನ್ಯ ನಡೆಸಲಾಗಿದೆ ಎಂದು ಆರೋಪಿಸಿದರು. ದೇವಾಲಯದಲ್ಲಿ ನಡೆದ ವಿವಾದ ಖಂಡನೀಯವೆಂದರು.

ಕೊಡವ ಸಮಾಜ ರಿಕ್ರಿಯೇಷನ್ ಮತ್ತು ಸ್ಪೋರ್ಟ್ಸ್ ಅಸೋಸಿಯೇಷನ್ ಅಧ್ಯಕ್ಷ ಪಟ್ಟಮಾಡ ಕುಶಾಲಪ್ಪ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಾಚರಣಿಯಂಡ ಸುಮನ್, ಬಡ್ಡಿರ ನಂದಕುಮಾರ್, ಕೊಟ್ಟುಕತ್ತಿರ ಬಾಬಿ ಪಳಂಗಪ್ಪ, ಮಾಜಿ ಸೈನಿಕರ ಕಲ್ಯಾಣ ಸಂಘದ ಅಧ್ಯಕ್ಷ ಅಯ್ಯಂಡ ಅಯ್ಯಪ್ಪ, ಕುಂಚೆಟ್ಟಿರ ಪೆಮ್ಮಯ್ಯ, ಪೂವಮ್ಮ ರಮೇಶ್, ಸದಸ್ಯರು, ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮಲೆತಿರಿಕೆ ಬೆಟ್ಟದಲ್ಲಿ ಅಯ್ಯಪ್ಪಸ್ವಾಮಿ ಉತ್ಸವ



ಮಲೆತಿರಿಕೆ ಬೆಟ್ಟದಲ್ಲಿ ಅಯ್ಯಪ್ಪಸ್ವಾಮಿಗೆ ಮಾಲಾಧಾರಿಗಳು ಲಕ್ಷಾರ್ಚನೆ ನೆರವೇರಿಸಿದರು.

ವಿರಾಜಪೇಟೆ, ಜ.1-ಪ್ರತಿವರ್ಷದಂತೆ ಈ ಬಾರಿಯೂ ಪಟ್ಟಣದ ಮಲೆತಿರಿಕೆ ಬೆಟ್ಟದ ಶ್ರೀ ಅಯ್ಯಪ್ಪಸ್ವಾಮಿ ಉತ್ಸವವನ್ನು ಮೂರು ದಿನ ವಿಜೃಂಭಣೆಯಿಂದ ಆಚರಿಸಲಾಯಿತು.

ಡಿ.25ರಂದು ಕ್ಷೇತ್ರ ಪಾಲಕ ಗುಳಿಗನ ಪೂಜೆಯೊಂದಿಗೆ ಉತ್ಸವ ಪ್ರಾರಂಭಗೊಂಡು ಡಿ.26ರಂದು ಧ್ವಜಾರೋಹಣ, ಮಂಡಲ ಪೂಜೆ, 30 ಮತ್ತು 31ರಂದು ವಿಶೇಷ ಪೂಜೆ ಸಲ್ಲಿಸಲಾಯಿತು. ಬುಧವಾರ ಮುಂಜಾನೆ ಗಣಪತಿ ಹೋಮ, ಲಕ್ಷ್ಮೀ ಮತ್ತು ಸರಸ್ವತಿ ಪೂಜೆ, ನಂತರ ತುಲಾಭಾರ, ಅಯ್ಯಪ್ಪ ಮಾಲಾಧಾರಿಗಳಿಂದ ಲಕ್ಷಾರ್ಚನೆ ಮತ್ತು ಭಜನೆ ನಡೆಯಿತು. ಇದೇ ವೇಳೆ ಪ್ರಸಾದ ವಿನಿಯೋಗ, ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ: ಇಬ್ಬರು ಸಾವು, ಓರ್ವನಿಗೆ ತೀವ್ರ ಗಾಯ

ಗುಂಡ್ಲುಪೇಟೆ: ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಕಾರಿನ ಮೇಲೆ ವಿದ್ಯುತ್ ಕಂಬ ಬಿದ್ದು ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ಮತ್ತೋರ್ವ ಆಸ್ಪತ್ರೆಗೆ ದಾಖಲಾಗಿರುವ ಘಟನೆ ತಾಲೂಕಿನ ಕಂದೇಗಾಲ ಸಮೀಪ ಬುಧವಾರ ಮುಂಜಾನೆ ನಡೆದಿದೆ.

ಬೊಮ್ಮಲಾಪುರ ಸೆಸ್ಕ್ ಉಪಕೇಂದ್ರದ ಲೈನ್‌ಮನ್ ಪ್ರತಾಪ್ ಕುಮಾರ್(28), ಕೊಡಸೋಗೆ ಗ್ರಾಮದ ಪುಟ್ಟಯ್ಯ ಅವರ ಮಗ ಕೊಂಗಳ್ಳಯ್ಯ(45) ಸ್ಥಳದಲ್ಲೇ ಮೃತಪಟ್ಟಿದ್ದು, ಗಂಭೀರವಾಗಿ ಗಾಯಗೊಂಡಿರುವ ಅಭಿಷೇಕ್‌ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೂವರು ಕಾರಿನಲ್ಲಿ ಬುಧವಾರ ಮುಂಜಾನೆ 3 ಗಂಟೆಯಲ್ಲಿ ಪಟ್ಟಣದಿಂದ ಕೊಡಸೋಗೆಯತ್ತ ಹೋಗುಗುತ್ತಿದ್ದರು. ಈ ವೇಳೆ ಕುಂಬಾರ ಗುಂಡಿ ಹತ್ತಿರ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ ಹೊಡೆದಿದೆ. ಪರಿಣಾಮ ಕಾರಿನ ಮೇಲೆ ವಿದ್ಯುತ್ ಕಂಬ ಬಿದ್ದು ಕುಮಾರ್ ಹಾಗೂ ಕೊಂಗಳ್ಳಯ್ಯ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ತೀವ್ರವಾಗಿ ಗಾಯಗೊಂಡ ಅಭಿಷೇಕ್‌ನನ್ನು ಚಾಮರಾಜನಗರ ಸಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಾರಿನ ಡಿಕ್ಕಿಯ ಶಬ್ದ ಕೇಳಿದ ಪಕ್ಕದ ಮನೆ ನಿವಾಸಿ ರಘು ಸ್ಥಳಕ್ಕೆ ಬಂದು ನೋಡಿ, ತಕ್ಷಣ ಹೊಯ್ಸಳ ಪೊಲೀಸರಿಗೆ ತಿಳಿಸಿದ್ದಾರೆ. ನಂತರ ಸ್ಥಳಕ್ಕೆ ಆಗಮಿಸಿದ ಪೊಲೀಸರು ಗಾಯಾಳುವನ್ನು ಆಸ್ಪತ್ರೆಗೆ ಸಾಗಿಸಿದರು. ಕಾರು ಸಂಪೂರ್ಣವಾಗಿ ಜಖಂಗೊಂಡಿದೆ. ಈ ಸಂಬಂಧ ತೆರಕಣಾಂಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಂದೇಗಾಲ ಸಮೀಪ ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ ಹೊಡೆದು ಜಖಂ ಆಗಿರುವುದು.

ಕರ್ತವ್ಯಲೋಪ: ಮೂವರು ಪೇದೆ ಅಮಾನತು

ಚಾಮರಾಜನಗರ, ಜ.1-ಇಲ್ಲಿನ ಪಟ್ಟಣ ಪೊಲೀಸ್ ಠಾಣೆಯ ಮೂವರು ಪೊಲೀಸ್ ಪೇದೆಗಳನ್ನು ಕರ್ತವ್ಯಲೋಪ ಹಿನ್ನೆಲೆಯಲ್ಲಿ ಅಮಾನತುಗೊಳಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ. ಟಿ.ಕವಿತಾ ಆದೇಶದ ಹೊರಡಿಸಿದ್ದಾರೆ.

ಪಟ್ಟಣ ಠಾಣೆ ಪೇದೆಗಳಾದ ಚಂದ್ರೇಗೌಡ, ಮಂಜು ಹಾಗೂ ಚಾಲಕ ಬಸವರಾಜು ಅವರನ್ನು ಅಮಾನತುಗೊಳಿಸಲಾಗಿದೆ. ಈ ಮೂವರು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವಲ್ಲಿ ನಿರ್ಲಕ್ಷ್ಯ ಹಾಗೂ ವಿಫಲವಾಗಿದ್ದಾರೆ ಎಂಬ ಕಾರಣ ನೀಡಿ ಅಮಾನುತು ಪಡಿಸಲಾಗಿದೆ.

ವಿಶೇಷ ಗುಪ್ತ ಮಾಹಿತಿದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಪೇದೆ ಚಂದ್ರೇಗೌಡ ಕ್ಲಬ್‌ವೊಂದರಲ್ಲಿ ಜೂಜಾಟ ನಡೆಯುತ್ತಿರುವ ಬಗ್ಗೆ ಮೇಲಧಿಕಾರಿಗಳಿಗೆ ಮಾಹಿತಿ ನೀಡಿರಲಿಲ್ಲ. ಚಾಲಕ ಬಸವರಾಜು ಸಹ ಇದಕ್ಕೆ ಶಾಮೀಲಾಗಿದ್ದರು. ಮತ್ತೊಬ್ಬ ಮುಖ್ಯ ಪೇದೆ ಮಂಜು ತನಿಖಾ ಸಹಾಯಕ ಬರಹಗಾರರಾಗಿದ್ದು, 'ಎಂ' ಸ್ಯಾಂಡ್ ಸಾಗಿಸುತ್ತಿದ್ದ ಮೂರು ಲಾರಿಗಳ ತಪಾಸಣೆ ವೇಳೆ ಕರ್ತವ್ಯಲೋಪ ಎಸಗಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮಾನತು ಮಾಡಿದ್ದಾರೆ.

ಹೊಸ ವರ್ಷಾಚರಣೆ: ವಿವಿಧ ದೇವಸ್ಥಾನಗಳಲ್ಲಿ ಪೂಜೆ

ಮಹದೇಶ್ವರಬೆಟ್ಟ, ಬಿಳಿಗಿರಿರಂಗನಾಥಬೆಟ್ಟ, ಗೋಪಾಲಸ್ವಾಮಿಬೆಟ್ಟಕ್ಕೆ ಹೆಚ್ಚಿನ ಭಕ್ತರು

ಚಾಮರಾಜನಗರ, ಜ.1-ಜಿಲ್ಲಾದ್ಯಂತ ನೂತನ ವರ್ಷವನ್ನು ಸಂಭ್ರಮ, ಸಡಗರ ಹಾಗೂ ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸುವ ಮೂಲಕ ಬರ ಮಾಡಿಕೊಳ್ಳಲಾಯಿತು.

ಮಂಗಳವಾರ ರಾತ್ರಿ 12 ಗಂಟೆಯಾಗುತ್ತಿದ್ದಂತೆ ಜನರು ಹೊಸ ವರ್ಷದ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಕೆಲವರು ಸಿಹಿ ಹಂಚಿ ಮತ್ತು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಮಹಿಳೆಯರು ಮತ್ತು ಯುವತಿಯರು ಮನೆಗಳ ಮುಂದೆ ಬಣ್ಣ ಬಣ್ಣದ ರಂಗೋಲಿ ಬಿಡಿಸಿ, ಹೊಸ ವರ್ಷ ಸ್ವಾಗತಿಸಿದರು.

ಹೊಸ ವರ್ಷದ ಮೊದಲ ದಿನವಾದ ಬುಧವಾರ ಬೆಳಗ್ಗೆಯಿಂದಲೇ ಜನರು ಹೊಸ ಬಟ್ಟೆ ತೊಟ್ಟು ಸಮೀಪದ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿದರು. ಕೆಲವರು ಕುಟುಂಬ ಸಮೇತ ಮಲೆಮಹದೇಶ್ವರಬೆಟ್ಟ, ಬಿಳಿಗಿರಿರಂಗನಾಥಸ್ವಾಮಿ ಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಪಾರ್ವತಿ ಬೆಟ್ಟ, ಕುರುಬನಕಟ್ಟೆ ಕ್ಷೇತ್ರ, ಶಿವನಸಮುದ್ರದ ಸಮೂಹ ದೇವಾಲಯಗಳಿಗೆ ತೆರಳಿ ದೇವರ ದರ್ಶನ ಪಡೆದರು.

ಕ್ರೈಸ್ತರು ಚರ್ಚ್‌ಗಳಲ್ಲಿ ಹೊಸವರ್ಷ ಆಚರಣೆ ಪ್ರಯುಕ್ತ ಪ್ರಾರ್ಥನೆ ಸಲ್ಲಿಸಿದರು. ಯುವ ಜನರು ಜಿಲ್ಲೆಯ ಪ್ರವಾಸಿ ತಾಣಗಳಾದ ಬಂಡೀಪುರ, ಶಿವನಸಮುದ್ರ, ಹೊಗೆನಕಲ್ ಫಾಲ್ಸ್ ಸೇರಿದಂತೆ ವಿವಿಧೆಡೆ ನೂತನ ವರ್ಷವನ್ನು ಸಂಭ್ರಮದಿಂದ ಸ್ವಾಗತಿಸಿದರು.



ಹೊಸ ವರ್ಷ ಪ್ರಯುಕ್ತ ಬುಧವಾರ ಗುಂಡ್ಲುಪೇಟೆಯ ಹಿಮವದ್ ಗೋಪಾಲಸ್ವಾಮಿಬೆಟ್ಟಕ್ಕೆ ತೆರಳಲು ಭಕ್ತರು ಸಾಲುಗಟ್ಟಿ ನಿಂತಿರುವುದು.

ನಗರದ ಜನರು ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಗ್ರಾಮೀಣ ಜನರು ಯಡಪುರ ಸಮೀಪದ ಮಹದೇಶ್ವರಸ್ವಾಮಿ ದೇವಸ್ಥಾನ, ಹರದನಹಳ್ಳಿ ದಿವ್ಯಲಿಂಗೇಶ್ವರ, ಸಂತೇಮರಹಳ್ಳಿಯ ಮಹದೇಶ್ವರ ದೇವಾಲಯ, ಮಂಗಲ ಗ್ರಾಮದ ಶಂಕರೇಶ್ವರಸ್ವಾಮಿ ಬೆಟ್ಟ, ಕೂಡ್ಲೂರು ಗ್ರಾಮದ ಮಂಟೇಸ್ವಾಮಿ ದೇವಸ್ಥಾನ, ಕುದೇರು ಗ್ರಾಮದ ಮಲ್ಲಿಕಾರ್ಜುನಸ್ವಾಮಿ, ಚಂದಕವಾಡಿಯ ಲಕ್ಷ್ಮೀದೇವಿ ದೇಗುಲಗಳಿಗೆ ತೆರಳಿ ಪೂಜೆ ಸಲ್ಲಿಸಿದರು.

ಗುಂಡ್ಲುಪೇಟೆ: ಹೊಸ ವರ್ಷದ ಮೊದಲ ದಿನವಾದ ಬುಧವಾರ ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಪಾರ್ವತಿ ಬೆಟ್ಟ, ಹಲುಗಿನ ಮುರಡಿ ವೆಂಕಟರಮಣಸ್ವಾಮಿ ಬೆಟ್ಟ ಸೇರಿದಂತೆ ವಿವಿಧ ದೇವಸ್ಥಾನಗಳಿಗೆ ತೆರಳಿದ ಭಕ್ತರು ಪೂಜೆ ಸಲ್ಲಿಸುವುದರೊಂದಿಗೆ ನೂತನ ವರ್ಷ ಸ್ವಾಗತಿಸಿದರು.

ಮಾದಪ್ಪನ ಬೆಟ್ಟಕ್ಕೆ ಭಕ್ತರ ದಂಡು: ಜಿಲ್ಲೆಯ ಪ್ರಸಿದ್ಧ ಯಾತ್ರಾ ಕ್ಷೇತ್ರ ಮಹದೇಶ್ವರಬೆಟ್ಟಕ್ಕೆ ಲಕ್ಷಾಂತರ ಭಕ್ತರು ತೆರಳಿ ಮಾದಪ್ಪನ ದರ್ಶನ ಪಡೆದು, ಪೂಜೆ ಸಲ್ಲಿಸಿದರು. ನೂತನ ವರ್ಷದ ಮೊದಲ ದಿನ ಬೆಟ್ಟಕ್ಕೆ ಜಿಲ್ಲೆಯಿಂದ ಮಾತ್ರವಲ್ಲದೇ, ಮಂಡ್ಯ, ಮೈಸೂರು, ಬೆಂಗಳೂರು, ರಾಮನಗರ, ಚನ್ನಪಟ್ಟಣ ಸೇರಿದಂತೆ ವಿವಿಧ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದ ಲಕ್ಷಾಂತರ ಭಕ್ತರು ಬೆಟ್ಟಕ್ಕೆ ಆಗಮಿಸಿದ್ದರು.

ಬಿಗಿ ಬಂದೋಬಸ್ತ್: ದೇವಾಲಯ ಸುತ್ತಮುತ್ತ ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಜೊತೆಗೆ ಕೊಳ್ಳೇಗಾಲ ಹಾಗೂ ತಮಿಳುನಾಡಿಗೆ ತೆರಳುವ ರಸ್ತೆಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗಿತ್ತು.

ಜಿಲ್ಲೆಯ ಮತ್ತೊಂದು ಪ್ರಸಿದ್ಧ ಯಾತ್ರಸ್ಥಳ ಬಿಳಿಗಿರಿರಂಗನಬೆಟ್ಟಕ್ಕೆ ಬುಧವಾರ ಹೆಚ್ಚು ಪ್ರವಾಸಿಗರು ಆಗಮಿಸಿದ್ದರು. ವರ್ಷದ ಮೊದಲ ದಿನ ರಂಗಪ್ಪನ ಬೆಟ್ಟದಲ್ಲಿ ಭಕ್ತರ ಸಂಖ್ಯೆ ನಿರೀಕ್ಷೆಗೂ ಮೀರಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.

ವಿದ್ಯುತ್ ಸ್ಪರ್ಶದಿಂದ ಕಬ್ಬಿನ ಗದ್ದೆಗೆ ಬೆಂಕಿ



ಯಳಂದೂರು ತಾಲೂಕಿನ ಮದ್ದೂರು ಕಬ್ಬಿನ ಗದ್ದೆಗೆ ಬೆಂಕಿ ಬಿದ್ದಿರುವುದು.

ಯಳಂದೂರು, ಜ.1-ತಾಲೂಕಿನ ಮದ್ದೂರು ಗ್ರಾಮದಲ್ಲಿ ಮಂಗಳವಾರ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಕಬ್ಬಿನ ಗದ್ದೆಗೆ ಬೆಂಕಿ ಬಿದ್ದಿದೆ.

ಗ್ರಾಮದ ಚಿಕ್ಕನಂಜಮ್ಮ, ಪುಟ್ಟನಂಜಮ್ಮ, ನಂಜುಂಡಸ್ವಾಮಿ, ಮಹದೇವಯ್ಯ, ನಾರಾಯಣಸ್ವಾಮಿ ಅವರಿಗೆ ಸೇರಿದ ಗದ್ದೆಗೆ ಬೆಂಕಿ ಬಿದ್ದಿದ್ದು, ಸುಮಾರು 5 ಎಕರೆ ಕಬ್ಬು ಸುಟ್ಟು ಕರಕಲಾಗಿದೆ. ಅಕ್ಕಪಕ್ಕದ ರೈತರು ಕೂಡಲೇ ಅಗ್ನಿಶಾಮಕ ದಳದಕ್ಕೆ ವಿಷಯ ತಿಳಿಸಿದ್ದರಿಂದ ತಕ್ಷಣ ಸ್ಥಳಕ್ಕೆ ಬಂದ ಸಿಬ್ಬಂದಿ ಬೆಂಕಿ ನಂದಿಸಿ, ಹೆಚ್ಚಿನ ಅನಾಹುತ ತಪ್ಪಿಸಿದರು.

ಈ ಭಾಗದಲ್ಲಿ ಮೂರು ವರ್ಷಗಳಿಂದಲೂ ಕಬ್ಬಿನ ಗದ್ದೆಗೆ ಬೆಂಕಿ ಬೀಳುತ್ತಿದ್ದು, ಜೋತು ಬಿದ್ದಿರುವ ವಿದ್ಯುತ್ ತಂತಿಯಿಂದ ಗದ್ದೆಗೆ ಬೆಂಕಿ ಬಿದ್ದಿದೆ. ಜೋತು ಬಿದ್ದಿರುವ ತಂತಿಯನ್ನು ಸರಿಪಡಿಸುವಂತೆ ಹಲವು ಬಾರಿ ಸೆಸ್ಕ್ ಅಧಿಕಾರಿಗಳಿಗೆ ದೂರು ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ವಹಿಸಿಲ್ಲ ಎಂದು ರೈತರು ಆರೋಪಿಸಿದರು.

ಕೂಸಿನ ಮನೆ ತರಬೇತಿ ಕೇಂದ್ರಕ್ಕೆ ಜಿಪಂ ಸಿಇಓ ಭೇಟಿ

ಚಾಮರಾಜನಗರ, ಜ.1-ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್ ಬುಧವಾರ ತಾಲೂಕು ಪಂಚಾಯಿತಿಯ ಸಾಮರ್ಥ್ಯ ಸೌಧದ ಕೂಸಿನ ಮನೆ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಕೂಸಿನ ಮನೆಯಲ್ಲಿ ಆರೈಕೆದಾರರಾಗಿ (ಕೇರ್ ಟೇಕರ್ಸ್) ಕಾರ್ಯನಿರ್ವಹಿಸಲು ಆಯ್ಕೆಯಾಗಿರುವವರಿಗೆ ನೀಡಲಾಗುತ್ತಿರುವ ತರಬೇತಿ ಬಗ್ಗೆ ಮಹಿತಿ ಪಡೆದರು. ನಂತರ ಕೂಸಿನ ಮನೆಯಲ್ಲಿ ನಿರ್ವಹಣೆ ಮಾಡಬೇಕಿರುವ ಕರ್ತವ್ಯಗಳ ಬಗ್ಗೆ ವಿವರಿಸಿದರು.

ತರಬೇತಿ ಅವಧಿಯಲ್ಲಿ ನೀಡಲಾಗುವ ವಿಷಯಗಳನ್ನು ಮನದಟ್ಟು ಮಾಡಿಕೊಂಡು ಕಾರ್ಯಕ್ಷೇತ್ರದಲ್ಲಿ ಸಮರ್ಪಕವಾಗಿ ಜವಾಬ್ದಾರಿಯಿಂದ ನಿರ್ವಹಿಸಬೇಕು. ವಹಿಸಲಾದ ಕಾರ್ಯಗಳನ್ನು ಯಶಸ್ವಿಯಾಗಿ ಪೂರೈಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಪ್ರಕಾಶ್ ಕುಮಾರ್, ಸಹಾಯಕ ಲೆಕ್ಕಾಧಿಕಾರಿ ಪ್ರಭುಸ್ವಾಮಿ, ತರಬೇತಿ ಮಾಸ್ಟರ್ ಟ್ರೈನರ್ ಹಾಗೂ ಅಂಗನವಾಡಿ ಮೇಲ್ವಿಚಾರಕರಾದ ಕಲಾವತಿ, ಲಕ್ಷ್ಮಿ ಇನ್ನಿತರರಿದ್ದರು.



ಚಾಮರಾಜನಗರ ತಾಪಂ ಸಾಮರ್ಥ್ಯ ಸೌಧದ ಕೂಸಿನ ಮನೆ ತರಬೇತಿ ಕೇಂದ್ರಕ್ಕೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್ ಬುಧವಾರ ಭೇಟಿ ನೀಡಿ ಪರಿಶೀಲಿಸಿದರು.

ವಿದ್ಯುತ್ ಶಾರ್ಟ್ ಸರ್ಕ್ಯೂಟ್: ಮನೆ ಭಸ್ಮ



ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಚನ್ನಿಪುರಮೋಳೆಯಲ್ಲಿ ಮನೆ ಸುಟ್ಟುಹೋಗಿರುವುದು.

ಚಾಮರಾಜನಗರ, ಜ.1-ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಮನೆಯೊಂದು ಸುಟ್ಟು ಹೋಗಿರುವ ಘಟನೆ ನಗರಸಭೆ 24ನೇ ವಾರ್ಡ್‌ನ ಚನ್ನಿಪುರಮೋಳೆಯಲ್ಲಿ ಬುಧವಾರ ಸಂಜೆ ನಡೆದಿದೆ.

ವಾರ್ಡ್ ನಿವಾಸಿ ಭಾಗ್ಯ ಅವರ ಮನೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಸುಟ್ಟು ಹೋಗಿದೆ. ಭಾಗ್ಯ ಹೂವಿನ ವ್ಯಾಪಾರಿಯಾಗಿದ್ದು, ಹೂ ಖರೀದಿಸಲು ಸಂಜೆ ಹೊರಗಡೆ ಹೋಗಿದ್ದರು. ಈ ವೇಳೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡು ಮನೆಯೊಳಗಿದ್ದ ಟಿವಿ, ಮಗಳ ಮದುವೆಗೆ ಇಟ್ಟಿದ್ದ ಒಂದೂವರೆ ಲಕ್ಷ ರೂ. ಆಸ್ತಿಪತ್ರ, ದಿನಸಿ, ಸಾಮಗ್ರಿಗಳು ಸುಟ್ಟು ಹೋಗಿವೆ. ನಂತರ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು.

ನಾಳೆ ಕಾಂಗ್ರೆಸ್‌ನ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಅಭಿಯಾನ ಆರಂಭ

ನವದೆಹಲಿ, ಜ1– ಕಾಂಗ್ರೆಸ್‌ನ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಅಭಿಯಾನ ಜ.3ರಿಂದ ಆರಂಭವಾಗಲಿದ್ದು, ಜನವರಿ 26ರಂದು ಮಧ್ಯಪ್ರದೇಶದ ಮಹೊವ್‌ನಲ್ಲಿ ಸಾರ್ವಜನಿಕ ಸಮಾವೇಶದಲ್ಲಿ ಕೊನೆಗೊಳ್ಳಲಿದೆ.

ಈ ವೇಳೆ ಪ್ರತಿ ಬ್ಲಾಕ್, ಜಿಲ್ಲೆ ಮತ್ತು ರಾಜ್ಯಗಳಲ್ಲಿ ರ್‍ಯಾಲಿಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ. 2024ರ ಡಿಸೆಂಬರ್ 27ರಂದು ಈ ಅಭಿಯಾನವನ್ನು ಬೆಳಗಾವಿಯಿಂದ ಪ್ರಾರಂಭಿಸಬೇಕಾಗಿತ್ತು. ಡಿ.26ರಂದು ಮಾಜಿ ಪ್ರಧಾನಿ ಮನಮೋಹನ ಸಿಂಗ್ ನಿಧನ ಮತ್ತು ಅವರ ಗೌರವಾರ್ಥ 7 ದಿನಗಳ ರಾಷ್ಟ್ರೀಯ ಶೋಕಾಚರಣೆ ಘೋಷಿಸಿದ್ದರಿಂದ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ರದ್ದು ಮಾಡಲಾಗಿತ್ತು.

ಡಿಸೆಂಬರ್ 26ರಂದು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ (ಸಿಡಬ್ಲ್ಯುಸಿ) ಕೊನೆಯ ಸಭೆಯಲ್ಲಿ ಅಭಿಯಾನ ಆಯೋಜಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಂವಿಧಾನ ರಕ್ಷಿಸುವ ಮತ್ತು ಭಾರತ ಸ್ವಾತಂತ್ರ್ಯ ಹೋರಾಟದ ಆದರ್ಶಗಳನ್ನು ಉಳಿಸಲು ಕಾಂಗ್ರೆಸ್ ಬದ್ಧವಾಗಿದೆ ಎಂದು ಸಿಡಬ್ಲ್ಯುಸಿ ತನ್ನ ನಿರ್ಣಯದಲ್ಲಿ ತಿಳಿಸಿದೆ. ಉಳಿದಂತೆ, 2025 ಜ.26ರಿಂದ 2026 ಜ.26ರ ನಡುವೆ 'ಸಂವಿಧಾನ ಬಚಾವೊ ರಾಷ್ಟ್ರೀಯ ಪಾದಯಾತ್ರೆ' ಆಯೋಜಿಸುವ ನಿರ್ಧಾರಕ್ಕೆ ಬರಲಾಗಿದೆ. ಈ ಪಾದಯಾತ್ರೆಯು ಹಳ್ಳಿಯಿಂದ ಹಳ್ಳಿಗೆ, ನಗರದಿಂದ ನಗರಕ್ಕೆ ರಿಲೇ ರೂಪದಲ್ಲಿ ನಡೆಯಲಿದೆ ಎಂದು ತಿಳಿಸಿದೆ. ಏಪ್ರಿಲ್ 2025ರ ಮೊದಲಾರ್ಧದಲ್ಲಿ ಎಐಸಿಸಿ ಅಧಿವೇಶನವು ಗುಜರಾತ್‌ನಲ್ಲಿ ನಡೆಯಲಿದೆ ಎಂದೂ ತಿಳಿಸಿದೆ.

ಕೊಳವೆ ಬಾವಿಗೆ ಬಿದ್ದಿದ್ದ ಬಾಲಕಿಗೆ ಹೊಸ ವರ್ಷದ ದಿನವೇ ಪುನರ್ ಜನ್ಮ

ಜೈಪುರ, ಜ.1– ರಾಜಸ್ಥಾನದಲ್ಲಿ ಡಿಸೆಂಬರ್ 23ರಂದು ಕೊಳವೆ ಬಾವಿಗೆ ಬಿದ್ದಿದ್ದ ಮೂರು ವರ್ಷದ ಬಾಲಕಿಯನ್ನು ಕೊನೆಗೂ ಸತತ 10 ದಿನಗಳ ಕಾರ್ಯಾಚರಣೆಯಲ್ಲಿ ಜೀವಂತವಾಗಿ ಹೊರತೆಗೆಯಲಾಗಿದೆ. ಅಂದು ರಾಜಸ್ಥಾನದ ಕೋಟಪುಟ್ಲಿ–ಬಹರೋಡ್ ಜಿಲ್ಲೆಯ ಕಿರಾತ್‌ಪುರ ಎಂಬಲ್ಲಿ ಚೇತನಾ ಎಂಬ ಮೂರು ವರ್ಷದ ಬಾಲಕಿ ಸುಮಾರು 150 ಅಡಿ ಆಳದ ಕೊಳವೆ ಬಾವಿಗೆ ಬಾಲಕಿ ಆಕಸ್ಮಿಕವಾಗಿ ಬಿದ್ದಿದ್ದಳು.

ಸದ್ಯ ಬಾಲಕಿಯ ಆರೋಗ್ಯ ಪರಿಸ್ಥಿತಿ ಹದಗೆಟ್ಟಿದ್ದು ಜಿಲ್ಲಾಸ್ಪತ್ರೆಯ ಸೂಪರ್ ಸ್ಪೆಷಾಲಿಟಿ ಘಟಕದ ಐಸಿಯುಗೆ ದಾಖಲಿಸಲಾಗಿದೆ. ಪ್ರಾಣಾಪಾಯದಿಂದ ಪಾರಾಗಿದ್ದಾಳೆ ಎಂದು ಜಿಲ್ಲಾಧಿಕಾರಿ ಕಲ್ಪನಾ ಅಗರವಾಲ್ ತಿಳಿಸಿದ್ದಾರೆ. ತಜ್ಞರ ಮಾರ್ಗದರ್ಶನ ಪಡೆದು ಎನ್‌ಡಿಆರ್‌ಎಫ್ ತಂಡ ರಕ್ಷಣಾ ಕಾರ್ಯಾಚರಣೆ ನಡೆಸಿತ್ತು. ಎನ್‌ಡಿಆರ್‌ಎಫ್ ಸಿಬ್ಬಂದಿಯ ಶ್ರಮಕ್ಕೆ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ.

ಕೊಳವೆ ಬಾವಿಗೆ ಸಮಾನಂತರವಾಗಿ ಅಗೆಯಲಾಗಿತ್ತು. ಈ ನಡುವೆ ಸುರಿದ ಮಳೆಯು ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಗಿ ಪರಿಣಮಿಸಿತ್ತು.

ಬಂಡೆಯನ್ನು ಒಡೆಯುವುದು ಸವಾಲಾಗಿತ್ತು. 'ಇದು ರಾಜ್ಯದಲ್ಲಿ ಎದುರಾದ ಅತ್ಯಂತ ಕಠಿಣ ರಕ್ಷಣಾ ಕಾರ್ಯಾಚರಣೆಗಳಲ್ಲಿ ಒಂದಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

House For Sale
20/40 EAST
Ground 2 BHK + 1st floor Room
MUDA with Clear Documents
Own Borewell & Vastu
Police layout 2nd Stage
9380284276

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
(ಸಂಬಳ 10000)
Field Executives ಬೇಕಾಗಿದ್ದಾರೆ
(ಸಂಬಳ 15000)
Team Manager ಬೇಕಾಗಿದ್ದಾರೆ
(ಸಂಬಳ 17000)
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ
8150005111

SITE FOR SALE
Site dimension: 30x40
North facing, site no 285,
Grameena employees welfare association layout,
MUDA approved,
Ready to construct
Landmark: Behind Mysore bank layout, Bhogadi
9844066391

ಫ್ಲಾಟ್ ಭೋಗ್ಯಕ್ಕಿದೆ
2 ಬಿಹೆಚ್‌ಕೆ
ಫ್ಲಾಟ್ 1060 Sqft
2nd Floor ವಿಜಯನಗರ 1ನೇ ಹಂತ, ಮೈಸೂರು
14 ಲಕ್ಷ
8762705887
9986664688



ಅಪ್ಪು ಸರ್ ಸ್ಫೂರ್ತಿ
ಉಚಿತ ಕಂಪ್ಯೂಟರ್ ಶಿಕ್ಷಣಕ್ಕೆ ಅರ್ಜಿ
Basic, MS Office, Excel (A)
Photoshop, HTML, C++
Coreldraw, Nudi, Tally,
Typing Class, Hardware,
Networking, Pagemaker,
CALL: 7760240575
ಮಂಡಿ ಮೊಹಲ್ಲಾ, ಮೈಸೂರು * T&C Apply

REQUIRED IMMEDIATELY
WEB DESIGNER
SALESMEN
9141835175
6366610175
careersmysuru@gmail.com

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಮಾರಾಟಕ್ಕಿದೆ
ಸೈಟ್ 40x50 ಕಾರ್ನರ್
ಮನೆ 20x30 ಮಾರಾಟಕ್ಕಿದೆ
ಮನೆ 20x40 ಮಾರಾಟಕ್ಕಿದೆ
ಮನೆ 30x40 ಮಾರಾಟಕ್ಕಿದೆ
Mob: 9008711654

Sri Murugan Pharma
@ Vijayanagar 3rd Stage
REQUIRED
STAFFS
Freshers and Experienced
Attractive Salary
Call: 99802 53762
Email: srimuruganpharmacy mysuru@gmail.com

ಜಮೀನು ಮಾರಾಟಕ್ಕಿದೆ
ಮೈಸೂರಿನ ಕುವೆಂಪು ನಗರದಿಂದ ಕೇವಲ 6 ಕಿಲೋಮೀಟರ್ ದೂರದಲ್ಲಿರುವ ಪೆರಿಫೆರಲ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ ಲೇಔಟ್‌ಗೆ ಸೂಕ್ತವಾದ 8.5 ಎಕರೆ ಜಮೀನು ಮಾರಾಟಕ್ಕಿದೆ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
ಸಂಪರ್ಕಿಸಿ: ಡಾ.ಗುರುಪ್ರಸಾದ್
9036284426

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಸುವರ್ಣ ಯಾತ್ರ
ಶ್ರೀಲಂಕಾ ಪ್ರವಾಸ 8 ದಿನಗಳು
ದಿನಾಂಕ: 18–01–2025
ನೇಪಾಳ ಪ್ರವಾಸ 9 ದಿನಗಳು
ದಿನಾಂಕ: 18–01–2025
ದುಬೈ ಪ್ರವಾಸ 6 ದಿನಗಳು
ದಿನಾಂಕ: 18–02–2025
9480843945
8660233673

ಹೊಸ ಮನೆ ಮಾರಾಟಕ್ಕಿದೆ
3 BHK, East Face
MUDA APPROVED
Near St. Joseph School,
Yelwala, Huyilalu.
Mob: 8217851695

ಅಲೈನ್‌ಮೆಂಟ್ ಹಾಗೂ ಬ್ಯಾಲೆನ್ಸ್
ಎಲ್ಲಾ ರೀತಿ (Yellow Board) ಕಾರುಗಳು ಟೆಂಪೋಟ್ರಾವೆಲ್ಸ್ ವಾಹನಗಳಿಗೆ ರಿಯಾಯಿತಿ ದರದಲ್ಲಿ ಮಾಡಿಕೊಡಲಾಗುವುದು.
(ಷರತ್ತುಗಳು ಅನ್ವಯಿಸುತ್ತದೆ.)
9480481000

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7760810381

ಬಾಡಿಗೆಗೆ ದೊರೆಯುತ್ತದೆ
Mahindra Supro Maxi Truck
ವಾಹನ ಮಾಸಿಕ ಬಾಡಿಗೆಗೆ ದೊರೆಯುತ್ತದೆ
9341816171

ಮಾರಾಟಕ್ಕಿದೆ
20x30 ಡ್ಯೂಪ್ಲೆಕ್ಸ್ ಮನೆ 70 ಲಕ್ಷ.
30x40 ಡ್ಯೂಪ್ಲೆಕ್ಸ್ ಮನೆ
30x40 ಸೈಟು 40 ಲಕ್ಷ.
ದಟ್ಟಗಳ್ಳಿ
Mob: 9945042875

ಶ್ರೀ ಮೂರ್ತಿ ಟೂರಿಸ್ಟ್
11–1–25 ಶನಿವಾರ ಬೆಳಿಗ್ಗೆ 4.30ಕ್ಕೆ ಒಂದೇ ದಿನದಲ್ಲಿ "3 ಶ್ರೀರಂಗನಾಥ"ನ (ಆದಿ, ಮಧ್ಯ, ಅಂತ್ಯ) ದರ್ಶನಕ್ಕಾಗಿ ಪ್ರವಾಸ. 12–1–25 ಬೆಳಿಗ್ಗೆ ವಾಪಸ್ ಬರುವುದು. (50 ಸೀಟುಗಳ ಬಸ್‌ನಲ್ಲಿ), (11 ರಂದು ತಿಂಡಿ, ಕಾಫಿ, ಮಧ್ಯಾಹ್ನದ ಊಟ ಸೇರಿದೆ).
Mob: 94807 33069

3 BHK DUPLEX HOUSE FOR RENT
At Aishwaryanagar, Kuvempunagar 'N' Block, Modular kitchen, wardrobe, 24x7 water, car parking, 2 balcony, solar, semi furnished.
Mob: 94498 48937

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

CHANGE OF NAME
I, Jayaprakash, residing at Door No. 1748, 12th Cross, Ashokapuram, Mysore, have changed my name as Gnanaprakash, on my own free will, in front of Notary S.V. Nagendra on 31-12-2024. I declare that hereafter in all records, deeds and instruments in writing and in all action and proceedings and in all dealings and transactions and upon all occasions whatsoever use and sign the said name of Gnanaprakash.
Sd/- Gnanaprakash

100% TEAK WOOD
FACTORY FINISH DOORS & FRAMES
@ FACTORY DEPOT RATES



10 YEARS WARRANTY*
9845426862
9901291267

ಮ್ಯಾನ್ ಪವರ್ ಸರ್ವೀಸ್ (ರಿ)
ನಮ್ಮಲ್ಲಿ ಅಡುಗೆ ಮತ್ತು ಹೋಂನರ್ಸ್ ಕೆಲಸಕ್ಕೆ
8hr-24hr
ಮಹಿಳೆಯರು ಸಿಗುತ್ತಾರೆ.
ಹೆಚ್ಚಿನ ಮಾಹಿತಿಗಾಗಿ
7975742003

SITE FOR SALE
MUDA APPROVED
30x40 In Bhairava enclave 3km from bogadi ring road. Attached to Vijayanagara 4th Stage. Just 100 mtrs from Bogadi Gaddige main road. Price 4200 per sqft
8792235466, 8884616461

OLD AGE HOME
We offer nursing and Medical Services to bedridden and senior citizens with Veg. food and accommodation at our centre in Gokulam, Mysore at a reasonable cost.
Mob: 9880102700

SITE FOR SALE
30x35 East facing site for sale in Varuna Nagara Layout, Near MIT College Kesare Mysore.
Just 26 Lakh rupees
8884616461, 8073300783

WANTED
Female Billing Executive.
Contact:
Mob: 9591616966

SITE FOR SALE
30x40 site is available for sale in Vishwaprajna attached layout. Hale Kesare, Mysore. Just 7km from Mysore city Bus station. Just 2 km from Manipal Hospital. Price is 38 lakh. Call:
8884616461, 8073300783

ಈ ತಕ್ಷಣ ಬೇಕಾಗಿದ್ದಾರೆ
ಟೈಲರುಗಳು, ಹೆಲ್ಪರುಗಳು, ಸೆಕ್ಯೂರಿಟಿಗಾರ್ಡುಗಳು ಮತ್ತು ಅಕೌಂಟೆಂಟ್ (ಲೇಡಿಸ್) ಹಾಗೂ B.com/BBA ಆದ ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ:
8105249880
7795285485

SBIT TRAVELS
Group Tour
Dubai 5 Nights 6 Days
20, 28 Jan / 5, 9, 14, 22 Feb / 3, 15, 25 Mar / 7, 20, 23, 29 Apr / 10, 18, 30 May
Air tickets / Accommodation
Meals / Sightseeing / Visa / Entry
Tickets / All tours and transfers
9343524127
(Saraswathipuram, Mysuru)

SITE FOR SALE
45x60 Commercial site on 60ft road for sale in KBL Gardenia layout. Attached to Vijayanagara 4th Stage, 4750 per sqft. Price 1.25 cr
8884616461, 8792235466

Change of Name
I, Cheemala Lavanya, residing at Door No. C-263, Note Mudran Nagar, BRBNMPL Township, Mysuru-570 003, have changed my name after marriage as Kola Lavanya on my own free will, in front of Notary C. Mangala on 25-12-2024. I declare that, hereafter in all records, deeds and instruments in writing & in all actions and proceedings and in all dealings and transa-ctions & upon all occasions whatsoever use & sign the said name of Kola Lavanya.
Sd/- Kola Lavanya

ಬೇಕಾಗಿದ್ದಾರೆ
ಫೋರ್ಕ್‌ಲಿಫ್ಟ್ ಆಪರೇಟರ್: 5 ಹುದ್ದೆಗಳು
ಲಾರಿ ಡ್ರೈವರ್: 10 ಹುದ್ದೆಗಳು
ಡೆಲಿವರಿ ವ್ಯಕ್ತಿಗಳು: 5 ಹುದ್ದೆಗಳು
Mob: 8904060693

ಬೇಕಾಗಿದ್ದಾರೆ
ಮೆಡಿಕಲ್ ಸ್ಟೋರ್‌ನಲ್ಲಿ ಅನುಭವವುಳ್ಳ, D.Pharma ಮಾಡಿರುವ ಹಾಗೂ ಕಂಪ್ಯೂಟರ್ ಜ್ಞಾನವುಳ್ಳ, ಹುಡುಗ/ಹುಡುಗಿಯರು /ಮಹಿಳೆಯರು ಬೇಕಾಗಿದ್ದಾರೆ.
9901080314

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7996497954

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ.
ಸ್ಥಳ: ಮೈಸೂರು ಸಿಟಿ, ಹೆಬ್ಬಾಳು ಕೈಗಾರಿಕ ನಗರ, ಸಿದ್ಧಾರ್ಥ ಬಡಾವಣೆ ಮತ್ತು ಹಿನಕಲ್
7829393555

ಬೇಕಾಗಿದ್ದಾರೆ
ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ವೆಜ್ ರೆಸ್ಟೋರೆಂಟ್‌ನಲ್ಲಿ ಕೆಲಸಗಾರರು ಬೇಕಾಗಿದ್ದಾರೆ. ಸೌತ್‌ಭಟ್ಟರು–1, ಸಪ್ಲೈಯರ್–2 (ಮಹಿಳೆಯರು) ಕ್ಯಾಷಿಯರ್–1 (ಮಹಿಳೆ)
8892088999

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಉದ್ಯೋಗ ಅವಕಾಶ
ಒಂದೆ ದಿನದೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ತಂಡ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ ಸಂಬಳ – ರೂ. 15200 – 86,100
7337645977, 7892046990

FOR SALE
1. 20x30, 30x40, Sites @ Bogadi. Duplex House @ 53L
2. 30x40 Commercial Site @ Mysore-Bannur Highway Road.
3. 20x30 Site at VRL Lyt, HD Kote Road.
4. Commercial Properties @ Kuvempu Nagar, Saraswati Puram & More.
5. 20x30, Sites & House near Yelwala
30x40 Sites attached to Brahmins Lyt
PRAKRUTHI PROPERTIES
95386 90359, 90359 90359



V-GUARD
10 ವರ್ಷಗಳ ವ್ಯಾರಂಟಿ
ದಸರಾ ಹಬ್ಬದ ಶುಭಾಶಯಗಳು
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

MUDA APPROVED SITE FOR SALE
Vajamangala, Nagawala, Hunsuru, Devagalli, Uttanahalli
8123387555

BUILT TO SUIT
3500 square feet
Near BSNL Office,
Opp. to Jyothi Hospital
Rajkumar Road, Mysuru
9448294483
9663062222

WANTED DENTIST
GLOBAL MULTI-SPECIALITY DENTAL CLINIC MYSORE
7348956169

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನೀಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ ರೂ. 7600 (24 CT)
Mob: 9108146123

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

WANTED
North - West Corner Site in Mysore City
8123387555

GREAT OPPORTUNITY
Sales Specialist (M/F) 3Nos.
Experienced in Real Estate Industry Only.
(if required accommodation will be provided)
Mahendra Developers
8088063609

ಸೈಟು ಮಾರಾಟಕ್ಕಿದೆ
30x50 Site No.9
ನಾರ್ತ್ ಫೇಸ್
HMR ಲೇಔಟ್ ಮನುಗನಹಳ್ಳಿ ಚೆಕ್‌ಪೋಸ್ಟ್ ಹತ್ತಿರ
ರೂ.2100/ ಚದರಅಡಿ
8050257887
9242871621

WANTED
We are Hiring
1. HR /Admin personnel-1 No- 3yrs experience, Plan, Co-ordinate and manage the administrative functions of an office
2. Loan / Debt Recovery Executives
Telecallers-5 Nos.
Field Executives-5 Nos.
9482676099
9591425134

ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸೇಲ್ ಕೆಲಸಕ್ಕೆ
Qualification : SSLC -PUC
ಹುಡುಗರು ಬೇಕಾಗಿದ್ದಾರೆ
9606380611
7760618337

ಬೇಕಾಗಿದ್ದಾರೆ
ಸರ್ಕಾರದ ಮಾನ್ಯತೆ ಪಡೆದಿರುವ ವಿಶೇಷ ಮಕ್ಕಳ ಶಾಲೆಗೆ ಶಾಲಾ ಬಸ್ ಚಾಲಕರು ಬೇಕಾಗಿದ್ದಾರೆ. ವಯೋಮಿತಿ : 25 ರಿಂದ 40 ವರ್ಷ ಒಳಪಟ್ಟಿರಬೇಕು. ಅರ್ಹತೆ: ಡ್ರೈವಿಂಗ್ ಲೆಸೆನ್ಸ್ ಹೊಂದಿರಬೇಕು ಹೆವಿ ಗಾಡಿಯ ಬ್ಯಾಡ್ಜ್ ಹೊಂದಿರಬೇಕು.
ಸಂಪರ್ಕಿಸಬೇಕಾದ ಫೋನ್ ನಂಬರ್‌ಗಳು
9611313641,9686097916
8618223393

ಹೋಮ್ ನರ್ಸಿಂಗ್
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗರು ಮಹಿಳೆಯರು ಬೇಕಾಗಿದ್ದಾರೆ.
ಮೈಸೂರು ಹಾಗೂ ಮಡಿಕೇರಿ
8123252840

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್
SSLC/Pass/Fail
ಸ್ಥಳ: ಮೇಟಗಳ್ಳಿ (ಮೈಸೂರು)
ವಯೋಮಿತಿ : 50 ವರ್ಷದೊಳಗಿನವರು
9482810407

WANTED
1. Site Engineer with exp 2Nos.
2. Cook (F) with exp
(Food and accommodation will be provided)
Mahendra Developers
8088063609

ಹೆಸರು ಬದಲಾವಣೆ
ಚಲುವರಾಜು ಎಸ್.ಎಸ್., ಮೈಸೂರು ಜಿಲ್ಲೆ & ತಾಲ್ಲೂಕು, ಇಲವಾಲ ಹೋಬಳಿ, ಕೂರ್ಗಳ್ಳಿ ಗ್ರಾಮದಲ್ಲಿ ವಾಸವಿದ್ದು, ನನ್ನ ಮಗ ಕಿಶೋರ್ ಸಿ (ಆಧಾರ್ ನಂ. 746930757342) ಹೆಸರನ್ನು ಜ್ಞಾನೇಂದ್ರ ಕುಮಾರ್ ಸಿ ಎಂದು ಮಂಡ್ಯದ ನೋಟರಿ ಜಿ.ಬಿ.ಚಂದ್ರ ಅವರ ಸಮ್ಮುಖದಲ್ಲಿ ದಿನಾಂಕ: 09–12–2024ರಂದು ಬದಲಾಯಿಸಿ ಪ್ರಮಾಣೀಕರಿಸುತ್ತೇನೆ.
ಸಹಿ/– ಚಲುವರಾಜು ಎಸ್.ಎಸ್.

ಹುಡುಗರು ಬೇಕಾಗಿದ್ದಾರೆ
ವಿದ್ಯಾರ್ಹತೆ 7th, SSLC, PUC Deploma, ANy Degree Pass or Fail
ಸಂಬಳ : 15,000 ರಿಂದ 30,000 ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ
9880151303

ತಕ್ಷಣ ಬೇಕಾಗಿದ್ದಾರೆ
ವೃದ್ಧಾಶ್ರಮದಲ್ಲಿ ಉಳಿದುಕೊಂಡು ವೃದ್ಧರನ್ನು ಆರೈಕೆ ಮಾಡಲು ಅನುಭವವುಳ್ಳ ಯುವತಿಯರು ಮತ್ತು ಮಹಿಳೆಯರು ತಕ್ಷಣ ಬೇಕಾಗಿದ್ದಾರೆ.
ಸಂಬಳ: 18,000/– ದಿಂದ ಪ್ರಾರಂಭ
ಸ್ಥಳ: ಮೈಸೂರು
9916905188

HOUSES FOR RENT
@ SARASWATHIPURAM KUVEMPUNAGAR & SOURROUNDINGS
S.S.PROPERTY SERVICES
(Opp.Kuvempu School) SS Puram
93421-25252

ತಕ್ಷಣ ಬೇಕಾಗಿದ್ದಾರೆ
ಅಪೋಲೋ ಆಸ್ಪತ್ರೆ ಏರಿಯಾದಲ್ಲಿ ಕೆಲಸ ಮಾಡಲು ಡ್ರೈವಿಂಗ್ ಅನುಭವುಯುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC, ಸಂಬಳ: 20000/–
ESI ಮತ್ತು PF ಊಟ ವಸತಿ ಸೌಲಭ್ಯವಿರುತ್ತದೆ
9620667819
9620777819

ತಕ್ಷಣ ಬೇಕಾಗಿದ್ದಾರೆ
ಕಡಕೊಳ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC
ಸಂಬಳ: 17000/– (8 hours)
ESI ಮತ್ತು PF ಊಟ ವಸತಿ ಸೌಲಭ್ಯವಿರುತ್ತದೆ
9620777819
9620667819

ತಕ್ಷಣ ಬೇಕಾಗಿದ್ದಾರೆ
ಹೊಸ ವರ್ಷಕ್ಕೆ ಹೊಸ ವಿಭಾಗಕ್ಕೆ ಯುವತಿಯರು Age (18-24) 10th, PUC ಯಾದ Traineeಗಳಾಗಿ Earn (9600/- ರಿಂದ 18600/-) pm *NO FEE* ವಿವರಗಳೊಂದಿಗೆ ನೇರ ಸಂಪರ್ಕಿಸಿ. ಮೈಸೂರು.
Call ಕಾವ್ಯ:
9342827788

ವಧು–ವರರ ಅನ್ವೇಷಣೆ
ಬಲಮುರಿ ಗಣಪತಿ ದೇವಸ್ಥಾನದ ಎದುರು, ತ್ರಿವೇಣಿ ಸರ್ಕಲ್ ಹತ್ತಿರ, ರಾಜಕುಮಾರ್ ರಸ್ತೆ, ಶಕ್ತಿನಗರ, ಮೈಸೂರು
ಕ್ರಿಶ್ಚಿಯನ್, ಎಸ್.ಸಿ, ಎಸ್.ಟಿ, ಲಿಂಗಾಯಿತ, ಕುರುಬ, ಮರಾಠರು ಮತ್ತು ಎಲ್ಲಾ ಜನಾಂಗದ ವಧು–ವರರ ಮಾಹಿತಿ ಮತ್ತು ಅನ್ವೇಷಣೆಗೆ ನಮ್ಮನ್ನು ಸಂಪರ್ಕಿಸಿ
ವಿಜಯಕುಮಾರ್ 9844396822
ಎಂ.ಮಹೇಂದ್ರಕುಮಾರ್
94482 47647, 91645 96155

SITE FOR SALE
N/E Corner
60x70
Suvarna Nagara
Bhogadi Road
8050821108

Paint work, Plumbing work, Electrical Work, Tiles,
ಕೆಲಸ Terrace and Toilet waterproofing, ಗಾರೆ ಕೆಲಸ ಹಾಗೂ ಮನೆಗೆ ಸಂಬಂಧಿಸಿದ ಎಲ್ಲಾ ಕೆಲಸವನ್ನು ಮಾಡಿಕೊಡಲಾಗುವುದು. ಹಳೇ ಮನೆಯನ್ನು Renovation ಕೂಡ ಮಾಡಲಾಗುತ್ತದೆ.
ಇಂದೇ ಕರೆ ಮಾಡಿ
8660384527

ಉದ್ಯೋಗ ಅವಕಾಶಗಳು
1. ಭದ್ರತಾ ಸಿಬ್ಬಂದಿ,
2. ವ್ಯಾಲೆಟ್ ಪಾರ್ಕಿಂಗ್ ಚಾಲಕರು,
ನಾವು ಏನು ನೀಡುತ್ತೇವೆ. ಸ್ಪರ್ಧಾತ್ಮಕ ಸಂಬಳ ESI, PF
ಸ್ಥಳ: ಮೇಟಗಳ್ಳಿ, ಸುತ್ತ–ಮುತ್ತ, ನೆಂಜುಮಳಿಗೆ ವೃತ್ತ, ಕುವೆಂಪುನಗರ
8217563349,8867197599
9148975329

ಮನೆ ಮಾರಾಟಕ್ಕಿದೆ
ಲಾಲ್ ಬಹದ್ದೂರು ಶಾಸ್ತ್ರಿ ನಗರ, ಮನೆ ನಂಬರ್ 1293, ಗ್ರೌಂಡ್ 1ನೇ ಮತ್ತು 2ನೇ ಅಂತಸ್ತು
9880729299

ಮನೆ ಭೋಗ್ಯಕ್ಕೆ ಇದೆ
30x45, 3 ಬಿಹೆಚ್‌ಕೆ
ನಾರ್ಥ್ ಫೇಸ್, ಕಾರ್ನರ್ ಹೊಸ ಮನೆ, ಪ್ರಶಾಂತ್ ನಗರ, 1ನೇ ಫೇಸ್, ದಡದಹಳ್ಳಿ, ಮೈಸೂರು.
(14 ಲಕ್ಷ) ಸಂಪರ್ಕಿಸಿ:
8050257887
8762705887

ಮೈಸೂರು ಮಿತ್ರ

ಹೊಸವರ್ಷ ಆಚರಣೆ: ಶ್ರೀ ತ್ರಿಪುರ ಸುಂದರಿ ಅಮ್ಮನ ದರ್ಶನ ಪಡೆದ ಭಕ್ತರು





ದೇವಸ್ಥಾನಕ್ಕೆ ಆಗಮಿಸಿದ ಭಕ್ತರ ದಂಡು.

ಮೂಗೂರು, ಜ.1– ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನಕ್ಕೆ ಸಾವಿರಾರು ಭಕ್ತರು ಆಗಮಿಸಿ ಅಮ್ಮನವರ ದರ್ಶನ ಪಡೆದರು. ಧನುರ್ಮಾಸ ಹಾಗೂ ಹೂಸ ವರ್ಷದ ಅಂಗವಾಗಿ ದೇಗುಲದಲ್ಲಿ ಅಮ್ಮನವರಿಗೆ ಹೂವಿನ ಸೀರೆ ಅಲಂಕಾರ ಮಾಡಲಾಗಿತ್ತು ಬೆಳಗ್ಗೆಯಿಂದಲೇ ಅಭಿಷೇಕ, ವಿಶೇಷ ಪೂಜೆಗಳು ಸಾಂಘಿಕವಾಗಿ ನಡೆಯಿತು. ರಾಜ್ಯದ ವಿವಿಧ ಭಾಗಗಳಿಂದ ಭಕ್ತರು ಆಗಮಿಸಿದ ಹಿನ್ನೆಲೆಯಲ್ಲಿ ದೇವಾಲಯದ ಆವರಣದಲ್ಲಿ ಅಪಾರ ಜನಸ್ತೋಮ ಸೇರಿತ್ತು ಇದರಿಂದ ಕೆಲಕಾಲ ದರ್ಶನ ಪಡೆಯಲು ನೂಕುನುಗ್ಗಲು ಕಂಡು ಬಂದಿತು.

ಭೀಮ ಕೋರೆಗಾಂವ್ ವಿಜಯೋತ್ಸವ ಯಾತ್ರೆಗೆ ಚಾಲನೆ



ನಂಜನಗೂಡಿನ ಅಂಬೇಡ್ಕರ್ ವೃತ್ತದಲ್ಲಿ ಬುಧವಾರ ಹಿರಿಯ ಪತ್ರಕರ್ತ ನರಸಿಂಹ ಮೂರ್ತಿ ಭೀಮ ಕೋರೆಗಾಂವ್ ವಿಜಯೋತ್ಸವ ರಥಕ್ಕೆ ಚಾಲನೆ ನೀಡಿದರು.

ನಂಜನಗೂಡು, ಜ.1– 206 ವರ್ಷಗಳ ಹಿಂದೆ ಪೇಶ್ವೆಯ ಇಪ್ಪತ್ತೈದು ಸಾವಿರ ಸೈನಿಕರ ವಿರುದ್ಧ ಐನೂರು ಮಂದಿ ದಲಿತ ಮೆಹರ್ ಸೈನಿಕರು ಹೋರಾಡಿದ ಜನವರಿ 1 ನ್ನು ದಲಿತರು ತಾವು ಅನುಭವಿಸಿದ ಅಸ್ಪೃಶ್ಯತೆಯ ನೋವು, ಸಂಕಟಗಳ ಪ್ರತಿರೋಧ ದಿನವನ್ನಾಗಿ ದೇಶಾದ್ಯಂತ ಆಚರಿಸಲಾಗುತ್ತಿದೆ ಎಂದು ಹಿರಿಯ ಪತ್ರಕರ್ತ ನರಸಿಂಹ ಮೂರ್ತಿ ತಿಳಿಸಿದರು.

ನಗರದ ಅಂಬೇಡ್ಕರ್ ವೃತ್ತದಲ್ಲಿ ಬುಧವಾರ ಭೀಮ ಕೋರೆಗಾಂವ್ ವಿಜಯೋತ್ಸವ ರಥಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಅಲ್ಪಸಂಖ್ಯಾತ, ದೀನ ದಲಿತ, ಹಿಂದುಳಿದವರು ಭೀಮ ಕೋರೆಗಾಂವ್ ಯುದ್ಧದಲ್ಲಿ ಮೆಹರ್ ಸೈನಿಕರ ಹೋರಾಟವನ್ನು ತಮ್ಮ ಸ್ವಾಭಿಮಾನದ, ಸಮಾನತೆಯ ಸಂಕೇತವಾಗಿ ದೇಶಾದ್ಯಂತ ಆಚರಿಸುತ್ತಿದ್ದಾರೆ. ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರು ಭೀಮ ಕೋರೆಗಾಂವ್ ಸ್ಮಾರಕಕ್ಕೆ ಪ್ರತಿವರ್ಷ ಭೇಟಿ ನೀಡುತ್ತಿದ್ದರು. ನಂಜನಗೂಡು ತಾಲೂಕಿನಲ್ಲಿ ಹಲವಾರು ವರ್ಷಗಳಿಂದ ತಾಲೂಕಿನ 45 ಪಂಚಾಯಿತಿಯ ವ್ಯಾಪ್ತಿಯಲ್ಲಿ ಮನೆ–ಮನೆಗೂ ಆ ಹೋರಾಟದ ನೆನಪನ್ನು ಸ್ಮರಿಸುವಂತೆ ಭೀಮ ಕೋರೆಗಾಂವ್ ವಿಜಯೋತ್ಸವ ಯಾತ್ರೆಯನ್ನು ಸಂಘಟಿಸುವ ಕಾರ್ಯ ನಡೆಸುತ್ತಿದ್ದಾರೆ. ದಲಿತ, ರೈತ ಸಂಘಟನೆಗಳ ಮಾನವೀಯ ಕಾಳಜಿಗೆ ನಮನ ಸಲ್ಲಿಸುತ್ತೇನೆ ಎಂದು ಹೇಳಿದರು.

ನಗರಸಭೆ ಆಯುಕ್ತ ವಿಜಯ್ ಮಾತನಾಡಿ, ಜನವರಿ 1 ನಮಗೆ ಹೊಸ ವರ್ಷದ ಸಡಗರ, ಸಂಭ್ರಮದ ದಿನವಲ್ಲ, ಐನೂರು ಮಂದಿ ಮೆಹರ್ ಸೈನಿಕರು ಪೇಶ್ವೆಯ ಬೃಹತ್ ಸೈನ್ಯದ ವಿರುದ್ಧ ಅಸ್ಪೃಶ್ಯತೆಯನ್ನು ಮೆಟ್ಟಿ ನಿಂತು ನಡೆಸಿದ ಹೋರಾಟವನ್ನು ನೆನಪು ಮಾಡುವ ದಿನವಾಗಿದೆ. ನೂರಾರು ನನ್ನ ದಲಿತ ಬಂಧುಗಳು ಆ ಸ್ವಾಭಿಮಾನದ ಹೋರಾಟದಲ್ಲಿ ತಮ್ಮ ಪ್ರಾಣವನ್ನು ಅರ್ಪಿಸಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದ ಅಂಗವಾಗಿ ಅಂಬೇಡ್ಕರ್ ಪುತ್ಥಳಿಗೆ ಪುಷ್ಪಾರ್ಚನೆ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಮುಖಂಡ ಅಭಿ ನಾಗಭೂಷಣ್ ನೇತೃತ್ವದಲ್ಲಿ 100 ಮಂದಿಗೆ ಯುವಕರಿಗೆ ಉಚಿತವಾಗಿ ಅಂಬೇಡ್ಕರ್ ಟ್ಯಾಟು ಹಾಕಿಸಲಾಯಿತು. ಕಾರ್ಯಕ್ರಮದಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ದಲಿತ ಸಂಘಟನೆಗಳ ಸಮನ್ವಯ ಸಮಿತಿ ಅಧ್ಯಕ್ಷ ನಗರ್ಲೆ ವಿಜಯ್ ಕುಮಾರ್, ಮುಖಂಡರಾದ ಮಲ್ಲಹಳ್ಳಿ ನಾರಾಯಣ, ಚುಂಚನಹಳ್ಳಿ ಮಲ್ಲೇಶ್, ಬೊಕ್ಕಹಳ್ಳಿ ನಂಜುಂಡಸ್ವಾಮಿ, ಶಂಕರಪುರ ಸುರೇಶ್, ಕಾರ್ಯ ಬಸವಣ್ಣ, ಪುಟ್ಟಸ್ವಾಮಿ, ಹಿಮ್ಮಾವು ರಘು, ಸತೀಶ್ ರಾವ್, ಅಭಿ ನಾಗಭೂಷಣ್, ಯಶವಂತ್ ಕುಮಾರ್, ಜೈಶಂಕರ್, ಪ್ರಶಾಂತ್, ಬಸವರಾಜ್, ಕಳಲೆ ಕುಮಾರ್, ಮರಿಸ್ವಾಮಿ, ಅನಿಲ್ ಕುಮಾರ್, ಜಯರಾಮ್ ಉಪಸ್ಥಿತರಿದ್ದರು.

ಸರಗೂರು ವಾಹನ ಚಾಲಕರ ಸಂಘದ ಅಧ್ಯಕ್ಷರಾಗಿ ಬೀರ್ವಾಳ್ ಚಿಕ್ಕಣ್ಣ ಆಯ್ಕೆ



ಸರಗೂರು ವಾಹನ ಚಾಲಕರ ಸಂಘದ ನೂತನ ಅಧ್ಯಕ್ಷರಾಗಿ ಬೀರ್ವಾಳ್ ಚಿಕ್ಕಣ್ಣ ಆಯ್ಕೆಯಾದರು.

ಸರಗೂರು, ಜ.1– ಸರಗೂರು ವಾಹನ ಚಾಲಕರ ಸಂಘದ ನೂತನ ಅಧ್ಯಕ್ಷರಾಗಿ ಬೀರ್ವಾಳ್ ಚಿಕ್ಕಣ್ಣ ಎರಡನೇ ಬಾರಿಗೆ ಆಯ್ಕೆಯಾದರು.

ತಾಲೂಕಿನ ನುಗು ಪ್ರವಾಸಿ ಮಂದಿರದ ಹೊರಾಂಗಣದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಸದಸ್ಯರು ಸರ್ವಾನುಮತದಿಂದ ಬೀರ್ವಾಳ್ ಚಿಕ್ಕಣ್ಣ ಅವರನ್ನು ಎರಡನೇ ಬಾರಿಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಿದರು.

ಇದೇ ವೇಳೆ ಮಾತನಾಡಿದ ಅಧ್ಯಕ್ಷ ಬೀರ್ವಾಳ್ ಚಿಕ್ಕಣ್ಣ, ಪ್ರತಿಯೊಬ್ಬ ವಾಹನ ಚಾಲಕರು ಜನಸ್ನೇಹಿ ಚಾಲಕರಾಗಬೇಕು. ನಮ್ಮನ್ನು ನಂಬಿ ಕುಟುಂಬದ ಸದಸ್ಯರು ನಮ್ಮ ವಾಹನಗಳಲ್ಲಿ ಪ್ರಯಾಣ ಮಾಡುತ್ತಾರೆ. ನಾವು ಸಹ ಅವರ ಕುಟುಂಬದ ಸದಸ್ಯರಂತೆ ಯಾವುದೇ ತೊಂದರೆಯಾಗದಂತೆ ಅವರಿಗೆ ಸ್ಪಂದನೆ ನೀಡಬೇಕು. ಯಾರು ಕಾನೂನು ಮೀರಬಾರದು. ವಾಹನ ಚಾಲಕರ ಸಂಘದ ಅಧ್ಯಕ್ಷರಾಗಿ ಆಯ್ಕೆ ಮಾಡಿದ ಸರ್ವ ಸದಸ್ಯರಿಗೆ ಅಭಿನಂದನೆ ಸಲ್ಲಿಸಿ, ಸಂಘದ ಏಳಿಗೆಗಾಗಿ ದುಡಿಯುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಕಣ್ಣಿನ ಸಮಸ್ಯೆಯಿಂದ ಸಂಕಷ್ಟದಲ್ಲಿರುವ ಚಾಲಕ ರಂಗಸ್ವಾಮಿ ಅವರಿಗೆ ಸಂಘದ ವತಿಯಿಂದ ಚಿಕಿತ್ಸೆಗಾಗಿ 10 ಸಾವಿರ ರೂ. ಧನ ಸಹಾಯ ಮಾಡಲಾಯಿತು. ವಾಹನ ಚಾಲಕರ ಸಂಘದ ನೂತನ ಕಾರ್ಯಕಾರಿ ಮಂಡಳಿಗೆ ಗೌರವಾಧ್ಯಕ್ಷರಾಗಿ ಹೆಚ್.ಎಸ್.ಲಿಂಗರಾಜು, ಮಾಜಿ ಅಧ್ಯಕ್ಷ ಶಶಿ, ಉಪಾಧ್ಯಕ್ಷ ಎಸ್.ಬಿ. ಕಾಳನಾಯಕ, ಪ್ರಧಾನ ಕಾರ್ಯದರ್ಶಿ ಅಲಸೂರು ನಾಗೇಶ್, ಸಹಕಾರ್ಯದರ್ಶಿ ರವಿ, ಖಜಾಂಚಿ ಎಸ್.ಟಿ.ರವಿ, ನಿರ್ದೇಶಕರಾಗಿ ಎಂ.ನಾಗರಾಜು, ಬಿ.ಬೆಟ್ಟನಾಯಕ, ಸಿ.ವೆಂಕಟೇಶ್, ಬಿ.ಎಂ.ಮಹದೇವಪ್ಪ, ಹೆಚ್.ಎಂ.ಮಹದೇವನಾಯಕ, ಜಿ.ವೆಂಕಟೇಶ್, ಸೂರಿ, ರಾಜೇಂದ್ರ, ಗುಂಡನಾಗೇಶ್, ಚಿದಾನಂದ, ರಘು, ರಮೇಶ್, ಆಗತ್ತೂರು ಚಿಕ್ಕಣ್ಣ, ಮಂಜು, ತನು ಹಾಗೂ ಸಂಘದ ಸದಸ್ಯರು ಮುಂತಾದವರು ಹಾಜರಿದ್ದರು.

ವಿದ್ಯಾಸಂಸ್ಥೆಗಳು ಗುಣಮಟ್ಟದ ಶಿಕ್ಷಣ ನೀಡಬೇಕು



ಕಾರ್ಯಕ್ರಮದಲ್ಲಿ ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಮಾತನಾಡಿದರು.

ತಿ.ನರಸೀಪುರ, ಜ.1– ಗ್ರಾಮೀಣ ಭಾಗದಿಂದ ಆಗಮಿಸುವ ಮಕ್ಕಳು ಹೆಚ್ಚು ಬುದ್ಧಿವಂತರಾಗಿದ್ದು, ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳ ದೂರದೃಷ್ಟಿ ಫಲವಾಗಿ ಇಂದು ನಮ್ಮ ಸಂಸ್ಥೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಹೌಸಿಂಗ್ ಬೋರ್ಡ್‌ನ ಶ್ರೀ ಆದಿಚುಂಚನಗಿರಿ ಬಾಲಜಗತ್ ಪೂರ್ವ ಪ್ರಾಥಮಿಕ, ಹಿರಿಯ ಪ್ರಾಥಮಿಕ ಪ್ರೌಢಶಾಲೆಯಲ್ಲಿ ನಡೆದ 19ನೇ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾಸಂಸ್ಥೆಗಳಿಂದ ಮಾತ್ರ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲು ಸಾಧ್ಯ. ಹೀಗಾಗಿ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಗಮನ ಹರಿಸಬೇಕು ಎಂದು ತಿಳಿಸಿದರು.

ವಿದ್ಯಾರ್ಥಿಗಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ದೊಡ್ಡದು. ಆದ್ದರಿಂದ ಪೋಷಕರು ತಮ್ಮ ಮಕ್ಕಳ ಮೇಲೆ ಹೆಚ್ಚು ಗಮನ ಹರಿಸಬೇಕು. ಶಿಕ್ಷಣದಿಂದ ಎಲ್ಲವನ್ನು ಪಡೆಯಲು ಸಾಧ್ಯ. ವಿದ್ಯೆಗೆ ಬೆಲೆ ಸಿಗಬೇಕಾದರೆ ವಿದ್ಯಾರ್ಥಿಗಳು ಮಾನವೀಯ ಮೌಲ್ಯ ಗಳನ್ನು ಬೆಳೆಸಿಕೊಳ್ಳಬೇಕು ಎಂದರು.

ಕನ್ನಡ ಚಲನಚಿತ್ರ ಹಾಸ್ಯನಟರಾದ ಜಯರಾಮು, ಶ್ರೀ ಚನ್ನಮಲ್ಲಸ್ವಾಮಿ, ಕರ್ನಾಟಕ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರ ಮೂರ್ತಿ, ವಿದ್ಯೋದಯ ಬಾಲಕಿಯರ ಕಾಲೇಜು ನಿವೃತ್ತ ಪ್ರಾಂಶುಪಾಲರಾದ ಬಿ.ಸಿ.ಇಂದಿರಮ್ಮ, ಮುಖಂಡರಾದ ಸ್ವಾಮಿನಾಥ, ಚನ್ನೇಗೌಡರು, ಶಾಖಾ ವ್ಯವಸ್ಥಾಪಕರುಗಳಾದ ಬಸವರಾಜು, ಸೋಮಣ್ಣ, ಶಾಲೆಯ ಮುಖ್ಯೋಪಾಧ್ಯಾಯ ಪ್ರಶಾಂತ್ ಎಂ.ಬಿ, ದೈಹಿಕ ಶಿಕ್ಷಕ ಶಾಂತಕುಮಾರ ಕೆ, ಸೌಮ್ಯ ಹೆಚ್.ಎಂ, ಲಾವಣ್ಯ ಸಿ, ರವಿ ಜಿ, ಜಗದೀಶ್, ಕಾವ್ಯಶ್ರೀ ಎಸ್, ಕಾವ್ಯ ಜೆ, ಗಿರಿಜಾ ಎಂ.ಬಿ, ಮಮತಾ ಎಂ, ದಿವ್ಯ ಬಿ, ಅನಿತಾ ಕುಮಾರಿ ಪಿ, ಸಿಮ್ರಾನ್ ಫಾತಿಮಾ, ಜ್ಯೋತಿ ಬಿ, ರಮ್ಯಶ್ರೀ ಬಿ, ಮಂಜುಳ ಎಂ.ಪಿ, ಕೋಮಲ ಟಿ.ಎಸ್, ನಾಗರತ್ನ, ಜಯಲಕ್ಷ್ಮಿ ಎಂ, ಅಕ್ಷತಾ, ಆದ್ಯ, ಸಿಬ್ಬಂದಿಗಳಾದ ಲಕ್ಷ್ಮಿ, ಜ್ಯೋತಿ, ಗೀತಲಾದೇವಮ್ಮ ಹಾಜರಿದ್ದರು.

ಬುಂಡೆಬೆಸ್ತರ ಕಾಲೋನಿಗೆ ಮೂಲಸೌಕರ್ಯ ಕಲ್ಪಿಸದಿದ್ದರೆ ಮತದಾನ ಬಹಿಷ್ಕಾರ ಎಚ್ಚರಿಕೆ



ಉಪವಿಭಾಗಾಧಿಕಾರಿ ವಿಜಯ್‌ಕುಮಾರ್ ಅವರಿಗೆ ಮನವಿ ಸಲ್ಲಿಸಿದ ಗ್ರಾಮಸ್ಥರು.

ಹುಣಸೂರು, ಜ.1– ನಿರ್ಗತಿಕ ಅಲೆಮಾರಿಗಳ ನೆಲೆ ಬುಂಡೆಬೆಸ್ತರ ಕಾಲೋನಿಗೆ ಸ್ಮಶಾನ, ಪ್ರತ್ಯೇಕ ಮತಗಟ್ಟೆ ಸ್ಥಾಪನೆ ಸೇರಿದಂತೆ ಇತರೆ ಮೂಲಭೂತ ಸೌಲಭ್ಯಗಳನ್ನು ನೀಡದಿದ್ದಲ್ಲಿ ಮತದಾನ ಬಹಿಷ್ಕಾರ ಹಾಕುವುದಾಗಿ ಗ್ರಾಮಸ್ಥರು ಉಪವಿಭಾಗಾಧಿಕಾರಿಗಳಾದ ವಿಜಯ್ ಕುಮಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸತ್ಯಪ್ಪ ಮಾತನಾಡಿ, ಹನಗೋಡು ಹೋಬಳಿಯ ಬುಂಡೆಬೆಸ್ತ ಕಾಲೋನಿಯಲ್ಲಿ ಮೂಲ ಸೌಕರ್ಯಗಳಿಲ್ಲದೆ ಗ್ರಾಮಸ್ಥರು ಬಹಳ ತೊಂದರೆಯಲ್ಲಿದ್ದಾರೆ. ಗ್ರಾಮದಲ್ಲಿ ಸುಮಾರು 600 ಅಲೆಮಾರಿ ಕುಟುಂಬಗಳು ವಾಸವಾಗಿದ್ದು, ಸುಮಾರು 2000ಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು, ದಿವಂಗತ ಮಾಜಿ ಮುಖ್ಯಮಂತ್ರಿಗಳಾದ ಡಿ. ದೇವರಾಜ ಅರಸು ಅವರು ಬುಂಡೆಬೆಸ್ತ ಕಾಲೋನಿಯಲ್ಲಿ ವಾಸ ಮಾಡಲು ಅವಕಾಶ ಮಾಡಿಕೊಟ್ಟಿದ್ದರು ಎಂದರು.

ಗ್ರಾಮದಲ್ಲಿ ಪ್ರಮುಖ ಬೇಡಿಕೆಗಳಾಗಿ ಬುಂಡೆಬೆಸ್ತರ ಕಾಲೋನಿ ಗ್ರಾಮಕ್ಕೆ ಸ್ಮಶಾನ ಮಂಜೂರು ಮಾಡಿಕೊಡಬೇಕು. ಗ್ರಾಮದಲ್ಲಿಯೇ ಪ್ರತ್ಯೇಕ ಮತಗಟ್ಟೆ ನಿರ್ಮಿಸಬೇಕು. ನ್ಯಾಯಬೆಲೆ ಅಂಗಡಿ ಸಬ್ ಸೆಂಟರ್ ಸ್ಥಾಪಿಸಬೇಕು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮುಚ್ಚಲ್ಪಟ್ಟಿರುವ ವಸತಿ ಶಾಲೆ ಮತ್ತೆ ತೆರೆಯಬೇಕು. ಸಮುದಾಯ ಭವನಕ್ಕೆ ಖಾಲಿ ನಿವೇಶನ ಮಂಜೂರಾಗಿದ್ದು, ಸರ್ಕಾರದಿಂದ 50 ಲಕ್ಷ ರೂ.ಗಳ ಅನುದಾನ ಮಂಜೂರು ಮಾಡಿಸಿಕೊಡಬೇಕು. ಅಲ್ಲದೆ ಮೂಲ ಸೌಕರ್ಯಗಳನ್ನು ಸಹ ಒದಗಿಸಿಕೊಡಬೇಕೆಂದು ಗ್ರಾಮಸ್ಥರು ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಅಲೆಮಾರಿ ಸಂಘ ಹಾಗೂ ಅರೆ ಅಲೆಮಾರಿ ಜನಾಂಗಗಳ ಒಕ್ಕೂಟದ ಗೌರವಾಧ್ಯಕ್ಷ ರಾಮಕೃಷ್ಣ ಪಿ.ವಿ, ಅಧ್ಯಕ್ಷ ಅಣ್ಣಯ್ಯ, ಉಪಾಧ್ಯಕ್ಷ ರಮೇಶ್, ಕಾರ್ಯದರ್ಶಿ ಶಿವಣ್ಣ ಸಂಘಟನಾ ಕಾರ್ಯದರ್ಶಿ ಪಿ.ಆರ್. ಸಣ್ಣಸ್ವಾಮಿ, ಕೋಶಾಧಿಕಾರಿ ಶೇಖರ ಪೂಜಾರಿ, ಕಾರ್ಯಾಧ್ಯಕ್ಷರುಗಳಾದ ಸುರೇಶ್, ಗುಂಡು, ಮುತ್ತಪ್ಪ, ಪ್ರಧಾನ ಸಂಚಾಲಕರಾದ ರಾಜು, ಶಿವಣ್ಣ.ಎ, ಕಾರ್ಯಕಾರಿ ಸಮಿತಿ ಸದಸ್ಯ ಮಣಿ ಹಾಗೂ ಇತರರು ಹಾಜರಿದ್ದರು.

ಆಹಾರ ಪರವಾನಗಿ ಇಲ್ಲದ ಹೋಟೆಲ್, ಬೇಕರಿಗಳಿಗೆ ಆಹಾರ ಸುರಕ್ಷತಾ ಅಧಿಕಾರಿಗಳ ತಂಡ ದಿಢೀರ್ ಭೇಟಿ

ಪರವಾನಗಿ ಪಡೆಯುವಂತೆ, ಸ್ವಚ್ಛತೆ ಕಾಪಾಡುವಂತೆ ನೋಟೀಸ್



ಹೆಚ್.ಡಿ.ಕೋಟೆ ತಾಲೂಕು ಆಹಾರ ಸುರಕ್ಷತಾ ಅಧಿಕಾರಿ ರವಿಕುಮಾರ್ ಅಣ್ಣೂರು ಗ್ರಾಮಕ್ಕೆ ದಿಢೀರ್ ಭೇಟಿ ನೀಡಿದರು.

ಹೆಚ್.ಡಿ.ಕೋಟೆ, ಜ.1– ತಾಲೂಕಿನ ಆಹಾರ ಸುರಕ್ಷತಾ ಅಧಿಕಾರಿಗಳಾದ ಟಿ. ರವಿಕುಮಾರ್ ಮತ್ತು ತಂಡದವರು ಆಹಾರ ಪರವಾನಗಿ ಇಲ್ಲದ ಅಣ್ಣೂರು ಗ್ರಾಮದ ಆಹಾರ ಹೋಟೆಲ್, ಬೇಕರಿ ಮತ್ತು ತಿಂಡಿ ಆಹಾರ ಪದಾರ್ಥಗಳನ್ನು ತಯಾರಿಸುವ ಗೋಡೌನ್‌ಗಳಿಗೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿ, ಪರವಾನಗಿ ಪಡೆದು ಸ್ವಚ್ಛತೆ ಕಾಪಾಡುವಂತೆ ನೋಟಿಸ್ ನೀಡಿದರು.

ಆಹಾರ ಸುರಕ್ಷತಾ ಅಧಿಕಾರಿ ರವಿಕುಮಾರ್ ಮಾತನಾಡಿ, ಮಾಲೀಕರು ಮತ್ತು ವ್ಯಾಪಾರಸ್ಥರು ಗ್ರಾಹಕರಿಗೆ ಉತ್ತಮವಾದ ಮತ್ತು ಶುದ್ಧವಾದ ಒಳ್ಳೆ ಗುಣಮಟ್ಟದ ತಿಂಡಿ ಪದಾರ್ಥ ಮತ್ತು ಆಹಾರವನ್ನು ನೀಡಬೇಕು. ಯಾವುದೇ ಕಾರಣಕ್ಕೂ ನಿನ್ನೆ –ಮೊನ್ನೆ ತಯಾರಿಸಿರುವ ತಿಂಡಿ ಪದಾರ್ಥಗಳು, ಆಹಾರವನ್ನು ನೀಡಬಾರದು. ತಿಂಡಿ ಮತ್ತು ಆಹಾರ ಪದಾರ್ಥಗಳನ್ನು ಮಾಡಿದ ನಂತರ ಅವುಗಳನ್ನು ಪ್ಲಾಸ್ಟಿಕ್ ಕವರ್‌ನಿಂದ ಮುಚ್ಚಿಡಬೇಕು. ಯಾವುದೇ ಕಾರಣಕ್ಕೂ ನೊಣ ಮತ್ತು ಇನ್ನಿತರ ಕೀಟಗಳು ಕೂರದ ಹಾಗೆ ನೋಡಿಕೊಳ್ಳಬೇಕು ಮತ್ತು ಆಗಾಗ ಜಾಗವನ್ನು ಫಿನಾಯಿಲ್‌ನಿಂದ ಸ್ವಚ್ಛಗೊಳಿಸಬೇಕು ಎಂದರು. ಘನತ್ಯಾಜ್ಯಗಳನ್ನು ಗ್ರಾಮ ಪಂಚಾಯಿತಿಯವರು ನೇಮಿಸಿರುವ ವಾಹನಕ್ಕೆ ಮಾತ್ರ ನೀಡಬೇಕು. ರಸ್ತೆ ಬದಿ, ಕೆರೆ, ಕಟ್ಟೆ ನದಿಗಳಲ್ಲಿ ಬಿಸಾಡಬಾರದು ಹಾಗೂ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಎಲ್ಲಾ ಹೋಟೆಲ್ ಮತ್ತು ಬೇಕರಿ ಮಾಲೀಕರು ಮತ್ತು ವ್ಯಾಪಾರಸ್ಥರು ವಾರದೊಳಗೆ ಕಡ್ಡಾಯವಾಗಿ ಆಹಾರ ಪರವಾನಗಿ ಪಡೆಯಬೇಕು. ಇಲ್ಲದಿದ್ದರೆ ನಿಮ್ಮ ಮೇಲೆ ಶಿಸ್ತು ಕ್ರಮ ಜರುಗಿಸಲಾಗುತ್ತದೆ ಎಂದು ಸ್ಥಳದಲ್ಲೇ ಸೂಚಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಂತೋಷ್, ಗ್ರಾಮ ಪಂಚಾಯಿತಿ ಸದಸ್ಯ ಮಹೇಶ್, ಚೌಡನಾಯ್ಕ, ಮುಖಂಡರಾದ ಸುರೇಶ್, ಆರೋಗ್ಯ ನಿರೀಕ್ಷಣಾಧಿಕಾರಿ ರವಿರಾಜ್, ಗ್ರಾಪಂ ಸಿಬ್ಬಂದಿ ವರ್ಗದವರು, ಗ್ರಾಮದ ಮುಖಂಡರು, ಇನ್ನಿತರರು ಹಾಜರಿದ್ದರು.

ಕ್ಯಾಲೆಂಡರ್ ಬಿಡುಗಡೆ



ಕಂಪಲಾಪುರ ಕೊಪ್ಪಲು ಹಾಲಿನ ಡೇರಿಯ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಯಿತು. ಅಧ್ಯಕ್ಷ ಚಂದ್ರು, ಸಿಇಓ ಲೋಕೇಶ್, ನಿರ್ದೇಶಕರಾದ ಕೆ.ಗೋಪಾಲ್, ಕೆ.ಎಂ.ಲಕ್ಷ್ಮಣ್, ಕೆ.ಎನ್.ಗಿರೀಶ್, ಕುಮಾರ್, ಹಾಲುಪರೀಕ್ಷಕ ಮಂಜು ಇದ್ದರು.

ಕೋರೆಗಾಂವ್ ವಿಜಯೋತ್ಸವ



ಮೂಗೂರಿನ ಡಾ.ಬಿ.ಆರ್.ಅಂಬೇಡ್ಕರ್ ಬಡಾವಣೆಯ ಜ್ಞಾನ ಸೂರ್ಯ ಡಾ.ಅಂಬೇಡ್ಕರ್ ಯುವಕ ಸಂಘ ವತಿಯಿಂದ 207ನೇ ಐತಿಹಾಸಿಕ ಭೀಮ ಕೋರೆಂಗಾವ್ ವಿಜಯೋತ್ಸವದ ಅಂಗವಾಗಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಯುವ ಸಮೂಹ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಕ್ಯಾಲೆಂಡರ್ ಬಿಡುಗಡೆ



ಕಂಪಲಾಪುರ ಪಿಎಸಿಎಸ್ಎನ್‌ನಲ್ಲಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಅಧ್ಯಕ್ಷ ಸಂತೋಷ್, ಉಪಾಧ್ಯಕ್ಷ ತಮ್ಮಯ್ಯ, ಸಿಇಓ ಹರ್ಷ, ನಿರ್ದೇಶಕರಾದ ಕುಮಾರ್, ಲಕ್ಷ್ಮಣ್, ರವಿ, ಮಾದೇಗೌಡ, ಮಹದೇವ, ಜೆಪಿ.ಗೌಡ, ನಾಗೇಗೌಡ, ಮಣಿಮಹೇಶ್, ಭಾಗ್ಯರಾಜೇಗೌಡ ಸಿಬ್ಬಂದಿ ಇದ್ದರು.

ವಾಹನಗಳ ಬಹಿರಂಗ ಹರಾಜು

ಹೆಚ್.ಡಿ.ಕೋಟೆ, ಜ.1– ತಾಲೂಕಿನ ಅಬಕಾರಿ ನಿರೀಕ್ಷಕರ ಕಚೇರಿಯಲ್ಲಿ ವಿವಿಧ ಅಬಕಾರಿ ಪ್ರಕರಣಗಳಲ್ಲಿ ವಶಪಡಿಸಿಕೊಂಡಿರುವ 16 ವಾಹನಗಳ ಹರಾಜು ಪ್ರಕ್ರಿಯೆ ನಡೆಸಲಾಗುವುದು. ಆಸಕ್ತರು ಜ.8ರ ಬೆಳಗ್ಗೆ 11 ಗಂಟೆಗೆ ವಲಯ ಕಚೇರಿಯ ಆವರಣದಲ್ಲಿ ಹಾಜರಿರಬೇಕೆಂದು ಅಬಕಾರಿ ನಿರೀಕ್ಷಕ ಎಸ್. ಶಿವರಾಜ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ವರ್ಷವಾದರೂ ಕಾರ್ಮಿಕರ ಬೇಡಿಕೆ ಈಡೇರಿಸಲಿ ಎಂದು ಮನವಿ

ತಿ.ನರಸೀಪುರ, ಜ.1– ಸರ್ಕಾರ ಈ ನೂತನ ವರ್ಷದಲ್ಲಾದರೂ ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವ ಮೂಲಕ ಕಾರ್ಮಿಕರನ್ನು ರಕ್ಷಿಸುವಂತಾಗಬೇಕು ಎಂದು ಮೈಸೂರು ಜಿಲ್ಲಾ ಕಾರ್ಮಿಕ ಘಟಕ ಉಪಾಧ್ಯಕ್ಷ ಬೈರಾಪುರ ಕೆ.ರಾಜು ಆಗ್ರಹಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡುತ್ತ, ಕಾರ್ಮಿಕರಿಗೆ ಹೊಸ ವರ್ಷದ ಶುಭಾಶಯಗಳನ್ನು ತಿಳಿಸಿ ಮಾತನಾಡುತ್ತಿದ್ದ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಮಿಕರ ವಿರೋಧಿ ನಿರ್ಧಾರಗಳನ್ನು ಕೈಗೊಂಡು ಅವರುಗಳ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ ಎಂದರು. ಎಷ್ಟೋ ಕಾರ್ಮಿಕರಿಗೆ ಸರಿಯಾದ ವೇತನ ಸಿಗುತ್ತಿಲ್ಲ. ಮೂಲಭೂತ ಸೌಲಭ್ಯವಿಲ್ಲದೆ ಹೊಟ್ಟೆಪಾಡಿಗೆ ಬೇರೆ ದಾರಿಕಾಣದೆ ದುಡಿಯುತ್ತಿದ್ದು, ಖಾಸಗಿ ಕಂಪನಿಗಳು ಕಾರ್ಮಿಕರ ನೀತಿ ಮತ್ತು ಕಾನೂನುಗಳನ್ನು ಗಾಳಿಗೆ ತೂರಿ ಶೋಷಣೆ ನಡೆಸುತ್ತಿದೆ ಎಂದು ರಾಜು ವಿಷಾದ ವ್ಯಕ್ತಪಡಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಮಿಕರ ಸ್ಥಿತಿಯನ್ನು ಅರಿತು ಅವರುಗಳ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿರುವ ಅವರು ಸರ್ಕಾರ ಈಗಲೂ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಸ್ವರೂಪದ ಹೋರಾಟಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ಬೇಡಿಕೆ ಈಡೇರಿಕೆಗೆ ಇದುವರೆಗೂ ನಡೆಸಿದ ಹೋರಾಟಗಳು ಫಲ ನೀಡದ ಕಾರಣ ರಾಜ್ಯದ ಎಲ್ಲಾ ಕಾರ್ಮಿಕ ಸಂಘಟನೆ ಗಳು ಒಗ್ಗೂಡಿ ನಿರ್ಣಯ ಕೈಗೊಂಡು ಕಾರ್ಮಿಕರ ಪರ ಹೋರಾಟ ನಡೆಸಲು ಚಿಂತನೆ ನಡೆಸಲಾಗುತ್ತಿದೆ ಎಂದು ಅವರು ಹೇಳಿದರು. ಈ ವೇಳೆ ಕಾರ್ಮಿಕ ಸಂಘಟನೆಯ ಮುಖಂಡರು ಉಪಸ್ಥಿತರಿದ್ದರು.

ಅಮರಶಿಲ್ಪಿ ಜಕಣಾಚಾರಿ ಎಲ್ಲಾ ಕಾಲಕ್ಕೂ ಚಿರಸ್ಮರಣೀಯರು

ತಿ.ನರಸೀಪುರದಲ್ಲಿ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನ ಆಚರಣೆ



ಜಕಣಾಚಾರಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಲಾಯಿತು.

ತಿ.ನರಸೀಪುರ, ಜ.1– ವಾಸ್ತುಶಿಲ್ಪ ಕಲೆಗಾಗಿ ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟ ಅಮರಶಿಲ್ಪಿ ಜಕಣಾಚಾರಿಯವರು ಎಲ್ಲಾ ಕಾಲಮಾನಕ್ಕೂ ಚಿರಸ್ಮರಣೀಯರಾಗಿದ್ದಾರೆ ಎಂದು ತಾಲೂಕು ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿದ್ದಪ್ಪಾಜಿ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಸರಳ ಕಾರ್ಯಕ್ರಮದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಜಕಣಾಚಾರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಅಮರಶಿಲ್ಪಿ ಜಕಣಾಚಾರಿಯವರು ದೇಶಾದ್ಯಂತ ನಿರ್ಮಿಸಿರುವ ದೇವಾಲಯಗಳಲ್ಲಿನ ಮನಸೂರೆಗೊಳ್ಳುವ ಶಿಲ್ಪಕಲಾ ಸೌಂದರ್ಯದಿಂದ ಇಡೀ ವಿಶ್ವವೇ ಭಾರತದತ್ತ ತಿರುಗಿ ನೋಡುವಂತಾಗಿದೆ. ಶಿಲ್ಪಕಲೆಗೆ ಹೆಸರಾದ ಸೋಮನಾಥಪುರ, ಬೇಲೂರು, ಹಳೇಬೀಡು ಸೇರಿದಂತೆ ಹಲವಾರು ದೇವಾಲಯಗಳು ಸಹಸ್ರಾರು ದೇಶ–ವಿದೇಶಿ ಪ್ರವಾಸಿಗರ ಕಣ್ಮನಗಳನ್ನು ಸೂಜಿಗಲ್ಲಿನಂತೆ ಸೆಳೆದಿವೆ. ಕರ್ನಾಟಕ ಶಿಲ್ಪಕಲೆಯ ತವರೂರು ಎನಿಸಲು ಅಮರಶಿಲ್ಪಿ ಜಕಣಾಚಾರಿ ಕೈಚಳಕವೇ ಕಾರಣವಾಗಿದೆ. ಜಕಣಾಚಾರಿ ಅವರು ಎಂದೆಂದಿಗೂ ಅಜರಾಮರರಾಗಿದ್ದಾರೆ ಎಂದರು.

ಮೂಲ ಕಸುಬನ್ನೇ ವೃತ್ತಿಯಾಗಿಸಿಕೊಂಡಿರುವ ವಿಶ್ವಕರ್ಮ ಸಮುದಾಯದ ಅಭಿವೃದ್ಧಿಗಾಗಿ ಸರ್ಕಾರ ಇನ್ನೂ ಹೆಚ್ಚಿನ ಅನುದಾನ ನೀಡಬೇಕು. ದೊರೆಯುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು

ಅವರು ಜಕಣಾಚಾರಿಯವರು ಸಾಂಸಾರಿಕ ಜೀವನವನ್ನು ಬದಿಗಿಟ್ಟು ಹಲವು ಸುಂದರ ದೇವಾಲಯಗಳನ್ನು ನಾಜೂಕಾಗಿ ನಿರ್ಮಿಸಿದ ದಂತಕತೆಯಾಗಿದ್ದಾರೆ. ತಮ್ಮ ಬದುಕನ್ನು ಶಿಲ್ಪಕಲೆಯ ಉನ್ನತಿಗಾಗಿ ಮೀಸಲಿಟ್ಟ ಮಹಾಪುರುಷ ಜಕಣಾಚಾರಿ ಆಗಿದ್ದಾರೆ. ಅವರ ಸಾಧನೆಯನ್ನು ಸ್ಮರಿಸುವ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ವಿಶ್ವಕರ್ಮ ಸಂಘದ ಉಪಾಧ್ಯಕ್ಷ ಬಸವರಾಜಾಚಾರ್, ಕಾರ್ಯದರ್ಶಿ ಮಹೇಶ್ ಕುಮಾರ್, ಖಜಾಂಚಿ ರವಿ, ನಿರ್ದೇಶಕರಾದ ಕೆಂಪಾಚಾರ್, ಕರಿಯಪ್ಪ, ಚೆಲುವಾಚಾರ್, ಕುಮಾರ್, ಶ್ರೀನಿವಾಸಾಚಾರ್, ಕಾಗೇಪುರ ಸಿದ್ದಪ್ಪಾಜಿ ಸೇರಿದಂತೆ ಮತ್ತಿತರರಿದ್ದರು.

ನಂ.ಗೂಡಲ್ಲಿ ಅಮರಶಿಲ್ಪಿ ಜಕಣಾಚಾರಿ ಜಯಂತಿ ಆಚರಣೆ



ನಂಜನಗೂಡಲ್ಲಿ ಜಕಣಾಚಾರಿ ಜಯಂತಿ ಆಚರಿಸಲಾಯಿತು.

ನಂಜನಗೂಡು, ಜ.1– ಅಮರ ಶಿಲ್ಪಿ ಜಕಣಾಚಾರಿ ಅವರು ದೇಶದ ಕಲೆ, ವಾಸ್ತು ಶಿಲ್ಪಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ ಎಂದು ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಹೇಳಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಏರ್ಪಡಿಸಲಾಗಿದ್ದ ಅಮರ ಶಿಲ್ಪಿ ಜಕಣಾಚಾರಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅಮರಶಿಲ್ಪಿ ಜಕಣಾಚಾರಿ ಅವರು ನಿರ್ಮಿಸಿರುವ ಬೇಲೂರು, ಹಳೇಬೀಡು, ದೇವಾಲಯಗಳು ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿರುವುದು ದೇಶದ ವಾಸ್ತುಶಿಲ್ಪಕ್ಕೆ ಸಾಕ್ಷಿಯಾಗಿದೆ. ಅಮರ ಶಿಲ್ಪಿ ಜಕಣಾಚಾರಿ ಅವರು ನಿರ್ಮಿಸಿರುವ ಕಲ್ಲಿನ ಪ್ರತಿಮೆಗಳ ಮೂರ್ತಿಗಳು ಪ್ರೇಕ್ಷಕರನ್ನು ನಿಬ್ಬೆರಗಾಗಿಸುವಂತೆ ಮಾಡಿದೆ, ಈ ಕಲೆ, ವಾಸ್ತುಶಿಲ್ಪ ವೈಭವ ನಮ್ಮ ಮುಂದಿನ ಪೀಳಿಗೆಗೂ ತಿಳಿಸುವಂತಾಗಬೇಕು ಎಂದರು.

ಮುಖ್ಯ ಭಾಷಣಕಾರರಾಗಿದ್ದ ವಿನಯ್ ವಿಶ್ವಕರ್ಮ ಮಾತನಾಡಿ, ಅಮರಶಿಲ್ಪಿ ಜಕಣಾಚಾರಿ ರವರ ಕಲೆ, ಶಿಲ್ಪಕಲೆ ಇತಿಹಾಸ ಇಂದಿನ ಪೀಳಿಗೆಗೆ ತಿಳಿದಿಲ್ಲ. ಆದ್ದರಿಂದ ಮುಂದಿನ ಪೀಳಿಗೆಗೂ ಅವರ ಇತಿಹಾಸ ತಿಳಿಯುವಂತೆ ಆಗಲು ಪಠ್ಯಪುಸ್ತಕಗಳಲ್ಲಿ ಅವರ ಜೀವನ ಚರಿತ್ರೆಯನ್ನು ಸೇರಿಸಬೇಕು ಎಂದರು. ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಚಂದ್ರು ಮಾತನಾಡಿ, ವಿಶ್ವಕರ್ಮ ಸಮಾಜ ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಬಹಳ ಹಿಂದುಳಿದಿದೆ. ಸಂಘಟನೆಯ ಕೊರತೆಯಿಂದಾಗಿಯೂ ಸಹ ಜನಾಂಗಕ್ಕೆ ರಾಜಕೀಯ ಸ್ಥಾನ ಮಾನಗಳು ದೊರಕುತ್ತಿಲ್ಲ. ಸಮಾಜದ ಬಂಧುಗಳು ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕಿಸಬೇಕು ಎಂದರು.

ಸಮಾರಂಭದಲ್ಲಿ ತಾಲೂಕು ವಿಶ್ವಕರ್ಮ ಸಮಾಜದ ಗೌರವಾಧ್ಯಕ್ಷ ಸಿದ್ದಾಚಾರ್, ಉಪಾಧ್ಯಕ್ಷ ಶ್ರೀಕಂಠ, ಮುಖಂಡರಾದ ಅನಂತ್, ಬಸವರಾಜು, ಮಲ್ಲೇಶ, ಮಂಜು, ನಾಗಣ್ಣ, ಪಾಪಣ್ಣ, ಶಶಿ, ಪುಟ್ಟಣ್ಣ, ಗುರು, ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್, ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ನಷ್ಟದಲ್ಲಿದ್ದ ಕೆಎಸ್ಆರ್‌ಟಿಸಿ ಮೈಸೂರು ವಿಭಾಗಕ್ಕೆ 'ಶಕ್ತಿ'



9 ತಿಂಗಳ ಅವಧಿಯಲ್ಲಿ 2.30 ಕೋಟಿ ಲಾಭ

ಮೈಸೂರು, ಜ.1(ಬಿಎಲ್‌ಯು)– ಪ್ರತಿ ವರ್ಷ ನಷ್ಟದಿಂದ ತತ್ತರಿಸಿದ್ದ ಕೆಎಸ್ ಆರ್‌ಟಿಸಿ ಮೈಸೂರು ಗ್ರಾಮಾಂತರ ವಿಭಾಗವು 'ಶಕ್ತಿ ಯೋಜನೆ'ಯಿಂದ ಶಕ್ತಿ ವರ್ಧಿಸಿ ಕೊಂಡಿದೆ.

ರಾಜ್ಯ ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆ ಅನುಷ್ಠಾನಗೊಳ್ಳುವ ಮುನ್ನ ಕೆಎಸ್‌ಆರ್‌ಟಿಸಿ ಮೈಸೂರು ಗ್ರಾಮಾಂತರ ವಿಭಾಗ ಪ್ರತಿ ವರ್ಷ 4 ರಿಂದ 5 ಕೋಟಿ ನಷ್ಟದಲ್ಲಿರುತ್ತಿತ್ತು. ಸರ್ಕಾರದ ಸಾರಿಗೆ ವ್ಯವಸ್ಥೆ ಸೇವಾ ವಲಯ ವ್ಯಾಪ್ತಿಗೆ ಬರುವ ಕಾರಣ ನಷ್ಟದಲ್ಲಿದ್ದರೂ ಜನರಿಗೆ ಸೇವೆ ಕಲ್ಪಿಸುವ ದೃಷ್ಟಿಯಿಂದ ನಷ್ಟದಲ್ಲಿಯೇ ಬಸ್‌ಗಳನ್ನು ಓಡಿಸುವ ಅನಿವಾರ್ಯತೆ ಇತ್ತು.

ಆಟೋ, ಕಾರು, ದ್ವಿಚಕ್ರ ವಾಹನಗಳ ನಡುವೆ ಜನರು ಕೆಎಸ್‌ಆರ್‌ಟಿಸಿಗಳತ್ತ ಮುಖ ಮಾಡಿರಲಿಲ್ಲ. ಬಸ್‌ಗಳಿಗಿಂತ ರೈಲು ದರ ಕಡಿಮೆ ಇರುವ ಹಿನ್ನೆಲೆಯಲ್ಲಿ ಹೆಚ್ಚು ಜನರು ರೈಲು ಪ್ರಯಾಣವನ್ನು ಅವಲಂಬಿಸಿದ್ದರು. ಇದರಿಂದ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಸಂಚರಿಸುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿತ್ತು.

ನರ್ಮ್ ಸೇರಿದಂತೆ ಇತರೆ ಅನುದಾನದಿಂದ ಕೆಎಸ್‌ಆರ್‌ಟಿಸಿ ಅಗತ್ಯಕ್ಕಿಂತ ಹೆಚ್ಚಿನ ಬಸ್‌ಗಳನ್ನು ಖರೀದಿಸಿತ್ತು. ಪ್ರಾಯಶಃ ಕರ್ನಾಟಕದ ಸಾರಿಗೆ ವ್ಯವಸ್ಥೆ ದೇಶದಲ್ಲೇ ಅತ್ಯುತ್ತಮ. ಇದರಿಂದ ಕೆಎಸ್‌ಆರ್‌ಟಿಸಿಗೆ ಪ್ರತಿ ವರ್ಷ ಪ್ರಶಸ್ತಿಗಳೂ ಬರುತ್ತಲೇ ಇವೆ. ಆದರೆ ಇತ್ತೀಚೆಗೆ ಬಸ್‌ಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ಕಡಿಮೆಯಾಗುತ್ತಿದೆ.

ಬಸ್‌ಗಳಲ್ಲಿ ಶೇಕಡ 50 ರಷ್ಟು ಪ್ರಯಾಣಿಕರಿದ್ದರೆ ಸಂಚರಿಸಬಹುದೆಂಬ ನಿಯಮವಿದೆ. ಇದರಿಂದ ಲಾಭ ಬರದಿದ್ದರೂ ನಿರ್ವಹಣೆಗಂತೂ ಮೋಸ ಇರಲಿಲ್ಲ. ಆದರೆ ಬಹಳಷ್ಟು ಬಸ್‌ಗಳಲ್ಲಿ ಏಳೆಂಟು ಪ್ರಯಾಣಿಕರು ಇರುತ್ತಿದ್ದರು. ಇದರಿಂದ ಕೆಎಸ್‌ಆರ್‌ಟಿಸಿ ಮೈಸೂರು ಸೇರಿದಂತೆ ರಾಜ್ಯದ ಬಹಳಷ್ಟು ವಿಭಾಗಗಳು ನಷ್ಟದಲ್ಲಿದ್ದವು.

6.62 ಕೋಟಿ ಪ್ರಯಾಣಿಕರ ಸಂಚಾರ

"ಕೆಎಸ್‌ಆರ್‌ಟಿಸಿ ಮೈಸೂರಿನ ಗ್ರಾಮಾಂತರ ವಿಭಾಗ ಕಳೆದ 9 ತಿಂಗಳ ಅವಧಿಯಲ್ಲಿ 2.30 ಕೋಟಿ ಲಾಭ ಗಳಿಸಿದೆ. ಕಳೆದ ವರ್ಷ ನಷ್ಟದಲ್ಲಿತ್ತು. ಕಳೆದ 9 ತಿಂಗಳ ಅವಧಿಯಲ್ಲಿ ಮೈಸೂರು ಗ್ರಾಮಾಂತರ ವಿಭಾಗದ ಬಸ್‌ಗಳಲ್ಲಿ 6.62 ಕೋಟಿ ಪ್ರಯಾಣಿಕರು ಪ್ರಯಾಣ ಮಾಡಿದ್ದಾರೆ. ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡಿದರೂ ಅವರ ಪ್ರಯಾಣ ದರವನ್ನು ಸರ್ಕಾರ ಪಾವತಿ ಮಾಡುತ್ತಿರುವುದರಿಂದ ಸಹಜವಾಗಿಯೇ ಇದು ಲಾಭದಲ್ಲಿದೆ. ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ಆದರೆ ಪುರುಷ ಪ್ರಯಾಣಿಕರ ಸಂಖ್ಯೆ ಯಥಾಸ್ಥಿತಿಯಲ್ಲಿದೆ.

– ಶ್ರೀನಿವಾಸ್,
ವಿಭಾಗೀಯ ನಿಯಂತ್ರಣಾಧಿಕಾರಿ,
ಕೆಎಸ್‌ಆರ್‌ಟಿಸಿ, ಮೈಸೂರು.

ಕಳೆದ ವರ್ಷ ಕೆಎಸ್‌ಆರ್‌ಟಿಸಿಯ ಮೈಸೂರು ಗ್ರಾಮಾಂತರ ವಿಭಾಗವು ಸುಮಾರು 4 ಕೋಟಿ ನಷ್ಟ ಅನುಭವಿಸಿತ್ತು. ಹಿಂದಿನ ಹಲವು ವರ್ಷಗಳಲ್ಲಿ ಕೂಡ ಇದೇ ರೀತಿ ನಷ್ಟ ಕೆಎಸ್‌ಆರ್ ಟಿಸಿಯನ್ನು ಬೆಂಬಿಡದೆ ಕಾಡುತ್ತಿತ್ತು.

ಆದರೆ ಈಗ ರಾಜ್ಯ ಸರ್ಕಾರದ ಶಕ್ತಿ ಯೋಜನೆ ಕೆಎಸ್‌ಆರ್‌ಟಿಸಿಗೆ ಮರು ಜೀವ ನೀಡಿದೆ. ಪ್ರತಿಯೊಬ್ಬ ಮಹಿಳೆಗೂ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಿರುವ ಕಾರಣ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಸಂಚರಿಸುವ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ. ಉಚಿತ ಪ್ರಯಾಣ ಇರುವ ಕಾರಣ ಆಟೋ, ಕಾರು, ದ್ವಿಚಕ್ರ ವಾಹನಗಳಲ್ಲಿ ಹೋಗುತ್ತಿದ್ದವರು ಈಗ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಅಲ್ಲದೆ ರೈಲು ಪ್ರಯಾಣ ಬಿಟ್ಟು ಉಚಿತವಾಗಿ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಇದರಿಂದ ಯಾವುದೇ ಮಾರ್ಗದ ಕೆಎಸ್‌ಆರ್‌ಟಿಸಿ ಬಸ್‌ಗಳು ತುಂಬಿ ತುಳುಕುತ್ತವೆ.

ಉಚಿತ ಪ್ರಯಾಣ ಇರುವ ಕಾರಣ ಧರ್ಮಸ್ಥಳ, ಸುಬ್ರಹ್ಮಣ್ಯ ಸೇರಿದಂತೆ ಧಾರ್ಮಿಕ ಯಾತ್ರಾ ಸ್ಥಳಗಳಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗಿದೆ. ಪ್ರವಾಸಿ ಸ್ಥಳಗಳಿಗೆ ಹೋಗುವವರ ಸಂಖ್ಯೆ ದುಪ್ಪಟ್ಟಾಗಿದೆ. ಕಳೆದ ಕೆಲವು ವರ್ಷಗಳಿಂದ ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣವೆಂದರೆ ಮೂಗು ಮುರಿಯುತ್ತಿದ್ದವರು ಈಗ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲೇ ಪ್ರಯಾಣ ಮಾಡುತ್ತಿದ್ದಾರೆ. ಈ ಮೂಲಕ ಉಚಿತ ಪ್ರಯಾಣದ ಸೌಲಭ್ಯವನ್ನು ಮಹಿಳೆಯರು ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದಾರೆ. ಆಧಾರ್ ಕಾರ್ಡ್ ತೋರಿಸಿ ರಾಜ್ಯದ ಯಾವುದೇ ಸ್ಥಳಕ್ಕೆ ಹೋಗಲು ಉಚಿತ ಪ್ರಯಾಣ ಇರುವ ಹಿನ್ನೆಲೆಯಲ್ಲಿ ಇದನ್ನು ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಕೆಎಸ್ ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರು ಪ್ರಯಾಣ ಮಾಡುವ ವೆಚ್ಚವನ್ನು ಸರ್ಕಾರ ಭರಿಸುತ್ತಿದೆ ಹಾಗಾಗಿ ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗವು ಈಗ ಲಾಭದಲ್ಲಿದೆ.

ಕೆಎಸ್‌ಆರ್‌ಟಿಸಿಗೆ 9 ರಾಷ್ಟ್ರೀಯ ಪ್ರಶಸ್ತಿ

ಬೆಂಗಳೂರು, ಜ.1– ಕರ್ನಾಟಕದ ಹೆಮ್ಮೆಯ ಸರ್ಕಾರಿ ಸಾರಿಗೆ ಸಂಸ್ಥೆ ಕೆಎಸ್‌ಆರ್‌ಟಿಸಿಗೆ 9 ರಾಷ್ಟ್ರದ ಮಟ್ಟದ ಪ್ರಶಸ್ತಿಗಳು ಲಭಿಸಿವೆ. 6 AdWorld Showdown ಚಿನ್ನದ ಪ್ರಶಸ್ತಿ, 2 Grow Care India ಹಾಗೂ 1 PRSI ರಾಷ್ಟ್ರೀಯ ಪ್ರಶಸ್ತಿ–2024 ಸಿಕ್ಕಿದೆ.

AdWorld Showdown ಪ್ರಶಸ್ತಿಗಳು

- ಅಶ್ವಮೇಧ ಕ್ಲಾಸಿಕ್ ಬಸ್ಸುಗಳ ಪರಿಚಯ– ಪರಿಣಾಮಕಾರಿ ಸಾರ್ವಜನಿಕ ಸಂಪರ್ಕ ಉಪಕ್ರಮ
- ಅಂಬಾರಿ ಉತ್ಸವ ಬಸ್ ಅತ್ಯುತ್ತಮ ಬ್ರಾಂಡ್ ಅನುಭವ.
- ಅಶ್ವಮೇಧ ಕ್ಲಾಸಿಕ್ ಬಸ್ಸುಗಳು– ಅತ್ಯುತ್ತಮ ಕಾರ್ಪೊರೇಟ್ ಸಂವಹನ ಹಾಗೂ ನಿರ್ವಹಣೆ
- ಪಲ್ಲಕ್ಕಿ ಬಸ್ಸುಗಳ –ಅತ್ಯುತ್ತಮ ಗ್ರಾಹಕ ಸ್ವೀಕೃತಿ
- ಪ್ರತಿಷ್ಠಿತ ಬಸ್ಸು ಸೇವೆಗಳ ಬ್ರಾಂಡಿಂಗ್– ಅತ್ಯುತ್ತಮ ಸಾರ್ವಜನಿಕ ಸಂಪರ್ಕ
- ಅಶ್ವಮೇಧ ಕ್ಲಾಸಿಕ್ ಬಸ್ಸುಗಳು– ವರ್ಷದ ಅತ್ಯುತ್ತಮ ಬ್ರ್ಯಾಂಡ್

ನಿಗಮವು ಅತ್ಯುತ್ತಮ ಪರಿಸರ ನಿರ್ವಹಣೆ ಹಾಗೂ ವಿನೂತನ ಮಾನವ ಸಂಪನ್ಮೂಲ ಯೋಜನೆಗಳ ಅನುಷ್ಠಾನಕ್ಕಾಗಿ 'ಗ್ರೋ ಕೇರ್ ಇಂಡಿಯಾ' ಪ್ರಶಸ್ತಿ ಎರಡು ವಿಭಾಗದಲ್ಲಿ ಪಡೆದಿದೆ. PRSI ರಾಷ್ಟ್ರೀಯ ಪ್ರಶಸ್ತಿಯನ್ನು ನಿಗಮಕ್ಕೆ ಕಾರ್ಪೋರೇಟ್ ಚಿತ್ರ ವಿಭಾಗದಲ್ಲಿ ಲಭಿಸಿರುತ್ತದೆ.

ನಿಗಮಕ್ಕೆ 'AdWorld' ಪ್ರಶಸ್ತಿಗಳನ್ನು ನವದೆಹಲಿಯಲ್ಲಿ, 'ಗ್ರೋ ಕೇರ್ ಇಂಡಿಯಾ' ಪ್ರಶಸ್ತಿಗಳನ್ನು ಗೋವಾದಲ್ಲಿ ಹಾಗೂ 'ಪಿಆರ್‌ಎಸ್‌ಐ' ಪ್ರಶಸ್ತಿಯನ್ನು ರಾಯಪುರದಲ್ಲಿ ಪ್ರದಾನ ಮಾಡಲಾಯಿತು.

ಅಶ್ವಮೇಧ ಬಸ್: ಫೆಬ್ರವರಿಯಲ್ಲಿ ಹೊಸ ವಿನ್ಯಾಸದ ಈ ಬಸ್ ಅನ್ನು 'ಅಶ್ವಮೇಧ' ಎಂಬ ಹೊಸ ಬ್ರಾಂಡ್ ಅಡಿ ಕೆಎಸ್‌ಆರ್‌ಟಿಸಿ ರಸ್ತೆಗೆ ಇಳಿಸಿತ್ತು. 3.42 ಮೀಟರ್ ಎತ್ತರ ಇರುವ 'ಅಶ್ವಮೇಧ' (ಕ್ಲಾಸಿಕ್) ಬಸ್‌ನಲ್ಲಿ 52 ಆಸನಗಳಿದ್ದು, 'ಬಕೆಟ್ ಟೈಪ್' ವಿನ್ಯಾಸವನ್ನು ಹೊಂದಿವೆ.

ವಾಹನದ ಮುಂದಿನ ಮತ್ತು ಹಿಂದಿನ ಗಾಜು ವಿಶಾಲವಾಗಿವೆ. ಕಿಟಕಿ ಫ್ರೇಮ್ ಹಾಗೂ ಮೇಲಿನ ಗಾಜು ದೊಡ್ಡದಾಗಿದ್ದು, ಟಿಂಟೆಡ್ ಗಾಜುಗಳನ್ನು ಹೊಂದಿವೆ. ಲಗೇಜ್ ಕ್ಯಾರಿಯರ್ ಕೂಡ ದೊಡ್ಡದಿದೆ. ಕುಳಿತುಕೊಳ್ಳಲು ಸೀಟು ಸಹ ಚೆನ್ನಾಗಿದೆ. ಮಧ್ಯೆ ನಿಂತುಕೊಳ್ಳಲು ಕೂಡ ವಿಶಾಲ ಜಾಗ ಇರುವುದರಿಂದ ಬೇರೆ ಸಾರಿಗೆ ಬಸ್‌ಗಳ ಬದಲು ಈ ಬಸ್‌ಗಳಲ್ಲಿ ಜನ ಪ್ರಯಾಣಿಸಲು ಆಸಕ್ತಿ ತೋರಿಸುತ್ತಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಐಡೆಂಟಿಟಿ (ತ) + ಐಡೆಂಟಿಟಿ (ಮ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುಐ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪುಷ್ಪ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿಜಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ಔಟ್ ಆಫ್ ಸಿಲಬಸ್(ಕ) + ಪುಷ್ಪ–2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಮ್ಯಾಕ್ಸ್ (ಕ): ಬೆ.9ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12ಕ್ಕೆ, ಸಂ.5.10ಕ್ಕೆ, ರಾ.7.40ಕ್ಕೆ, ಯುಐ (2024) (ಕ): ಮ.2.30ಕ್ಕೆ, ಬರೋಜ್(3ಡಿ) (ಮ): ರಾ.10.10ಕ್ಕೆ.
ಸ್ಕ್ರೀನ್ 2	ಯುಐ (2024) (ಕ): ಬೆ.9.40ಕ್ಕೆ, ಸಂ.4.25ಕ್ಕೆ, ಪುಷ್ಪಾ 2 (ಕ): ಮ.12.30ಕ್ಕೆ, ಬೇಬಿ ಜಾನ್ (ಹಿಂ): ರಾ.7.10ಕ್ಕೆ, ಮಾರ್ಕೊ (ಮ): ರಾ.10.30ಕ್ಕೆ.
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.50ಕ್ಕೆ, ಬೇಬಿ ಜಾನ್ (ಹಿಂ): ಮ.12.55ಕ್ಕೆ, ಸಂ.4.15ಕ್ಕೆ, ಯುಐ (2024) (ಕ): ರಾ.7.35ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.15ಕ್ಕೆ, ಮ.1.10ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಆಕ್ಸಲ್ ತುಂಡು; ರಸ್ತೆ ವಿಭಜಕಕ್ಕೆ ಬಸ್ ಡಿಕ್ಕಿ

ಪ್ರವಾಸಕ್ಕೆ ಬಂದಿದ್ದ ವಿಜಯಪುರ ಜಿಲ್ಲೆ ಮಕ್ಕಳು ಸೇಫ್



ಮಕ್ಕಳನ್ನು ಪ್ರವಾಸಕ್ಕೆ ಕರೆತಂದಿದ್ದ ಬಸ್‌ವೊಂದು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ನಿಂತಿರುವುದು.

ಮೈಸೂರು,ಜ.1(ಪಿಎಂ)– ಆಕ್ಸಲ್ ತುಂಡಾದ ಪರಿಣಾಮ ಖಾಸಗಿ ಬಸ್‌ವೊಂದು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಘಟನೆ ಬೆಂಗಳೂರು ರಸ್ತೆಯ ಓಲ್ಡ್ ಟೋಲ್‌ಗೇಟ್ ಬಳಿ ಬುಧವಾರ ಸಂಜೆ ನಡೆದಿದ್ದು, ಅದೃಷ್ಟವಶಾತ್ ಯಾವುದೇ ಸಾವು ನೋವು ಸಂಭವಿಸಿಲ್ಲ.

ವಿಜಯಪುರ ಜಿಲ್ಲೆಯ ಖಾಸಗಿ ಶಾಲೆಯೊಂದರ ಮಕ್ಕಳು ಪ್ರವಾಸಕ್ಕೆ ಬಂದಿದ್ದ ಬಸ್ (ಕೆ 28, ಸಿ 5976) ಇದಾಗಿದ್ದು, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಬಳಿಕ, ಜಖಂಗೊಂಡು ನಿಂತಿದೆ. ಒಂದು ವೇಳೆ ನಿಯಂತ್ರಣ ಕಳೆದುಕೊಂಡು ಪಲ್ಟಿಯಾಗಿದ್ದರೆ ಅನಾಹುತ ಸಂಭವಿಸುವ ಸಾಧ್ಯತೆ ಹೆಚ್ಚಿತ್ತು. ಅದೃಷ್ಟವಶಾತ್ ಪ್ರೌಢಶಾಲೆಯ 36 ಮಕ್ಕಳು ಸೇರಿದಂತೆ ಬಸ್‌ನಲ್ಲಿದ್ದ ಎಲ್ಲರೂ ಪಾರಾಗಿದ್ದಾರೆ. ಮೈಸೂರಿನ ಪ್ರವಾಸಿ ತಾಣಗಳನ್ನು ವೀಕ್ಷಿಸಿ ವಿಜಯಪುರ ಜಿಲ್ಲೆಗೆ ಮರಳಲು ಬೆಂಗಳೂರಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ಈ ದುರ್ಘಟನೆ ನಡೆದಿದೆ.

ಕೂಡಲೇ ಸ್ಥಳಕ್ಕೆ ಧಾವಿಸಿದ ಎನ್‌ಆರ್ ಸಂಚಾರ ಠಾಣೆ ಪೊಲೀಸರು, ಕೆಎಸ್‌ಆರ್ ಟಿಸಿ ಬಸ್ ವ್ಯವಸ್ಥೆಗೊಳಿಸಿ ಮಕ್ಕಳು ಹಾಗೂ ಶಿಕ್ಷಕರನ್ನು ಕಳುಹಿಸಿಕೊಟ್ಟಿದ್ದಾರೆ. ಬಳಿಕ ಅಪಘಾತದಿಂದ ಜಖಂಗೊಂಡಿದ್ದ ಬಸ್ ಅನ್ನು ಎನ್‌ಆರ್ ಸಂಚಾರ ಠಾಣೆ ಆವರಣಕ್ಕೆ ಸ್ಥಳಾಂತರ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಗೀತಪ್ರಿಯರ ಮನಸೂರೆಗೊಂಡ ದ್ವಂದ್ವ ವಯೋಲಿನ್ ವಾದನ



ಖ್ಯಾತ ವಯೋಲಿನ್ ವಾದಕ ವಿದ್ವಾನ್ ಮಹದೇವಪ್ಪ ಅವರ ಸ್ಮರಣಾರ್ಥ ವಿದ್ವಾನ್ ಡಾ.ಎಂ.ಮಂಜುನಾಥ್, ವಿದ್ವಾನ್ ಎಂ.ನಾಗರಾಜ್ ನೇತೃತ್ವದಲ್ಲಿ ಪ್ರಸ್ತುತಪಡಿಸಿದ ದ್ವಂದ್ವ ವಯೋಲಿನ್ ವಾದನ ಪ್ರೇಕ್ಷಕರ ಗಮನ ಸೆಳೆಯಿತು.


ಮೈಸೂರು, ಜ.1(ಎಸ್‌ಪಿಎನ್)– ಖ್ಯಾತ ವಯೋಲಿನ್ ವಾದಕರಾದ ವಿದ್ವಾನ್ ಎಂ.ನಾಗರಾಜ್, ಡಾ.ಎಂ.ಮಂಜುನಾಥ್ ನೇತೃತ್ವದಲ್ಲಿ ದ್ವಂದ್ವ ವಯೋಲಿನ್ ವಾದನ ಬುಧವಾರ ಜರುಗಿತು.

ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜು ಆವರಣದ ನವಜ್ಯೋತಿ ಸಭಾಂಗಣದಲ್ಲಿ ಹಿರಿಯ ಕಲಾವಿದ ಮಹದೇವಪ್ಪ ಅವರ ಸ್ಮರಣಾರ್ಥ ನಡೆದ ದ್ವಂದ್ವ ವಯೋಲಿನ್ ವಾದನದ ಪಕ್ಕವಾದ್ಯದಲ್ಲಿ ವಿದ್ವಾನ್ ಅನಂತ್ ಆರ್. ಕೃಷ್ಣನ್ ಮೃದಂಗ, ವಿದ್ವಾನ್ ಓಜಸ್ ಆದಿತ್ಯ ತಬಲ ನುಡಿಸಿ, ಮೆರುಗು ತಂದರಲ್ಲದೆ, ವಿವಿಧ ರಾಗ ಪಾಲಿಕೆಯಲ್ಲಿ ಡಾ.ಎಂ. ಮಂಜುನಾಥ್, ಎಂ.ನಾಗರಾಜ್ ನೇತೃತ್ವದಲ್ಲಿ ಪ್ರಸ್ತುತ ಪಡಿಸಿದ ವಯೋಲಿನ್ ವಾದನ ಸಂಗೀತಪ್ರಿಯರನ್ನು ತಲೆದೂಗಿಸಿತು.

ಇದಕ್ಕೂ ಮುನ್ನ ಹಿರಿಯ ಕಲಾವಿದ ಪ್ರೊ.ರಾಮಮೂರ್ತಿ ರಾವ್ ಮಾತನಾಡಿ, ಖ್ಯಾತ ವಯೋಲಿನ್ ವಾದಕ ಎಸ್. ಮಹದೇವಪ್ಪ ಅವರು, ಬಾಲ್ಯದಲ್ಲಿ ಬೇಗನೆ ಶಾಸ್ತ್ರೀಯ ಸಂಗೀತ ಕಲಿಯಲಾರಂಭಿಸಿದರು. ಜತೆಗೆ ಕಂಪನಿ ನಾಟಕಗಳಲ್ಲೂ ಅಭಿನಯಿಸಿದರು. ಕೊಳ್ಳೇಗಾಲದ ನಾರಾಯಣಸ್ವಾಮಿ ಅವರಿಂದ ಶಾಸ್ತ್ರೀಯ ಹಾಡುಗಾರಿಕೆ, ಪಿಟೀಲಿನಲ್ಲಿ ಪ್ರಾಥಮಿಕ ತರಬೇತಿ ಪಡೆದರು. ಬಳಿಕ ಟಿ. ಚೌಡಯ್ಯ ಅವರ ಸಹೋದರ ಟಿ.ಪುಟ್ಟಸ್ವಾಮಯ್ಯ ಅವರ ಶಿಷ್ಯತ್ವ ಸ್ವೀಕರಿಸಿದರು ಎಂದರು. ಪಿಟೀಲು ವಾದನದಲ್ಲಿ ಅಪ್ರತಿಮ ಪಾಂಡಿತ್ಯ ಹೊಂದಿದ ಎಸ್. ಮಹದೇವಪ್ಪ ಅವರು, ಮೈಸೂರು ವಿವಿಯಲ್ಲಿ ಪಿಟೀಲು ವಾದನ ವಿಭಾಗದ ಮುಖ್ಯಸ್ಥರಾಗಿ 26 ವರ್ಷಗಳ ಕಾಲ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದರು. ಮೈಸೂರು ಸಹೋದರರರು ಎಂದೇ ಪ್ರಸಿದ್ಧಿ ಹೊಂದಿರುವ ಮೈಸೂರು ನಾಗರಾಜ್– ಮೈಸೂರು ಮಂಜುನಾಥ್ ಅವರಿಗೆ ತಮ್ಮ ಪಾಂಡಿತ್ಯವನ್ನು ಧಾರೆಯೆರೆದರು.

ಮಹದೇವಪ್ಪ ಅವರು ಮೈಸೂರಿನ ಸಂಗೀತ ಕಾರ್ಯಕ್ರಮ, ಸಂಗೀತ ಸಮ್ಮೇಳನಗಳನ್ನು ಆಯೋಜಿಸಿದ್ದರು. ಅಲ್ಲದೆ, ಹಲವಾರು ಸಂಗೀತ ಪೋಷಕ ಸಂಸ್ಥೆಗಳಲ್ಲಿ ಸದಸ್ಯರಾಗಿ, ಮೈಸೂರು ಅರಮನೆ ಪೊಲೀಸ್ ಬ್ಯಾಂಡ್‌ನ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಅಲ್ಲದೆ, ಮಹದೇವಪ್ಪ ಅವರು ಸಂಗೀತ ಕ್ಷೇತ್ರಕ್ಕೆ ನೀಡಿದ ಗಣನೀಯ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸರಕಾರ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ನೀಡಿ ಗೌರವಿಸಿತ್ತು. ಎರಡು ಬಾರಿ ಕರ್ನಾಟಕ ರಾಜ್ಯ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. 2001 ರಲ್ಲಿ ಜೆಎಸ್‌ಎಸ್ ಸಂಗೀತ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸುವ ಜೊತೆಗೆ 'ಸಂಗೀತ ವಿದ್ಯಾ ನಿಧಿ' ಪ್ರಶಸ್ತಿಗೂ ಭಾಜನರಾಗಿದ್ದರು ಎಂದರು.

ಹಿರಿಯ ನಟ ಶಿವರಾಜ್‌ಕುಮಾರ್ ಹೊಸ ವರ್ಷದ ಶುಭಾಶಯ



ನಟ ಶಿವರಾಜಕುಮಾರ್, ಪತ್ನಿ ಗೀತಾ ಶಿವರಾಜಕುಮಾರ್.

ಬೆಂಗಳೂರು, ಜ.1 (ಕೆಎಂಶಿ)– ಕ್ಯಾನ್ಸರ್ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ಸಂಪೂರ್ಣ ಗುಣಮುಖರಾಗಿರುವ ಕನ್ನಡ ಚಿತ್ರರಂಗದ ಹೆಸರಾಂತ ನಟ ಶಿವರಾಜ್ ಕುಮಾರ್ ಅಭಿಮಾನಿಗಳಿಗೆ ಮತ್ತು ಕರ್ನಾಟಕದ ಜನತೆಗೆ ಹೊಸ ವರ್ಷದ ಶುಭಾಶಯ ಕೋರಿದ್ದಾರೆ.

ಅಮೆರಿಕದ ಮಿಯಾಮಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ನಟ ಶಿವರಾಜ್‌ಕುಮಾರ್ ಅವರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು, ಎಲ್ಲ ವೈದ್ಯಕೀಯ ಪರೀಕ್ಷಾ ವರದಿಗಳು ನೆಗೆಟಿವ್ ಬಂದಿದ್ದು, ಸಂಪೂರ್ಣ ಗುಣಮುಖರಾಗಿದ್ದಾರೆ ಎಂದು ವೈದ್ಯರು ಅಧಿಕೃತ ಹೇಳಿಕೆ ನೀಡಿದ್ದಾರೆ. ಈ ವೇಳೆ ಮಾತನಾಡಿದ ನಟ ಶಿವರಾಜ್‌ಕುಮಾರ್, ಅಭಿಮಾನಿ ದೇವರುಗಳ ಹಾರೈಕೆ ಮತ್ತು ಪ್ರಾರ್ಥನೆಯಿಂದ ನಾನು ಗುಣಮುಖನಾಗಿದ್ದೇನೆ, ವೈದ್ಯರ ಅತ್ಯುತ್ತಮ ಚಿಕಿತ್ಸೆ, ಸ್ನೇಹಿತರು, ಸಹ ಕಲಾವಿದರ ಹಾರೈಕೆಯಿಂದ ಚೇತರಿಸಿಕೊಂಡಿದ್ದೇನೆ ಎಂದಿದ್ದಾರೆ. ಕ್ಯಾನ್ಸರ್ ವಿರುದ್ಧದ ಹೋರಾಟದಲ್ಲಿ ಗೀತಾ ಮತ್ತು ಮಗಳಾದ ನಿವೇದಿತಾ ಪಾತ್ರ ಬಹಳ ದೊಡ್ಡದು ಎಂದಿರುವ ಅವರು, ಚಿಕಿತ್ಸಾ ಪ್ರಕ್ರಿಯೆಯಲ್ಲಿ ನೆರವಾದ ಎಲ್ಲರಿಗೂ, ಆಸ್ಪತ್ರೆ ಸಿಬ್ಬಂದಿಗಳಿಗೂ ಧನ್ಯವಾದ ಅರ್ಪಿಸಿದ್ದಾರೆ.

ಹೊಸ ವರ್ಷದ ಆಶೀರ್ವಾದ



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಹೊಸ ವರ್ಷದ ಶುಭಾಶಯ ಕೋರಿದ್ದಲ್ಲದೆ, ಆಶೀರ್ವಾದ ಪಡೆದರು.

ಪಿಂಚಣಿದಾರರಿಗೆ ಸರ್ಕಾರದ ದೊಡ್ಡ ಗಿಫ್ಟ್: ಇಂದಿನಿಂದ ಹೊಸ ಪಿಂಚಣಿ ವ್ಯವಸ್ಥೆ

ನವದೆಹಲಿ, ಜ.1– ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ) ಜನವರಿ 1 ರಿಂದ ಪಿಂಚಣಿ ಪಡೆಯುವ ನಿಯಮಗಳಲ್ಲಿ ಪ್ರಮುಖ ಬದಲಾವಣೆ ಮಾಡಿದೆ. ಇನ್ನು ಮುಂದೆ, ಇಪಿಎಸ್ ಪಿಂಚಣಿದಾರರು ತಮ್ಮ ಪಿಂಚಣಿ ಮೊತ್ತವನ್ನು ದೇಶದ ಯಾವುದೇ ಬ್ಯಾಂಕ್‌ನಿಂದ ಹಿಂಪಡೆಯಬಹುದು.

ಇಪಿಎಫ್‌ಒ ಕೇಂದ್ರೀಕೃತ ಪಿಂಚಣಿ ಪಾವತಿ ವ್ಯವಸ್ಥೆಯನ್ನು (ಸಿಪಿಪಿಎಸ್) ಜಾರಿಗೆ ತಂದಿರುವುದರಿಂದ, ಈ ಹೊಸ ನಿಯಮದೊಂದಿಗೆ ಪಿಂಚಣಿ ಹಿಂಪಡೆಯುವ ಪ್ರಕ್ರಿಯೆಯು ಸಂಪೂರ್ಣವಾಗಿ ಬದಲಾಗುತ್ತದೆ. ಇದು ಪಿಂಚಣಿ ಪಡೆಯುವ ಪ್ರಕ್ರಿಯೆಯನ್ನು ಸುಲಭಗೊಳಿಸುತ್ತದೆ ಮತ್ತು ಹೆಚ್ಚು ಅನುಕೂಲಕರವಾಗಿರುತ್ತದೆ. ಸಿಪಿಪಿಎಸ್ ಅನುಷ್ಠಾನದ ನಂತರ ಪಿಂಚಣಿದಾರರು ಒಂದು ನಗರದಿಂದ ಮತ್ತೊಂದು ನಗರಕ್ಕೆ ಸ್ಥಳಾಂತರಗೊಂಡರೂ ಅಥವಾ ಬ್ಯಾಂಕ್ ಅಥವಾ ಶಾಖೆಯನ್ನು ಬದಲಾಯಿಸಿದರೂ ಪಿಂಚಣಿ ಪಾವತಿ ಆದೇಶವನ್ನು (ಪಿಪಿಒ) ಬದಲಾಯಿಸುವ ಅಗತ್ಯವಿಲ್ಲ. ಪಿಂಚಣಿದಾರರು ತಮ್ಮ ಪಿಂಚಣಿಯನ್ನು ದೇಶದಾದ್ಯಂತ ಯಾವ ಬ್ಯಾಂಕ್ ಶಾಖೆಯಿಂದ ಬೇಕಾದರೂ ಪಡೆಯಬಹುದು. ಇಪಿಎಫ್‌ಒ ಅಡಿಯಲ್ಲಿ, ಖಾಸಗಿ ಉದ್ಯೋಗದಲ್ಲಿರುವ EPF ಸದಸ್ಯರಿಗೆ ನೌಕರರ ಪಿಂಚಣಿ ಯೋಜನೆಯಡಿಯಲ್ಲಿ ಪಿಂಚಣಿ ನೀಡಲಾಗುತ್ತದೆ. ನೌಕರನು ತನ್ನ ನಿವೃತ್ತಿಯ ನಂತರ ಈ ಪಿಂಚಣಿಯನ್ನು ಪಡೆಯುತ್ತಾನೆ. ನಿವೃತ್ತಿಯ ಮೊದಲು ಕೆಲವು ಸಂದರ್ಭಗಳಲ್ಲಿ ನೌಕರರಿಗೆ ಪಿಂಚಣಿ ನೀಡಲಾಗುತ್ತದೆ. ನೌಕರರ ಭವಿಷ್ಯವನ್ನು ಭದ್ರಪಡಿಸಲು ಸರ್ಕಾರದಿಂದ ಈ ಪಿಂಚಣಿ ನೀಡಲಾಗುತ್ತದೆ.

ಇಪಿಎಸ್ ಪಿಂಚಣಿಗೆ ಅರ್ಹತೆ: ಇಪಿಎಸ್‌ಒ ಪಡೆಯಲು, ಉದ್ಯೋಗಿಗಳು ಇಪಿಎಫ್‌ಒ ಅಡಿಯಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಕನಿಷ್ಠ 10 ವರ್ಷಗಳವರೆಗೆ ಕೊಡುಗೆ ನೀಡಬೇಕು. ನಂತರ ಉದ್ಯೋಗಿಗೆ 58 ವರ್ಷ ವಯಸ್ಸಾದಾಗ ಪಿಂಚಣಿ ಪಡೆಯಲು ಪ್ರಾರಂಭಿಸುತ್ತಾನೆ. ಇದರ ಹೊರತಾಗಿ ಯಾವುದೇ ಕಾರಣದಿಂದ ನೌಕರನು ಅಂಗವಿಕಲನಾಗಿದ್ದರೆ ಅಥವಾ ಅವನ ಕೆಲಸವನ್ನು ಕೊನೆಗೊಳಿಸಿದರೆ, ಷರತ್ತುಗಳ ಪ್ರಕಾರ ಪಿಂಚಣಿ ನೀಡಲಾಗುತ್ತದೆ.

ಪಿಂಚಣಿದಾರರಿಗೆ ಬಿಗ್ ರಿಲೀಫ್: ಈ ಹೊಸ ಬದಲಾವಣೆಯು ಪಿಂಚಣಿದಾರರಿಗೆ ಹೆಚ್ಚಿನ ಸಮಾಧಾನ ತಂದಿದೆ. ಇದರಿಂದ ಪಿಂಚಣಿದಾರರಿಗೆ ಇನ್ನು ಮುಂದೆ ಪಿಂಚಣಿ ಪಡೆಯಲು ಯಾವುದೇ ತೊಂದರೆಯಾಗುವುದಿಲ್ಲ. ಸರಕಾರದ ಈ ನಡೆ ಇಪಿಎಫ್ ಸದಸ್ಯರಿಗೆ ಹಲವು ಸೌಲಭ್ಯಗಳನ್ನು ಒದಗಿಸುತ್ತದೆ.

ಹಾಸನದಲ್ಲಿ ಪ್ರೇಯಸಿಯಿಂದ ಚಾಕು ಇರಿತ, ಪ್ರಿಯಕರನ ಸ್ಥಿತಿ ಗಂಭೀರ

ಹಾಸನ, ಜ.1– ಪ್ರಿಯಕರನ ಮೇಲೆ ಮುನಿಸಿಕೊಂಡ ಪ್ರಿಯತಮೆ ಆತನಿಗೆ ಚಾಕುವಿನಿಂದ ಇರಿದಿದ್ದು, ಪ್ರಿಯಕರನ ಸ್ಥಿತಿ ಗಂಭೀರವಾಗಿದೆ.



ಮನುಕುಮಾರ್

ಇಲ್ಲಿನ ಬಿ.ಎಂ. ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಗೇಟ್‌ನಲ್ಲಿ ತಡರಾತ್ರಿ ಘಟನೆ ನಡೆದಿದೆ. ಮನುಕುಮಾರ್ (25) ಪ್ರೇಯಸಿಯಿಂದ ಚಾಕು ಇರಿತಕ್ಕೊಳಗಾದ ಪ್ರಿಯಕರ. ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹಾಸನ ತಾಲೂಕಿನ, ಎ.ಗುಡುಗನಹಳ್ಳಿ ಗ್ರಾಮದ ಮನುಕುಮಾರ್ ಹಾಗೂ ಭವಾನಿ ಜೊತೆಯಲ್ಲಿಯೇ ವಿದ್ಯಾಭ್ಯಾಸ ಮಾಡಿದ್ದರು. ಮನುಕುಮಾರ್ ಹಾಸನದಲ್ಲಿ ಹಾರ್ಡ್‌ವೇರ್ ಮತ್ತು ಪ್ಲೇವುಡ್ ಅಂಗಡಿ ಇಟ್ಟುಕೊಂಡಿದ್ದಾರೆ. ಪರಸ್ಪರ ಪ್ರೀತಿಸುತ್ತಿದ್ದ ಇಬ್ಬರೂ ಕೆಲ ದಿನಗಳಿಂದ ದೂರವಾಗಿದ್ದರು. ನಿನ್ನೆ ರಾತ್ರಿ ಹೊಸ ವರ್ಷಾಚರಣೆಗೆ ಸ್ನೇಹಿತರ ಜೊತೆ ಖಾಸಗಿ ಹೋಟೆಲ್‌ಗೆ ಮನುಕುಮಾರ್ ಬಂದಿದ್ದರು. ಈ ವೇಳೆ ಪದೇ ಪದೆ ಮನುಕುಮಾರ್‌ಗೆ ಫೋನ್ ಮಾಡುತ್ತಿದ್ದ ಭವಾನಿ, ಆತನನ್ನು ಹುಡುಕಿಕೊಂಡು ಹೋಟೆಲ್ ಬಳಿ ಬಂದಿದ್ದಾರೆ. ಅಷ್ಟರಲ್ಲಿ ಮನುಕುಮಾರ್ ಕೂಡ ಗೇಟ್ ಬಳಿ ಬಂದಿದ್ದಾರೆ. ಆಗ ಇಬ್ಬರ ನಡುವೆ ಜಗಳ ಶುರುವಾಗಿದೆ. ಜಗಳ ವಿಕೋಪಕ್ಕೆ ಹೋದಾಗ ಸ್ನೇಹಿತರು ಬಿಡಿಸಲು ಮುಂದಾಗಿದ್ದಾರೆ. ಸಿಟ್ಟಿಗೆದ್ದ ಭವಾನಿ, ಮನುಕುಮಾರ್‌ಗೆ ಚಾಕುವಿನಿಂದ ಇರಿದಿದ್ದಾಳೆ. ಕೂಡಲೇ ಸ್ನೇಹಿತರು ಆಸ್ಪತ್ರೆಗೆ ಸೇರಿಸಿದ್ದಾರೆ. ಜಿಲ್ಲಾಸ್ಪತ್ರೆಯ ಐಸಿಯುನಲ್ಲಿ ಚಿಕಿತ್ಸೆ ಮನುಕುಮಾರ್ ಚಿಕಿತ್ಸೆ ಪಡೆಯುತ್ತಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ, ಪರಿಶೀಲನೆ ನಡೆಸಿದ್ದಾರೆ. ಬಡಾವಣೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ರಿಮ್ಸ್ ಆಸ್ಪತ್ರೆಯಲ್ಲಿ ತಾಯಿ, ಮಗು ಸಾವು: ಬಾಣಂತಿಯರ ಸಾವಿನ ಸಂಖ್ಯೆ 11ಕ್ಕೆ ಏರಿಕೆ

ರಾಯಚೂರು, ಜ.1– ಹೊಸ ವರ್ಷದ ಮೊದಲ ದಿನವೇ ಬಾಣಂತಿ ಹಾಗೂ ಶಿಶು ಸಾವನ್ನಪ್ಪಿರುವ ಘಟನೆ ರಾಯಚೂರಿನ ರಿಮ್ಸ್ ಆಸ್ಪತ್ರೆಯಲ್ಲಿ ನಡೆದಿದೆ. ಮೃತ ಬಾಣಂತಿಯನ್ನು ದೇವದುರ್ಗ ತಾಲೂಕಿನ ಮಸೀದಪೂರ ಗ್ರಾಮದ ಶಿವಲಿಂಗಮ್ಮ (22) ಎಂದು ಗುರುತಿಸಲಾಗಿದೆ. ಕಳೆದ ನಾಲ್ಕು ತಿಂಗಳಲ್ಲಿ ಜಿಲ್ಲೆಯಲ್ಲಿ ನಡೆದ 11ನೇ ಬಾಣಂತಿ ಸಾವು ಇದಾಗಿದೆ. ಬಾಣಂತಿ ಸಾವಿಗೆ ಅಧಿಕ ರಕ್ತದೊತ್ತಡ ಹಾಗೂ ಆರೋಗ್ಯದಲ್ಲಾದ ಏರುಪೇರು ಕಾರಣ ಎಂದು ವೈದ್ಯರು ತಿಳಿಸಿದ್ದಾರೆ.

ಡಿ.27 ರಂದು ರಾಯಚೂರಿನ ರಿಮ್ಸ್ ಆಸ್ಪತ್ರೆಯಲ್ಲಿ ಸಿಸೇರಿಯನ್ ಹೆರಿಗೆಯಾಗಿತ್ತು. ಇಂದು (ಜ.1) ಫಲಕಾರಿಯಾಗದೇ ತಾಯಿ ಹಾಗೂ ಮಗು ಇಬ್ಬರು ಸಾವನ್ನಪ್ಪಿದ್ದಾರೆ. ಸಿಸೇರಿಯನ್ ಹೆರಿಗೆ ಬಳಿಕ ರಕ್ತಸ್ರಾವ, ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ ಬಾಣಂತಿ ಆರೋಗ್ಯದಲ್ಲಿ ಏರುಪೇರಾಗಿ ಸಾವನ್ನಪ್ಪಿದ್ದಾರೆ. ಜೊತೆಗೆ ಹುಟ್ಟಿದಾಗಿನಿಂದಲೂ ಇನ್ಫೆಕ್ಷನ್‌ಗೆ ಒಳಗಾಗಿದ್ದ ಶಿಶು ಕೂಡ ಕೊನೆಯುಸಿರೆಳೆದಿದೆ.

ಪತ್ನಿಯ ಕಿರುಕುಳ; ಹೇಮಾವತಿ ನದಿಗೆ ಹಾರಿ ಇಂಜಿನಿಯರ್ ಆತ್ಮಹತ್ಯೆ

ಹಾಸನ, ಜ.1– ಕೌಟುಂಬಿಕ ಕಲಹದಿಂದ ಬೇಸತ್ತು ಇಂಜಿನಿಯರ್ ಒಬ್ಬರು ಹೇಮಾವತಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹಾಸನದ ಶೆಟ್ಟಿಹಳ್ಳಿ ಗ್ರಾಮದಲ್ಲಿ ನಡೆದಿದೆ.



ಪ್ರಮೋದ್

ಹಾಸನದ ಇಂದಿರಾನಗರದ ನಿವಾಸಿ ಪ್ರಮೋದ್ (35) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ಪ್ರಮೋದ್ ಹಾಗೂ ಅವರ ಪತ್ನಿ ನಡುವೆ ಪದೇ ಪದೆ ಜಗಳವಾಗುತ್ತಿತ್ತು. ಆಕೆಯ ತಮ್ಮಂದಿರು ಅವರಿಗೆ ಕಿರುಕುಳ ನೀಡುತ್ತಿದ್ದರು, ಇದರಿಂದ ಬೇಸತ್ತು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಡಿ.29 ರಂದು ಸಂಜೆ ಪ್ರಮೋದ್ ಮನೆಯಲ್ಲಿಯೇ ಮೊಬೈಲ್ ಬಿಟ್ಟು ತೆರಳಿದ್ದರು. ಪ್ರಮೋದ್‌ಗಾಗಿ ಪೋಷಕರು ಹುಡುಕಾಟ ನಡೆಸಿದ್ದು, ನಂತರ ಕೆ.ಆರ್.ಪುರಂ ಪೊಲೀಸ್ ಠಾಣೆಗೆ ಕಾಣೆಯಾದ ಬಗ್ಗೆ ದೂರು ನೀಡಿದ್ದರು. ಅಂದು ರಾತ್ರಿ ಹೇಮಾವತಿ ನದಿಯ ಸೇತುವೆ ಬಳಿ ಪ್ರಮೋದ್ ಬೈಕ್ ಪತ್ತೆಯಾಗಿತ್ತು. ಅದನ್ನು ಕಂಡ ಸ್ಥಳೀಯರು ಪರಿಶೀಲನೆ ನಡೆಸಿದ ವೇಳೆ ಬೈಕ್‌ನಲ್ಲಿ ಬ್ಯಾಂಕ್‌ನ ಪಾಸ್‌ಬುಕ್‌ಗಳು ಪತ್ತೆಯಾಗಿದ್ದವು. ಪಾಸ್‌ಬುಕ್‌ನಲ್ಲಿದ್ದ ಫೋನ್ ನಂಬರ್‌ಗೆ ಕರೆ ಮಾಡಿದ ವೇಳೆ ಪ್ರಮೋದ್ ತಂದೆ ಕರೆ ಸ್ವೀಕರಿಸಿದ್ದು, ನದಿಯ ಬಳಿ ದ್ವಿಚಕ್ರ ವಾಹನ ನಿಂತಿರುವ ಬಗ್ಗೆ ಮಾಹಿತಿ ನೀಡಿದ್ದರು. ಡಿ.30 ರಿಂದ ಹೇಮಾವತಿ ನದಿಯಲ್ಲಿ ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಹುಡುಕಾಟ ನಡೆಸಿದ್ದು, ಬುಧವಾರ ಬೆಳಗ್ಗೆ ಪ್ರಮೋದ್ ಶವ ನದಿಯಲ್ಲಿ ಪತ್ತೆಯಾಗಿದೆ. ಸ್ಥಳಕ್ಕೆ ಆಲೂರು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಚಾಮಮ್ಮ ನಿಧನ



ಮೈಸೂರು, ಜ.1– ಮೈಸೂರು ವಿನಾಯಕನಗರ (ಪಡುವಾರಹಳ್ಳಿ)ದ 6ನೇ ಮುಖ್ಯರಸ್ತೆ ನಿವಾಸಿ ದಿವಂಗತ ಪಾಪಣ್ಣ ಅವರ ಪತ್ನಿ ಚಾಮಮ್ಮ (86) ಬುಧವಾರ ನಿಧನರಾದರು. ಮೃತರು, ಪುತ್ರರಾದ ಮಾದಪ್ಪ, ಬಸವರಾಜು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮೈಸೂರಿನ ಗೋಕುಲಂ ಚಿರಶಾಂತಿ ಧಾಮದಲ್ಲಿ ಗುರುವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.


ಕರ್ನಾಟಕ ಪ್ರದೇಶ ಕುರುಬರ
ಸಂಘದ ನಿರ್ದೇಶಕರಾದ
ಅಭಿಲಾಷ್
ರವರಿಗೆ
ಜನುಮದಿನದ ಶುಭಾಶಯಗಳು
ತಾಯಿ ಚಾಮುಂಡೇಶ್ವರಿ ಆಯಸ್ಸು
ಅಧಿಕಾರ ಕರುಣಿಸಲಿ ಎಂದು
ಹಾರೈಸುತ್ತೇವೆ
ಜೈ ಸ್ವಾಮಿ
ಕಾಂಗ್ರೆಸ್ ಮುಖಂಡರು,
ಕಾಳಿಸಿದ್ದನಹುಂಡಿ, ಚಾಮುಂಡೇಶ್ವರಿ
ವಿಧಾನಸಭಾ ಕ್ಷೇತ್ರ
ಶುಭಕೋರುವವರು
ಅಭಿಲಾಷ್ ಗೆಳೆಯರ ಬಳಗ
VISMAYA
ADVERTISERS
ರವಿ ಎನ್ ಗೌಡ
ಕಾಂಗ್ರೆಸ್ ಮುಖಂಡರು, ಮೆಲ್ಲಹಳ್ಳಿ,
ವರುಣಾ ವಿಧಾನ ಸಭಾ ಕ್ಷೇತ್ರ